69ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

ರಾಜ್ಯದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಒದಗಿಸದೇ ಇರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ

+ ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಉಪಾಧ್ಯಕ್ಷರೇ, ನಮ್ಮ ಮುಂದಿರತಕ್ಕ ವಿಷಯ, ಕರ್ನಾಟಕ ರಾಜ್ಯದಲ್ಲಿ ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್‌ನ್ನು ಉಚಿತವಾಗಿ ಒದಗಿಸತಕ್ಕಂಥ ಒಂದು ಕಾನೂನು ಈಗ ಜಾರಿಯಲ್ಲಿರುವುದರಿಂದ, ಸರಿಯಾಗಿ ವಿದ್ಯುತ್ ಸರಬರಾಜಾಗುತ್ತಾ ಇಲ್ಲ ಎನ್ನತಕ್ಕಂಥಾದ್ದು ಒಂದಾದರೆ, ಮತ್ತೊಂದು ವಿದ್ಯುಚ್ಛಕ್ತಿಯನ್ನು ಉಚಿತವಾಗಿ ಕೊಡತಕ್ಕ ವಿಚಾರದಲ್ಲಿ ಸರ್ಕಾರದ ನಿಲುವು ಮತ್ತು ಇದಕ್ಕೆ ಸಂಬಂಧಪಟ್ಟ ಹಲವಾರು ವಿವರಗಳನ್ನು ಆ ದಿನವೇ ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೆವು. ಮಾನ್ಯ ಸಭಾಧ್ಯಕ್ಷರು ಹೇಳಿದರು, ಇದು ಈಗ ಬೇಡ, ಎಲ್ಲಾ ರಾಜಕೀಯ ಪಕ್ಷಗಳವರೂ ಈ ಚರ್ಚೆಯಲ್ಲಿ ಭಾಗವಹಿಸಲು, ಇದರ ವಿಶಾಲತೆಯನ್ನು ಸ್ವಲ್ಪ ದೊಡ್ಡದಾಗಿಟ್ಟು, ಎಲ್ಲಾ ಮಾನ್ಯ ಸದಸ್ಯರೂ ಸಾಧ್ಯವಾದ ಮಟ್ಟಿಗೆ ಕೊನೆಯ ಪಕ್ಷ ಆಯಾ ಪಕ್ಷಗಳ ಪರವಾಗಿ ಮತ್ತು ಆಸ್ಥೆ ಇರತಕ್ಕಂಥ ಮಾನ್ಯ ಸದಸ್ಯರು ಭಾಗವಹಿಸಲಿ ಎಂಬ ಅಭಿಪ್ರಾಯವನ್ನು ಮಾನ್ಯ ಸಭಾಧ್ಯಕ್ಷರು ವ್ಯಕ್ತಪಡಿಸಿದ ಮೇಲೆ, ಅದಕ್ಕೆ ನಾವೆಲ್ಲರೂ ಸೇರಿ ಒಪ್ಪಿದ ಮೇಲೆ, ತಾವು ಇದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಇದಕ್ಕಾಗಿ, ತಮ್ಮನ್ನು ಅಭಿನಂದಿಸುತ್ತೇನೆ.

ಮಾನ್ಯ ಉಪಾಧ್ಯಕ್ಷರೇ, ಪ್ರಾಮುಖ್ಯ ಇರತಕ್ಕಂಥಾದ್ದು ಎರಡು ಮೂರು ವಿಷಯಗಳು ಈ ವಿಷಯದಲ್ಲಿ ಅಡಕವಾಗಿವೆ. ನಮ್ಮಲ್ಲಿ ಬೆಳೆಗಳನ್ನು ತೆಗೆಯತಕ್ಕಂಥ ಒಂದು ಪದ್ಧತಿ ಇದೆ. ನಾವು ಈ ವಿಷಯದ ಮೂಲಕ ಹೋಗತಕ್ಕಂಥ ಅವಶ್ಯಕತೆ ಬಹಳ ಇದೆಯೆಂದು ಭಾವಿಸಿದ್ದೇನೆ. ಮೊದಲನೆಯ ತಮಗೆಲ್ಲರಿಗೂ ಗೊತ್ತಿರುವಹಾಗೆ, ಕೃಷಿ ಆಧಾರಿತ ಆರ್ಥಿಕ ಪದ್ಧತಿ, ನಮ್ಮಂಥ ದೇಶದಲ್ಲಿ, ನಾನು ಇದನ್ನು ಆ ದಿವಸ ಪೂರ್ವ ಪೀಠಿಕೆಯಾಗಿ ಹೇಳುತ್ತಾ ಇದ್ದೆ. ನಮ್ಮಂಥ ದೇಶದಲ್ಲಿ ಅದು ಕರ್ನಾಟಕ ರಾಜ್ಯವಿರಬಹುದು, ಮತ್ತೊಂದು ಇರಬಹುದು, ಇವತ್ತು, ನಾವು ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕಂಥ ವಿಚಾರ ಮತ್ತು ಅದರ ಉದ್ಯೋಗದ ವಿಚಾರದ ಬಗ್ಗೆ ಹಲವಾರು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ಈಗ ತಾನೇ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ನಾವು ಆಂಧ್ರ ರಾಜ್ಯಕ್ಕೆ ವಿದ್ಯುಚ್ಛಕ್ತಿ ಕೊಡುವುದು ಮತ್ತು ತೆಗೆದುಕೊಳ್ಳುವುದು, ಕೆಲವೊಮ್ಮೆ ಕೇರಳಕ್ಕೆ ಕೊಡುವುದು ಮತ್ತು ಕೆಲವೊಮ್ಮೆ ತಮಿಳುನಾಡಿಗೆ ಕೊಡುವುದು. ಇದು ಇವತ್ತು ಇಲ್ಲದೇ ಇದ್ದರೂ, ಹಿಂದೆ ಕೂಡ ಚರ್ಚೆಗೆ ಬಂದಿದೆ. ಕೇಂದ್ರ ಸರ್ಕಾರದ ನೀತಿ, ನೆರೆ ಹೊರೆಯ ರಾಜ್ಯಗಳ ರೀತಿನೀತಿಗೆ ಸಂಬಂಧಪಟ್ಟಂತೆ, ಹೊಂದಿಕೊಂಡು ಹೋಗತಕ್ಕಂಥ ವಿಚಾರ ಕೂಡ ನಡೆದಿದೆ.

ವಿತಕ್ಕೆಂದರೆ, ಇವತ್ತು ರಾಮಗೊಂಡಂ ಇರಬಹುದು, ಮತ್ತೊಂದು ಇರಬಹುದು. ಯಾವುದೇ ವಿಷಯ ಚರ್ಚೆಗೆ ಬಂದರೂ ಕೂಡ, ನಾವು ವಿದ್ಯುತ್ ಉತ್ಪಾದನೆ ಮಾಡತಕ್ಕ ವಿಚಾರದಲ್ಲಿ ರಾಷ್ಟ್ರದಲ್ಲಿ ಒಟ್ಟು ಎಷ್ಟು, ಮೆಗಾವ್ಯಾಟ್ಸ್ ಬೇಡಿಕೆ ಇದೆ, ಇನ್ನೂ ಎಷ್ಟು ಬೇಕಾಗುತ್ತದೆ ಎನ್ನುವ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಆಯಾ ರಾಜ್ಯಸರ್ಕಾರಗಳಿಗೆ ಹೇಳುತ್ತಾರೆ. ಅದು ಯಾವುದೇ ಪಕ್ಷದ ಸರ್ಕಾರ ಇರಬಹುದು. ಸಂಬಂಧಪಟ್ಟಂಥ ಸಚಿವರ ಸಮ್ಮೇಳನ ಅಥವಾ ರಾಜ್ಯಸರ್ಕಾರದ ಪ್ರತಿನಿಧಿಗಳನ್ನು ಪದೇ ಪದೇ ಕರೆಯಿಸಿ ಚರ್ಚೆ ಮಾಡತಕ್ಕಂಥಾದ್ದು, ಅಧಿಕಾರಿಗಳ ಮಟ್ಟ, ಸಚಿವರುಗಳ ಮಟ್ಟ, ಮುಖ್ಯಮಂತ್ರಿಗಳ ಮಟ್ಟದಲ್ಲಿ ಕೆಲವೊಮ್ಮೆ ಪ್ರಧಾನಿಯವರೇ ಸ್ವತಃ ಈ ವಿಚಾರದಲ್ಲಿ ಭಾಗವಹಿಸಿರತಕ್ಕ ಸಂದರ್ಭಗಳೂ ಕೂಡ ಇವೆ. ಇದು ಬಹಳ

ಒಳ್ಳೆಯದು, ಆ ರೀತಿ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ನಮ್ಮ ಗಮನಕ್ಕೆ ಬಂದಿದೆ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕ ವಿಚಾರದಲ್ಲಿ ನಾವು ಬಹಳ ಹಿಂದೆ ಇದ್ದೇವೆ. ನಾವು ಪ್ರಪಂಚದ ಅನೇಕ ರಾಷ್ಟ್ರಗಳಿಗೆ ಹೋಲಿಸಿದಾಗ, ಎಲ್ಲಾ ರಾಷ್ಟ್ರಗಳೂ ಅಲ್ಲ, ಅನೇಕ ರಾಷ್ಟ್ರಗಳಿಗೆ ಹೋಲಿಸಿದಾಗ, ಇದರಲ್ಲಿ ಪ್ರಾಮುಖ್ಯವಾಗಿ 3-4 ರೀತಿಯ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ನಾವು ಕಾಣುತ್ತೇವೆ. ಒಂದು ಹೈಡ್ರೋ ಎಲೆಕ್ಟ್ರಿಕ್ ಜನರೇಷನ್, ಇದು ನೀರಿನ ಆಧಾರದ ಮೇಲೆ, ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತದೆ. ನನಗೆ ಗೊತ್ತಿರುವ ಹಾಗೆ, that is the cheapest in the whole of the world.

ಉದಾಹರಣೆಗೆ 8 SVHEP ಇದೆ. ಇಡೀ ಪ್ರಪಂಚದಲ್ಲಿ, ನೀರಿನಿಂದ ವಿದ್ಯುತ್ ಉತ್ಪಾದನೆ ಮಾಡುವ ಜಾಗಗಳು ಎಂದರೆ, ಶರಾವತಿ ವ್ಯಾಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇದೆ. ಮತ್ತು ಶಿವನ ಸಮುದ್ರ ಇತ್ಯಾದಿ ಇದೆ. ಇದು ಅತಿ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತದೆ. ಒಂದು ಕಾಲಕ್ಕೆ, ಒಂದು ಮೆಗಾವ್ಯಾಟ್ಸ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ, ಅತಿ ಕಡಿಮೆ ದರದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದ್ದನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ನಾನು ಸರ್ ಎಂ. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರನ್ನು ನೆನೆಸಿಕೊಳ್ಳುತ್ತೇನೆ. ಅವರು ಹೆಸರಾಂತ ಆಡಳಿತಗಾರರು ಮತ್ತು ಹೆಸರಾಂತ ಇಂಜಿನಿಯರು. ಆಗಿನ ರಾಜಮಹಾರಾಜರ ಕಾಲದಲ್ಲಿದ್ದಂಥ ಮಹಾನ್ ವ್ಯಕ್ತಿ ಇವತ್ತಿಗೂ ಕೂಡ ನಾವು ಅವರಿಗೆ ಅಪಾರವಾದ ಗೌರವವನ್ನು ಕೊಡುತ್ತೇವೆ. ಇವತ್ತು ಜೋಗ್ ಜಲಪಾತಕ್ಕೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕ ವಿಚಾರದಲ್ಲಿಯೇ ಆಗಲೀ ಅಥವಾ ಶಿವನ ಸಮುದ್ರದ ಬಗ್ಗೆಯಾಗಲೀ ನಾವು ಅವರನ್ನು ನೆನೆಸಿಕೊಳ್ಳದೆ, ಮುಂದಕ್ಕೆ ಯಾವುದೇ ವಿಚಾರವನ್ನು ಮಾತನಾಡತಕ್ಕ ಪದ್ಧತಿ ನಾವು ಇಟ್ಟಿಲ್ಲ, ನಾವು ಅವರಿಗೆ ಗೌರವ ಕೊಟ್ಟು, ಮುಂದಕ್ಕೆ ಹೋಗುತ್ತೇವೆ. ಏಕೆಂದರೆ, ಒಂದು ಯೋಜನೆಯನ್ನು ಹಾಕಿದರೆ, ಆಗಿನ ಅಖಂಡ ಮೈಸೂರು ರಾಜ್ಯ, ಈಗ ವಿಶಾಲ ಕರ್ನಾಟಕವಾಗಿದೆ. ಭಾಷಾವಾರು ಪ್ರಾಂತ ರಚನೆಯಾದ ಮೇಲೆ, ವಿಶಾಲವಾಯಿತು. ಡಿಮ್ಯಾಂಡ್ ಬಹಳ ಜಾಸ್ತಿಯಾಯಿತು. ಬಾಂಬೆ ಕರ್ನಾಟಕ ಏರಿಯಾ, ಹೈದರಾಬಾದ್ ಕರ್ನಾಟಕ ಏರಿಯಾ, ದಕ್ಷಿಣ ಕನ್ನಡ ಜಿಲ್ಲೆ ಇತ್ಯಾದಿ ಬೇರೆ ಬೇರೆ ಭಾಗಗಳು ಸೇರಿದವು. ನಾನು ಅದರ ವಿವರಗಳಿಗೆ ಹೋಗುವುದಿಲ್ಲ, ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ, ಆಗಿನ ಹಳೆಯ ಮೈಸೂರು ರಾಜ್ಯಕ್ಕೆ ಬೇಕಾದ ಒಟ್ಟು ಬೇಡಿಕೆ ಎಷ್ಟಿತ್ತು, ಅದನ್ನು ಗಮನದಲ್ಲಿಟ್ಟುಕೊಂಡು ಅವರು ಪ್ರಾರಂಭ ಮಾಡಿದರು. ನಿಜ ಹೇಳಬೇಕೆಂದರೆ, ಇವತ್ತಿಗೂ ಕೂಡ, ಹಳೆಯ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕ ಘಟಕ ಜೋಗ್‌ನಲ್ಲಿದೆ. ಅದಾದಮೇಲೆ, ಶರಾವತಿ ವ್ಯಾಲಿ ಹೈಡ್ರೋ ಎಲೆಕ್ಟ್ರಿಕ್, ಲಿಂಗನಮಕ್ಕಿ ಇತ್ಯಾದಿ ಪ್ರಾಜೆಕ್ಟ್ ಬಂದಮೇಲೆ, ಬಹಳ ದೊಡ್ಡ ಪ್ರಮಾಣದಲ್ಲಿ ಹೋಗಿದೆ. ನಮಗೆ ಗೊತ್ತಿರುವ ಹಾಗೆ, that is the biggest in the whole of Asia, ಎಂಬ ಮಾತನ್ನು ಕೇಳಿದ್ದೇನೆ. That is subject to correction.

ಇದಕ್ಕಿಂತ ದೊಡ್ಡದು ದೇಶದಲ್ಲಿ ಯಾವುದಾದರೂ ಬಂದಿದ್ದರೆ, ಅದನ್ನು ನಾನು ಹೇಳಲಾರೆ. ಏಷ್ಯಾದಲ್ಲಿ ಅಥವಾ ದೇಶದಲ್ಲಿ ಮತ್ತೊಂದು ಇಂಥಾದ್ದು ಇದ್ದರೆ, ಅದು ನನಗೆ ಗೊತ್ತಿಲ್ಲ, ಇತ್ತೀಚಿನ ವರದಿ ನನಗೆ ಸಿಕ್ಕಿಲ್ಲ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅತಿ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕ ವಿಚಾರ. ಆಗಿನ ಕಾಲದಲ್ಲಿ ರೈತರ ಪಂಪ್‌ಸೆಟ್ ಇರಬಹುದು, ಕುಡಿಯುವ ನೀರಿನ ಪ್ರಶ್ನೇ ಇರಬಹುದು. ದನಕರುಗಳು ಅಥವಾ ಜನ ಜಾನುವಾರುಗಳು ಉಪಯೋಗ ಮಾಡತತಕ್ಕಂಥಾದ್ದು. ಆಗ ಇವೆಲ್ಲಾ ಪಂಪ್‌ಸೆಟ್ ಆಧಾರದ ಮೇಲೆ, ನಾವು ನೀರಿನಿಂದ ವಿದ್ಯುಚ್ಛಕ್ತಿ ಪಡೆದು, ಬೆಳೆಗಳನ್ನು ಬೆಳೆಯುವುದಕ್ಕೆ ಉಪಯೋಗ ಮಾಡುವುಂಥದ್ದು ಮತ್ತು ಈಗಿರತಕ್ಕ ಕೃಷಿ ವಿಧಾನಗಳು ಆಗೆಲ್ಲಾ ಇರಲಿಲ್ಲ,

12.10 ಪಿ.ಎಂ.

ತಮಗೆ ಗೊತ್ತಿರುವ ಹಾಗೆ ಮಳೆಹೆಚ್ಚಾಗಿ ಬೀಳುತ್ತಾ ಇತ್ತು. ಜನರು ಅಧವ ಮೇಲೆಯೇ ಭತ್ತ ರಾಗಿ ಜೋಳ ಹತ್ತಿ ಶೇಂಗಾ ಇತ್ಯಾದಿ ದವಸಧಾನ್ಯಗಳು ಮತ್ತು ಬೇಳೆಕಾಳುಗಳನ್ನು ಬೆಳೆಯಯುತ್ತಿದ್ದನ್ನು ನಾವೆಲ್ಲಾ ಕಾಣುತ್ತಿದ್ದೆವು. ಮಾನ್ಯ ಸಭಾಧ್ಯಕ್ಷರೇ, ಕಾಲ ಬದಲಾವಣೆ ಆದಾಗ ದಶಕಗಳು ಉರುಳಿ ಬಹಳಷ್ಟು ಬದಲುವಣೆಗಳನ್ನು ನಾವು ಈ ಬೆಳೆ ಪದ್ಧತಿಯಲ್ಲಿ ಕಾಣುತ್ತೇವೆ. ಹೆಚ್ಚಾಗಿ ವಿದ್ಯುತ್‌ನ ಆಧಾರದ ಮೇಲೆ ಬೆಳೆ ತೆಗೆಯತಕ್ಕಂಥಾದ್ದು ನಮ್ಮ ಆಶಾದಾಯಕ ಪ್ರಗತಿಯನ್ನು ಭವಿಷ್ಯದ ಬಗ್ಗೆ ರೂಪಿಸತಕ್ಕಂಥಾದ್ದು ಯಾರ‍್ಯಾರು ಆರ್ಥಿಕ ಪ್ರಗತಿಯ ಬಗ್ಗೆ ಗಮನ ಕೊಡಾತ್ತಾರೆ. economic growth of the State and ultimately economic growth at the national level

ಯಾರು ಗಮನ ಕೊಡುತ್ತಾರೆ ಅವರೆತ್ತರೂ ಕೂಡಿ ಗಮನವನ್ನು ರಾಷ್ಟ್ರ ಮಟ್ಟದಲ್ಲಿ ಮತ್ತು ಆಯಾಯಾ ರಾಜ್ಯಮಟ್ಟದಲ್ಲಿ ದರಿಸತಕ್ಕಂಥಾದನ್ನು ನಾವೆಲ್ಲಾ ಕಾಣುತ್ತೇವೆ. ಜಲವಿದ್ಯುತ್ ಉತ್ಪಾದನೆ ಮಾಡತಕ್ಕಂಥಾದ್ದು ಪರ್ ಮೆಗಾವಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು 3ಕೋಟಿ ರೂಪಾಯಿಗಳು ಆಗ ಇದ್ದರೆ ಅದು ಈಗ ವ್ಯತ್ಯಾಸ ಆಗಿ 1 ಕೋಟಿ ರೂಪಾಯಿಗಳು ಧಾಟಿ ಹೋಗಿದೆ ಎನ್ನತಕ್ಕಂಥ ಒಂದು ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಸಬ್ಜೆಕ್ಟ್ ಟು ವೆರಿಫಿಕೇಷನ್ ಅದು 4 ಅಥವಾ 5 ಕೋಟಿ ರೂಪಾಯಿಗಳಿಗೆ ಹೋಗಿಬಿಡುತ್ತದೆ. ಅದರ ಖರ್ಚು ಇರಬಹುದು cost of production,cost of generation the power per megawatt ಅದು ಜಾಸ್ತಿ ಆಗುತ್ತಾ ಹೋಗುತ್ತದೆ. ಈಗ ಮಳೆ ಬೀಳತಕ್ಕಂಥ ಪ್ರಮಾಣ ಕೂಡ ಬಹಳ ಕಡಿಮೆ ಆಗಿದೆ. ಅದು ಪ್ರಪಂಚದ ಒಟ್ಟಾರೆ ಲೆಕ್ಕದಲ್ಲಿ ನಾವು ಲೆಕ್ಕ ಹಾಕಿದರೂ ಕೂಡ ಪ್ರಮಾಣ ಕಡಿಮೆ ಆಗುವುದರಿಂದ ನಾವೇನು ಹೈಡ್ರೋ ಎಲೆಕ್ಟ್ರಿಕ್ ಜನರೇಷನ್ ಶಿವನ ಸಮುದ್ರ ಇವನ್ನೆಲ್ಲಾ ನಾವು ಇಟ್ಟುಕೊಂಡಿದ್ದೇವೆ ಇದರ ಮೇಲೆ ಇದೇ ಒಂದು ಆಧಾರದ ಮೇಲೆ ನಿಲ್ಲಬೇಕಾಗಿದೆ. ಇದನ್ನೇ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಅಲ್ಮಟ್ಟಿ -ಅದು ಇರಗೇಷನ್ ಪ್ರಾಜೆಕ್ಟ್ ಆದರೂ ಕೂಡ, ಅಲ್ಮಟ್ಟಿಯಲ್ಲೂ ಕೂಡ ನ್ವು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕಂಥುದ್ದು. ಭದ್ರಾ ತೆಗೆದುಕೊಳ್ಳೋಣ, ಅದು ನೀರಾವರಿ ಯೋಜನೆ. ಅಲ್ಲಿ ನೀರು ಹರಿದು ಹೋಗಬೇಕಾದರೆ ವಿದ್ಯುಚ್ಛಕ್ತಿ ಕೆಲವು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕಂಥ ವಿಚಾರ ತುಂಗಭದ್ರಾ ಕೂಡ ಅಷ್ಟೇ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ನಾವು ಆದಷ್ಟು ಮಟ್ಟಿಗೆ ಅಲ್ಲಲ್ಲಿ ಘಟಕಗಳನ್ನು ಇಟ್ಟುಕೊಂದ್ದೇವೆ. ಇವತ್ತು ತುಂಗಭದ್ರಾ ಹಾಗೆ ಭದ್ರಾ ತೆಗೆದುಕೊಂಡೆ ನಾನು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ

ಬಲದಂಡೆಯ ನಾಲಾ ಒಡೆದು ಹೋಯಿತು. ಆಗ ನಾನು ಪರಿಣಿತರ ಅಭಿಪ್ರಾಯವನ್ನು ತೆಗೆದುಕೊಂಡೆ, ಆಗ ಏನಾಯಿತು ಅಲ್ಲಿ ಬೆಳೆದು ನಿಂತಿರತಕ್ಕಂಥ ಕೋಟ್ಯಾಂತರ ರೂಪಾಯಿಗಳ ಬೆಳೆ ಹರಿಹರ, ದಾವಣಗೆರೆ ನಮ್ಮ ಶಿವಮೊಗ್ಗ ಜಿಲ್ಲೆ ಇರಬಹುದು ಚಿತ್ರದುರ್ಗ ಜಿಲ್ಲೆ ಇರಬಹುದು ಹರಪನಹಳ್ಳಿ ಭಾಗ ಯಾವುದೇ ಇರಬಹುದು ಬೆಳೆ ಹಾಳಾಗುವುದು ಅಷ್ಟೇ ಅಲ್ಲ ವಿದ್ಯುಚ್ಛಕ್ತಿ ಘಟಕ ಕೂಡ ಒಂದು ಅಲ್ಲಿದೆ ಎನ್ನತಕ್ಕಂಥಾದನ್ನು ನಾವು ಮರೆಯಬಾರದು. ಆಗ ಭಾರೀ ನೀರಾವರಿ ಸಚಿವರಾಗಿದ್ದ ಮಲ್ಲಾರಿ ಗೌಡರನ್ನು ನಾನು ಪದೇ ಪದೇ ಕಳುಹಿಸಿಕೊಟ್ಟೆ. ಅಲ್ಲಿಮೇಟಲಿ ನಾನೂ ಕೂಡ ಅಲ್ಲಿಗೆ ಹೋರಿ ಬಂದೆ. ಅದು ಹೋಗಿ ನೋಡಿದರೆ ಯಾರಿಗುದರೂ ಕೂಡ ಮನಸ್ಸಿಗೆ ಬಹಳ ನೋವಾಗುವಂಥಾದ್ದು. ನೀರಾವರಿ ಪ್ರದೇಶ ಹಾಳಾಗಿರುವುದು ಅಲ್ಲದೆ ಅಲ್ಲಿರತಕ್ಕಂಥ ವಿದ್ಯುಚ್ಛಕ್ತಿ ಘಟಕವೂ ಕೂಡ ನಿಂತು ಹೋಗಿತ್ತು. ಆಗ ನಾನು ಏನು ಮಾಡಿದೆ ಅಂದರೆ ಯಾರಾದರೂ ಪ್ರೈವೇಟ್ ಕಂಪನಿಯವರು ಮುಂದೆ

ಬರುತ್ತೀರಾ ಎಂದು ಕೇಳಿದೆ. ಅವರು ಯಾರೂ ಕೂಡ ಧೈರ್ಯ ಮಾಡಲಿಲ್ಲ, ಆ ಕಾಲದಲ್ಲಿ ನಮ್ಮ ಇಂಜನೀರ್ಸ್‌ನ್ನು ಅಭಿನಂದಿಸಬೇಕು ಷಡ್ಯೂಲ್ ನಂಬರ್ ಫೋರ್ ಏನಿದೆ ಅದನ್ನೇ ನಾವು ಕಟ್ ಮಾಡಿಸಿ ಬಲದಂಡ್ ಭಾಗ ಏನು ಒಡೆದಿತ್ತು ಆ ಭಾಗವನ್ನು ಬಿಟ್ಟು ನೀರನ್ನು ನೇರವಾಗಿ ಮುಂದೆ ತೆಗೆದುಕೊಂಡು ಹೋಗಿ ಕನೆಕ್ಷನ್ ಕೊಡಿಸಿಬಿಟ್ಟೆ. ಬೆಳೆದು ನಿಂತಿರತಕ್ಕಂಥ ನೂರಾರು ಕೋಟಿ ರೂಪಾಯಿಗಳ ಬೆಳೆಯನ್ನು ಉಳಿಸಿದ್ದೇವೆ. ಅದೂ ತಮಗೂ ಕೂಡ ಗೊತ್ತಿರತಕ್ಕಂಥಾದ್ದು. ಅದು ತಮ್ಮ ತಾಲ್ಲೂಕಿಗೂ ಕೂಡ ಬರುತ್ತದೆ. ಚನ್ನಗಿರಿ ಇತ್ಯಾದಿ ಭಾಗಗಳೂ ಕೂಡ ಬರುತ್ತದೆ. ನೀರಾವರಿ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲೆಲ್ಲಿ ನಾವು ನೀರಾವರಿ ಯೋಜನೆಗಳನ್ನು ಮಾಡಿದ್ದೇನೆ. ಅಲ್ಲಿ ಆದಷ್ಟು ಮಟ್ಟಿಗೆ ಅಲ್ಲಿ ಹರಿದು ಹೋಗತಕ್ಕಂಥ ನೀರಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ನಾವೆಲ್ಲಾ ಇಟ್ಟುಕೊಂಡಿದ್ದೇವೆ, ಶರಾವತಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಮತ್ತು ಶಿವನಸಮುದ್ರ ಇವೆಲ್ಲಾ ಪಕ್ಕ ವಿದ್ಯುಚ್ಛಕ್ತಿ ಘಟಕಗಳೇ. ಇವತ್ತು ರನ್‌ಆಫ್ ದಿ ರಿವರ್ ಶಿವನಸಮುದ್ರ- ನಾನು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ನನಗೆ ನೆನಪು ಇದ್ದಂತೆ ನಾನು ರೋಮ್‌ಗೆ ಹೋಗಿ a company called CDN DO TE of Italy ರವರ ಜೊತೆ ಎಂ.ಓ.ಯು ರುಜು ಮಾಡಿ ಬಂದೆ. ನಾನು ಅಧಿಕಾರಿಗಳ ನಿಯೋಗವನ್ನು ಕೂಡ ಆ ಕಾಲದಲ್ಲಿ ತೆಗೆದುಕೊಂಡು ಹೋಗಿದ್ದೆ. ಅವೆಲ್ಲಾ ತಾವು ನೋಡೀದ್ದೀರಿ ತಮಗೆಲ್ಲಾ ಗೊತ್ತಿರತಕ್ಕಂಥಾದ್ದು. ಅಮೇರಿಕಾದಲ್ಲಿ 6-7ಕ್ಕೆ ನಾವು ರುಜು ಮಾಡಿದ್ದೇವೆ, ಲಂಡನ್‌ನಲ್ಲಿ ಒಂದು ಆಮೇಲೆ ಇಟಲಿಯಲ್ಲಿ ಒಂದು ನನಗೆ ಗೊತ್ತಿರುವಂತೆ. ಅದು ಅಲಟ್ಟಿ ತೆಗೆದುಕೊಳ್ಳುತ್ತಾರೋ ಶಿವನಸಮುದ್ರ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ, ಏಕೆಂದರೆ ಅಗ್ರಿಮೆಂಟ್ ಆಗುವಂತೆ ಕಾಲದಲ್ಲಿ ಕೆಲವೊಂದು ವ್ಯತ್ಯಾಸಗಳು ಕೂಡ ಬರುತ್ತವೆ

ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆ ಅಂದರೆ ಜಲವಿದ್ಯುತ್ ಯೋಜನೆಗಳನ್ನು ನಾವು ಮಾಡಿದಾಗ ಉತ್ಪಾದನಾ ಖರ್ಚು ಏನು ಇರುತ್ತದೆಯೆಲ್ಲಾ ಪರ್ ಮೆಗಾವಾಟ್ ಅದು ಕಡಿಮೆ ಇರುತ್ತದೆ. ಕೋಲ್ ಬೇಸ್ಡ್ ಪವರ್ ಜನರೇಷನ್ ಇದು ಏನಿದೆ ಇದರ ಕಾಸ್ಟ ಜಾಸ್ತಿಯಾಗುತ್ತ ದೆ. ಕೇಬಲ್ ಇವೆಲ್ಲಾ ಖರ್ಚು ಬಹಳ ಜಾಸ್ತಿ ಬರುತ್ತದೆ ಪರ್ ಮೇಗಾವಾಟ್ಸ್‌ಗೆ. ಅದಕ್ಕಾಗಿಯೇ ಇವತ್ತು ನಾವು ರಾಯಚೂರಿನಲ್ಲಿರತಕ್ಕ 4 ಥರ್ಮಲ್ ಪ್ಲಾಂಟ್ಸ್ ಮಾಡಿದ್ದೇವೆ. 5-6 ನಾವು ತೆಗೆದುಕೊಂಡು ಹೋಗಲೇಕಾದರೆ ನಾವು ಕೋಲ್ ಮೇಲೆ ನಿಂತುಕೊಳ್ಳಬೇಕು. ಉದಾಹರಣೆಗೆ ನಾವು ಗರಾನಿಯಲ್ಲಿರತಕ್ಕಂಥ ಕೋಲ್‌ತೆಗೆದುಕೊಂಡು ತಾವು ವಿದ್ಯುತ್ ಉತ್ಪಾದನೆ ಮಾಡಲು ಹೋದರೆ ತಮಗೆಲ್ಲಾ ಗೊತ್ತಿರುವ ಹಾಗೆ ಅದು ಆಷ್ ಕಂಟೆಂಟ್ ಪರ್ಸೆಂಟ್ಯೇಜ್ ಜಾಸ್ತಿ ಇದೆ. ನಾವು ಅದನ್ನೇ ತೆಗೆದುಕೊಂಡು ಬಂದು ಉತ್ಪಾದನೆ ಮಾಡುವುದಕ್ಕೆ ಹೋದರೆ ಅಲ್ಲಿ ನಾವು ಒಟ್ಟು ಪವರ್ ಜನರೇಷನ್ ಎಷ್ಟು ಮಾಡಬೇಕಾಗುತ್ತದೆಯೋ ಅಷ್ಟು ಮಾಡುವುದಕ್ಕೆ ಆಗುವುದಿಲ್ಲ ಖರ್ಚು ಜಾಸ್ತಿಬರುತ್ತದೆ. ಆಷ್‌ವಾಷ್ ಮಾಡಿ ಮತ್ತೊಂದು ಮಾಡುವುದಕ್ಕೂ ಕೂಡ ಹಣ ಖರ್ಚಾಗುತ್ತದೆ. It is an added expenditure that will add for the total cost of per megawatt of power ಅದು ಕೂಡ ಜಾಸ್ತಿ ಆಗುತ್ತದೆ. ನಾನು ಈ ಮಾತನ್ನು ವಿವರವಾಗಿ ಹೇಳುವುದಕ್ಕೆ ಒಂದು ಕಾರಣ ಇದೆ ನಾನು ಆನಂತರ ಬರುತ್ತೇನೆ. ಮಾನ್ಯ ಸಭಾಧ್ಯಕ್ಷರೇ ನಾನು ಹೇಳತಕ್ಕಂಥಾದ್ದು ಇಷ್ಟೇ. ನಾನು ಅಧಿಕಾರದಲ್ಲಿ ಇದ್ದಂಥ ಕಾಲದಲ್ಲಿ ಒಂದು ಮಿಲಿಯನ್ ಟನ್ ಕೋಲ್ ಇಂಪೋರ್ಟ್ ಮಾಡಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಆಸ್ಟ್ರೇಲಿಯಾ ಮತ್ತು ಒಂದು ಜಾಯಿಂಟ್ ವೈನಾ ಕಂಪನಿಗಳು ಮುಂದೆ ಬಂದವು. ನಾನು ಅಧಿಕಾರ ಬಿಡುವುದಕ್ಕಿಂತ 10-15 ದಿವಸ ಅಥವಾ ತಿಂಗಳು ಮುಂದೆ ಎಂದು ಕಾಣಿಸುತ್ತದೆ. ಆ ಕಾಲದಲ್ಲಿ ನಾವು ಒಂದು

ಎಂ. ಓ. ಯು. ಗೆ ಸಹಿ ಮಾಡಿದ್ದೇನೆ. ಅದನ್ನು ಬೇಕಾದರೆ ತಾವು ತರಿಸಿ ನೋಡಬಹುದು. ಹಿಂದೆ ನಾನು ತಮ್ಮಲ್ಲಿ ಖಾಸಗಿಯಾಗಿ ಮಾತನಾಡುವಂಥ ಸಂದರ್ಭದಲ್ಲಿ ಈ ವಿಚಾರ ಕೂಡ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಒಂದು ಮಿಲಿಯನ್ ಟನ್ ಕೋಲ್ ಅನ್ನು ನಾವು ಆಸ್ಟ್ರೇಲಿಯಾದಿಂದ ಇಂಪೋರ್ಟ್ ಮಾಡಿಕೊಳ್ಳಬೇಕಾದರೆ ನಮ್ಮ ಮೇಲೆ ಇಂಪೋರ್ಟ್ ಡ್ಯೂಟಿ ಏನು ಇದೆ, ಅದು ಬಹಳ ಜಾಸ್ತಿಯಾಗಿಬಿಡುತ್ತದೆ, ಅದರಿಂದ ಖರ್ಚು ಜಾಸ್ತಿ ಬರುತ್ತದೆ. ಆಗ ನಾನು ಪ್ರಧಾನ ಮಂತ್ರಿ ಪಿ.ವಿ. ನರಸಿಂಹರಾವ್ ರವರ ಜೊತೆಯಲ್ಲಿ ನ್ನು ಮುಖ್ಯಮಂತ್ರಿಯಾಗಿದ್ದಾಗ ಮಾತನಾಡಿ ಇಂಪೋರ್ಟ್ ಡ್ಯೂಟಿ ಏನಿದೆ ಅದನ್ನು ರಿಯಾಯಿತಿ ಮಾಡಬೇಕೆನ್ನುವ ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ತಂದೆ. ಆ ಸಂದರ್ಭದಲ್ಲಿ ತಮಿಳುನಾಡಿನ ಮುಖ್ಯಮಂತ್ರಿಯಾಗಿರುವ ಶ್ರೀಮತಿ ಜಯಲಲಿತಾರವರು ಕೂಡ ಮಾತನಾಡಿದರು. ಅವರೂ ಕೂಡ ಒತ್ತಾಯ ತಂದರು. ಕೇಂದ್ರ ಸರ್ಕಾರದ ಮೇಲೆ ಒಂದು ಮಿಲಿಯನ್ ಟನ್ ಕೋಲ್ ಇಂಪೋರ್ಟ ಮಾಡಿಕೊಳ್ಳುವುದಕ್ಕಾಗಿ ಇಂಪೋರ್ಟ್ ಡ್ಯೂಟಿ ಏನಿದೆ ಅದು ರಾಜ್ಯ ಸರ್ಕಾರದ ಮೇಲೆ ಬಹಳ ದೊಡ್ಡ ಹೊರೆ ಬೀಳುತ್ತದೆ.

ಇನ್ನು ಕೊಡಸಳ್ಳಿ, ಕದ್ರಾ ಈ ಎಲ್ಲಾ ಯೋಜನೆಗಳು ಬರುತ್ತವೆ. ಇವತ್ತು ನಾವು ಮುಗಿಲನ್ನು ನೋಡಿ ಡ್ಯಾವರ್ ಕಡೆ ನೋಡಬೇಕಾಗುತ್ತದೆ. ಡ್ಯಾವರ್‌ಗಳು ತುಂಬಲಿಲ್ಲವೆಂದರೆ ವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆಯಾಗಿ ಕೈಗಾರಿಕಾ ಕ್ಷೇತ್ರ ಮತ್ತು ಕೃಷಿ ಕ್ಷೇತ್ರಕ್ಕೆ ಸಾಕಷ್ಟು ಪೆಟ್ಟು ಬೀಳುತ್ತದೆ. ಈ ಶತಮಾನದ ಅಂತ್ಯದ ವೇಳೆಗೆ ಕರ್ನಾಟಕದ ವಿದ್ಯುಚ್ಛಕ್ತಿ ಬೇಡಿಕೆ ಸುಮಾರು ಏಳು ಸಾವಿರ ಚಿಲ್ಲರೆ ಮೆಗಾವಾಟ್‌ಗೆ ಬರಬಹುದು. ಇದಕ್ಕಾಗಿ 3ಸಾವಿರ ಮೆಗಾವಾಟ್ ವಿದ್ಯುಚ್ಛಕ್ತಿ ಜನರೇಷನ್ ಸುಮಾರು 6 ಸಾವಿರ, 7ಸಾವಿರ ಕೋಟಿ ರೂಪಾಯಿಗಳ ಫಾರಿನ ಇನ್‌ವೆಸ್ಟಮೆಂಟ್ ನಮ್ಮ ರಾಜ್ಯದಲ್ಲ ಹೂಡಲು ನಾನು ವೆಂ.ಓ.ಯು.ಗೆ ಸೈನ್ ಮಾಡಿದ್ದೇನೆ. ಇದರ ಎಸ್ಕಲೇಷನ್ ಕಾಸ್ಟ್ ಜಾಸ್ತಿಯಾಗುತ್ತಾ ಹೋಗುತ್ತಿರುತ್ತದೆ. ಯಾವಾಗ ಮಳೆ ಫೇಲ್ ಆಗುತ್ತದೆ, ಆವಾಗ ಜನ, ಜಾನುವಾರುಗಳಿಗೆ ಕುದಿಯುವ ನೀರು ಸಿಗುವುದಿಲ್ಲ, ಆಹಾರ ಇತ್ಪಾದನೆಗೂ ಪೆಟ್ಟು ಬೀಳುವುದನ್ನು ನಾವು ಕಾಣುತ್ತೇವೆ. ಅದಕ್ಕಾಗಿ ಕೋಲ್ ಬೇಸ್‌ಡೀಸಲ್ ಬೇಸ್ಡ್ ಎಲೆಕ್ಟ್ರಿಸಿಟಿ ಜನರೇಟ್ ಮಾಡದೇ ಇದ್ದರೆ ನಮಗೆ ಬೇರೆ ದಾರಿಯೇ ಇಲ್ಲ. ಇದನ್ನು ಆಲ್ಟರನೇಟಿವ್ ಅಂದುಕೊಳ್ಳದೆ ಅಡಿಷನಲ್ ಆಗಿಯೇ ಇಟ್ಟುಕೊಳ್ಳಬೇಕಾದ ಪರಿಸ್ಥಿತಿ ಇದೆ. ಅದಕ್ಕಾಗಿ ನಮ್ಮ ರಾಜ್ಯ ಸರ್ಕಾರದವರು ಪವರ್ ಜನರೇಷನ್ ಮಾಡುವುದಕ್ಕೆ ಬೇಕಾದ ಬಂಡವಾಳವನ್ನು ಹೂಡುವುದಕ್ಕೆ ಹೆದರಬಾರದು. ನಮ್ಮ ಕರ್ನಾಟಕ ರಾಜ್ಯದ ಭವಿಷ್ಯದ ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ವಿದ್ಯುಚ್ಛಕ್ತಿ ಬಹಳ ಅವಶ್ಯಕವಾಗಿದೆ. ಇವತ್ತು 7 ಸಾವಿರ ಮೆಗಾವಾಟ್ ಬೇಕಾಗಬಹುದು ನಾಳೆ 10 ಸಾವಿರ ಮೆಗಾವಾಟ್ ಬೇಕಾಗುತ್ತದೆಯೋ? ಆದ್ದರಿಂದ ನೀವು ಧೈರ್ಯ ಮಾಡಿ ಬಂಡವಾಳವನ್ನು ಹೂಡಬೇಕು. ಇದಕ್ಕಾಗಿ ನಾವು ಫಕ್ಷಾತೀತವಾಗಿ ನಿಮಗೆ ಬೆಂಬಲ ಕೊಡುತ್ತೇವೆ. ನಾನು ಮಾಡಿದ್ದನ್ನು ತಾವು ಮುಂದುವರಿಸಿಕೊಂಡು ಹೋಗಿ ಎಂದು ಹೇಳಿ ನಾನು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿಲ್ಲ. ನಮ್ಮ ಕಾಲದಲ್ಲಿ ನಾವು ಅಷ್ಟು ಮಾಡಿದ್ದೇವೆ. Because of liberalised policy announced by Government of India that is why we went to those three countries America, England and Italy. ಇನ್ನೂ ಯಾರು ಯಾರು ಫಾರಿನ್ ಇನ್‌ವೆಸ್ಟರ್ ಬರುತ್ತಾರೋ ಅವರ ಜೊತೆಯಲ್ಲಿ ನೀವು ವ್ಯವಹಾರ ಮಾಡಿ. ಈಗ ಕೊಜೆಂಟ್ರಿಕ್ಸ್ ಆಫ್ ಅಮೆರಿಕಾ, ಇದರಲ್ಲಿ 1ಸಾವಿರ ಮೆಗಾವಾಟ್ ವಿದ್ಯುಚ್ಛಕ್ತಿ ಉತ್ಪಾದನೆಗೆ ತಾವು ಸಹಿ ಮಾಡಿದ್ದೀರಿ. ಆದರೆ ಪವರ್ ಪರ್ಚೇಸ್ ಅಗ್ರಿಮೆಂಟ್ ವಿಚಾರದಲ್ಲಿ ಅದು ಗೌರ್ನಮೆಂಟ್ ಆಫ್ ಇಂಡಿಯಾಗೆ ಹೋಗಿದ್ದು ಅದು ಇನ್ನೂ ಬಂದೇ ಇಲ್ಲ. ಏನಾದರೂ ಅಲ್ಲಿಗೆ

ಹೋದರೆ ಅವರು ಇಟ್ಟುಕೊಂಡು ಕುಳಿತುಕೊಳ್ಳುವ ಒಂದೇ ಕೆಟ್ಟ ಹ್ಯಾಬಿಟ್ ಅವರಿಗಿದೆ. ನಾವು ಹೋಗಿ ಅದನ್ನು ಎಬ್ಬಿಸುವವರೆಗೂ ಅದು ಏಳುವ ಸರ್ಕಾರದ ಪರವಾಗಿ ಉಳಿದಿಲ್ಲ. ಪವರ್ ಪರ್ಚೇಸ್ ಅಗ್ರಿಮೆಂಟ್ ವಿಚಾರದಲ್ಲಿ ನೀವು ಹೋಗಿ ಕ್ಲಿಯರೆನ್ಸ್ ತೆಗೆದುಕೊಳ್ಳದಿದ್ದರೆ ಟೈಮ್‌ಮುಂದೆ

ಹೋಗಿಬಿಡುತ್ತದೆ. ಇದರಲ್ಲಿ ಫಾರಿನ್ ಕಂಪನಿಯವರು ಬಹಳ ಸ್ಟ್ರಿಕ್ಟ್ ಆಗಿರುತ್ತಾರೆ. ಅವರು ಬೆಂಗಳೂರಿಗೆ ಬರುತ್ತಾರೆ, ಅವರು ಹೋಗಬೇಕಾದಾಗ ನಮ್ಮ ರೋಡ್‌ನಲ್ಲಿ ಅವರು ಹೋಗುವುದೇ ಇಲ್ಲ. ನಾವು ನ್ಯಾಷನಲ್ ಹೈವೇ ನಂಬರ್ 4 ಎಂದು ಕರೆದರೆ, ಅವರ ದೇಶದ ನ್ಯಾಷನಲ್ ಹೈವೇಗೂ ನಮ್ಮ ದೇಶದ ಹೈವೇಗೂ ಸಂಬಂಧವೇ ಇರುವುದಿಲ್ಲ. ಅವರು ಫೋರ್ ವೇ ಟ್ರಾಯಕ್, ಸಿಕ್ಸ್‌ವೇ ಟ್ರ್ಯಾಕ್, ಎಟ್‌ವೇ ಟ್ರ್ಯಾಕ್ ಎಂದು ಮಾಡಿದ್ದಾರೆ. ಅಲ್ಲಿರುವ ಫೋರ್ ವೇ ಟ್ರ್ಯಾಕ್‌ನಲ್ಲಿ ಒಂದು ವೇ ಇರುತ್ತದಲ್ಲಾ ಅದೇ ನಮ್ಮ ದೇಶದಲ್ಲಿ ನ್ಯಾಷನಲ್ ಹೈವೇ; ಇದೇ ನಾನು ಕಣ್ಣಾರೆ ಕಂಡಂಥ ವಿಚಾರ. ಅನೇಕ ಮಾನ್ಯ ಸದಸ್ಯರು ಹೊರ ದೇಶಗಳಿಗೆ ಹೋಗಿ ಬಂದಿರತಕ್ಕಂಥವರ ಅನುಭವದಲ್ಲೂ ಇದು ಇರಬಹುದು. ಅದಕ್ಕಾಗಿ ಅವರು ನಮ್ಮಲ್ಲಿಗೆ ಬಂದಾಗ ಅವರನ್ನು ಆಲಮಟ್ಟಿಗೆ ಕರೆದುಕೊಂಡು ಹೋಗಬೇಕಾದರೆ, ಬಿಜಾಪುರವೋ ಅಥವಾ ಗುಲ್ಬರ್ಗಾದಲ್ಲೋ ಒಂದು ಏರ್ ಸ್ಟ್ರಿಪ್‌ನ್ನು ನಾವು ಅರ್ಜೆಂಟ್ ಆಗಿ ಮಾಡಿಕೊಳ್ಳಬೇಕು. ಇದರ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾ ಜೊತೆ ಪತ್ರವ್ಯವಹಾರಗಳನ್ನೂ ನನ್ನ ಅಧಿಕಾರಾವಧಿಯಲ್ಲಿ ಮಾಡಿದ್ದೇನೆ.

ಇದು ಬರೀ ಪವರ್ ಪ್ರಾಜೆಕ್ಟ್‌ಗೆ ಮಾತ್ರ ಅನುಕೂಲವಾಗುತ್ತದೆಂದಲ್ಲ. ಈಗ ಉದಾಹರಣೆಗೆ ಬಿಜಾಪುರದಲ್ಲಿ ಪೆರಿಷಬಲ್ ವೆಜಿಟಬಲ್ ಮತ್ತು ಫ್ರೂಟ್ ಅಂದರೆ ದಾಳಿಂಬೆ, ದ್ರಾಕ್ಷಿ ಬಿಳೆಯು ನಮ್ಮ ಬೆಂಗಳೂರು ಕಡೆಗಿಂತ ಹೆಚ್ಚು ಬೆಳೆಯಲಾಗುತ್ತದೆ. ಅದೇ ಕಾರಣಕ್ಕಾಗಿ ಬಿಜಾಪುರದಲ್ಲಿ ಒಂದು ಅಗ್ರಿಕಲ್ಚರ್ ಕಾಲೇಜನ್ನು ನನ್ನ ಕಾಲದಲ್ಲಿ ಮಂಜೂರು ಮಾಡಿದ್ದದ್ದು. ಈ ಪೆರಿಷಬಲ್ ಆರ್ಟಿಕಲ್ಸ್‌ನ್ನು ಎಕ್ಸ್‌ಪೋರ್ಟ ಮಾಡಬೇಕೆಂದರೆ ಏರ್‌ಸ್ಟ್ರಿಪ್ ಅನಿವಾರ್ಯ. ಆಮೇಲೆ ರೈತರುಗಳಿಗೆ ಅನುಕೂಲ ಮಾಡುವುದಕ್ಕಾಗಿ ಕೋಲ್ಡ್ ಸ್ಟೋರೇಜನ್ನು ಮಾಡಬೇಕಾಗುತ್ತದೆ. ಕೋಲ್ಡ್ ಸ್ಟೋರೇಜ್ ಮಾಡಬೇಕಾದರೆ ವಿದ್ಯುಚ್ಛಕ್ತಿ ಬೇಕೇಬೇಕಾಗುತ್ತದೆ. ವಿದ್ಯುಚ್ಛಕ್ತಿ ಬರೀ ಪಂಪ್‌ಸೆಟ್‌ಗಳಿಗೆ ಬೇಕಾಗುತ್ತದೆಂದು ಮಾತನಾಡಿದರೆ ಉಪಯೋಗವಿಲ್ಲ. ಪಂಪ್‌ಸೆಟ್ ಇರುವವರು ಏನು ಬೆಳೆಯುತ್ತಾರೆ ತರಕಾರಿ ಬೆಳೆಯುತ್ತಾರೆ, ಹಣ್ಣು ಹಂಪಲು ಬೆಳೆಯುತ್ತಾರೆ, ಆಹಾರ ಧಾನ್ಯಗಳಾದ ಭತ್ತ, ರಾಗಿ, ಜೋಳ, ಕಾಟನ್, ಈ ರೀತಿ ಕಮರ್ಷಿಯಲ್ ಕ್ರಾಪ್ ಇರುಬಹುದು; ನಾನ್‌ಕಮರ್ಷಿಯಲ್ ಕ್ರಾಪ್‌ಇರಬಹುದು.

ಹೀಗೆ 28 ಬೆಳೆಗಳನ್ನು ಬೆಳೆಯುತ್ತಾರೆ. ಯಾವುದೇ ಬೆಳೆದರೂ ಅದು ರಾಜ್ಯದ ಮತ್ತು ರಾಷರದ ಆಸ್ತಿಯಾಗುತ್ತದೆ; ಮತ್ತು ಆರ್ಥಿಕ ಪ್ರಗತಿಗೆ ಅದು ಸಹಾಯಕವಾಗುತ್ತದೆ. ನಮ್ಮ ದೇಶದಲ್ಲಿ ಕೃಷಿ ಆಧಾರಿತ ವ್ಯವಸ್ಥೆಯನ್ನು ಇಟ್ಟುಕೊಂಡಿರುವುದರಿಂದ ಎಷು ಸಾಧ್ಯವೋ ಅಷು ಈ ರೈತ ವಲಯಕ್ಕೆ ಸರ್ಕಾರ ಊರುಗೋಲಾಗಿ ನಿಲ್ಲಬೇಕಾಗುತ್ತದೆ. ಇದರ ಬಗ್ಗೆ ನಾನು ಅಧಿಕಾರದಲ್ಲಿದ್ದಾಗ ಒಂದು ನೀತಿಯನ್ನು ಮಾಡಿದೆ. ಇದಕ್ಕಾಗಿ ನನಗೆ ಹೊಗಳಿಕೆ ಬೇಕಾಗಿಲ್ಲ. ಇದನ್ನು ನಾನು ಹೃದಯಾಂತರಾಳದಿಂದ ಹೇಳತಕ್ಕಂಥ ಮಾತು. ಇದಕ್ಕೆ ಪೂರಕವಾಗಿ ತಾವು ಏನು ಮಾಡಿದರೂ ಅದಕ್ಕೆ ನನ್ನ ಬೆಂಬಲ ಇದೆ. ಕಬ್ಬು ಬೆಳೆಯತಕ್ಕಂಥ ಮತ್ತೊಂದು ಬೆಳೆಯತಕ್ಕಂಥ ರೈತರುಗಳಿಗೆ ಸರಿಯಾದ ಬೆಲೆಯನ್ನು ಕೊಡಿ. ಇವತ್ತು ಕಬ್ಬು ಬೆಳೆಯುವ ರೈತನಿಗೆ ಖರ್ಚು, ವೆಚ್ಚ ಲೆಕ್ಕ ಹಾಕಿದರೆ ಅವನಿಗೆ ಉಳಿಯುವುದು ಎಷ್ಟು? ಕೆಲವು ಸಂದರ್ಭಗಳಲ್ಲಿ ವೋಲ್ಟೇಜ್ ಡ್ರಾಫ್‌ನಿಂದ ಪಂಪ್‌ಸೆಟ್ಟುಗಳು ಸೆಟ್ಟುಗಳು ಸುಟ್ಟುಹೋದರೆ, ಅದನ್ನು ಸರಿ ಮಾಡಿಸಲು ರೈತರುಗಳಿಗೆ ಆರು ಸಾವಿರದಿಂದ 7 ಸಾವಿರ ರೂಪಾಯಿಗಳವರೆಗೆ ಖರ್ಚು ಬರುತ್ತದೆ.

ಇದರಿಂದಾಗಿ ಯಾವ ಶಕ್ತಿ ಇಟ್ಟುಕೊಂಡು ಧೈರ್ಯದಿಂದ ರೈತರು ಬೆಳೆ ತೆಗೆಯುವುದಕ್ಕಾಗುತ್ತದೆ.ಎಂಬ ಬಗ್ಗೆ ವಿಚಾರ ಮಾಡೋಣ.ನಾವೆಲ್ಲಾ ರೈತರ ಮಕ್ಕಳು.ಇದರಲ್ಲಿ ಸ್ವಲ್ಪವೂ ರಾಜಕೀಯ ಬಣ್ಣವನ್ನು ಲೇಪ ಮಾಡುವುದಕ್ಕೆ ಇಷವಿಲ್ಲ. ಇದು ಹೃದಯದಿಂದ ಹೇಳತಕ್ಕಂಥ ಮಾತು. ಇದರ ಬಗ್ಗೆ ದಯವಿಟ್ಟು ವಿಚಾರ ಮಾಡೋಣ. ಮೋಟಾರ್ ಸುಟ್ಟು ಹೋದ ಬಗ್ಗೆ ಒಬ್ಬರು ತೀರ್ಥಹಳ್ಳಿಯಿಂದ ನನಗೆ ಪತ್ರ ಬರೆದಿದ್ದಾರೆ. ಈ ರಿಜಿಸ್ಟರ್‌ಪೋಸ್ಟ್ ನನಗೆ ಈಗ ಬಂತು. ಅವರ ಮಾತುಗಳನ್ನೇ ಕೋಟ್‌ಮಾಡಿ ನಾನು ಹೇಳುವುದು ಒಳ್ಳೆಯದು. ಅವರು ಪಿ,ಎಲ್.ಡಿ. ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಅವರ ಗತಿ ಏನಾಗಿದೆ ಎಂಬ ಬಗ್ಗೆ ಎಲ್ಲಾ ವಿಷಯಗಳನ್ನು ಜೆರಾಕ್ಸ್ ಕಾಪಿ ಇಟ್ಟು ಕಳುಹಿಸಿಕೊಟ್ಟಿದ್ದಾರೆ. ಇಂತಹ ವಿಷಯ ತಮ್ಮ ಗಮನದಲ್ಲೂ ಇದೆ. ಇಂತವೂ ತಮಗೆ ಗೊತ್ತಿಲ್ಲ ಎಂದು ನಾನು ಮಾತನಾಡುತಿಲ್ಲ.

ನಿಮ್ಮ ಗಮನದಲ್ಲೂ ಇದೆ. ಇಲ್ಲಿರತಕ್ಕಂಥ ಎಲ್ಲಾಮಾನ್ಯ ಸದಸ್ಯರ ಹಾಗೂ ಸಭಾಧ್ಯಕ್ಷರ ಆದಿಯಾಗಿ ಎಲ್ಲರ ಮನಸ್ಸಿನಲ್ಲಿ ಇರತಕ್ಕಂಥ ವಿಷಯ ಇದಾಗಿದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನಂದರೆ, ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಪಕ್ಷಾತೀತವಾಗಿ ನಾವು ಅಂತಿಮವಾದ ತೀರ್ಮಾನಕ್ಕೆ ಈ ಸದನದಲ್ಲಿ ಬರಬೇಕು. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವನ್ನು ತಮಗೆ ಕೊಡುತ್ತೇವೆ, ತಾವು ದಯವಿಟ್ಟು ಧೈರ್ಯಮಾಡಿ ನುಗ್ಗಿ. ಆಮೇಲೆ, ಕೋಲ್ ವಿಚಾರದಲ್ಲಿ ನಾನು ಹೇಳಬೇಕಾದರೆ, ನಾನು ಅಧಿಕಾರ ಬಿಡುವ 20 ದಿವಸಗಳ ಮುಂದೆ ಆಸ್ಟ್ರೇಲಿಯದಿಂದ ಒಬ್ಬ ಪ್ರತಿನಿಧಿ ಬಂದಿದ್ದರು ಅವರ ಜೊತೆಯಲ್ಲಿ ಚೈನಾ ದೇಶದ ಒಬ್ಬ ಪಾರ್ಟ್ನರ್ ಕೂಡ ಬಂದಿದ್ದರು.

ಆಗ ನನ್ನ ಛೇಂಬರ್‌ನಲ್ಲಿ ಒಂದು ಎಂ.ಓ.ಯು.ಗೆ ಸೈನ್ ಮಾಡಿದ್ದೆ. ಆಗ ಕೋಲನ್ನು ಇಂಪೋರ್ಟ್ ಮಾಡಿಕೊಂಡರೆ ಅದನ್ನು ಎಲ್ಲಿ ತಂದಿರಬೇಕೆಂಬ ಪ್ರಶ್ನೆ ಬಂತು. ರಾಯಚೂರಿನಲ್ಲಿ ಈಗ 4ನೇ ಸಜ್‌ಆಯಿತು. ಈಗ ನಾವು 5 ಮತ್ತು 6ನೇ ಸಜ್‌ಗೆ ಹೋಗುತ್ತಿದ್ದೇವೆ. ಇದರ ಜೊತೆಗೆ ಮೈಸೂರು ಡಿಸ್ರಕ್ಟ್ ಚಾಮನೂರು, ಬಳ್ಳಾರಿ ಜಿಲ್ಲೆಯ ತೋರಣಗಲ್ ಹಾಗೂ ಧಾರವಾಡ ಹೀಗೆ ಸೆಂಟರ್ ಪ್ಲೇಸ್‌ಗಳಲ್ಲಿ ಮಾಡುವುದಕ್ಕೆ ಕೆ.ಇ.ಬಿ,ಕೆ.ಪಿ.ಸಿ. ಅಧಿಕಾರಿಗಳು ಹಾಗೂ ನಾವೂ ಕೂಡಿ ಪ್ಲಾನ್ ತಯಾರು ಮಾಡಿ ಅದಕ್ಕೆ ಅಂತಿಮ ತೀರ್ಮಾನ ಮಾಡಿದ್ದೆವು. ಇದೇ ರೀತಿಯಾಗಿ ಬಿಜಾಪುರ ಜಿಲ್ಲೆಯಲ್ಲೂ ಮಾಡಬೇಕಂದು ಸಹಾ ಮಾಡಿದ್ದೆವು.

ಆಮೇಲೆ ಬೆಂಗಳೂರು, ಮಂಗಳೂರಿನಲ್ಲೂ ಮಾಡಬೇಕೆಂದು ಇದ್ದೆವು. ನೀವು ಎಲ್ಲೆಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕೆಂದರೂ ಅದಕ್ಕೆಲ್ಲಾ ಕೋಲ್ ಬೇಕಾಗುತ್ತದೆ. ಯಲಹಂಕದಲ್ಲಿ ಒಂದು ಡೀಸಲ್ ಪವರ್ ಜನರೇಟರ್ ಇದೆ. ಇದೇ ರೀತಿ ಬೇರೆ ಕಡೆಯೂ ಮಾಡಬೇಕಾದರೆ ಕಾಸ್ಟ ಆಫ್ ಪವರ್ ಪ್ರೊಡಕ್ಷನ್ ಬಹಳವಾಗುತ್ತದೆ. ಅದರ ಕಾಸನನ್ನು ಕನ್‌ಸ್ಯೂಮರ್‌ಗಳ ಮೇಲೆ ಹಾಕಿದರೆ, ಅದನ್ನು ನಮ್ಮಂಥ ರಾಷ್ಟ್ರದ ರೈತರುಗಳಿಂದ ತಡೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಕೋಲ್‌ಕೂಡ ಅಷ್ಟ ಕಾಸಆಗುತ್ತದೆ.

ಕಾಸ್ಟ್ ಆಫ್ ಪ್ರೊಡಕ್ಷನ್ ಪರ್ ಮೆಗಾವಾಟ್ ಏನಿದೆ ಅದು ಆದಷ್ಟು ಕಡಿಮೆ ಬೀಳಲಿ ಎಂಬ ಉದ್ದೇಶದಿಂದ ಹಾಗೆ ಆದರೆ ಕೈಗಾರಿಕಾ ವಲಯಕ್ಕೆ ರೈತರಿಗೆ ನಾವು ಅಂದರೆ ಅದು ಹೆಚ್‌ಟಿ ಯೂಸರ್ಸ್ ನಾನ್ ಹೆಚ್‌ಟಿ ಯೂಸರ್ಸ್ ಇರಬಹುದು, ಅದರಲ್ಲಿಯೂ ಸಣ್ಣ ಪುಟ್ಟ ಕೈಗಾರಿಕೆಗಳು ಏನಿದ್ದಾವೆ ಅವುಗಳಲ್ಲಿ ನಾವು ಧೈರ್ಯ ಮಾಡಿ ಕೊಡಲೇಬೇಕು. ಹೀಗೆ ನಾವು ಲಿಬರಲೈಸ್ ಮಾಡದಿದ್ದರೆ ಅವರು ಬೆಳೆಯುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ ಲಿಬರಲೈಸ್ ಪಾಲಿಸಿಯನ್ನು ಕೇಂದ್ರ ಸರ್ಕಾರದವರು ಅನೌನ್ಸ್ ಮಾಡಿದಮೇಲೆ, ಸಿಂಗಲ್ ವಿಂಡೋ ಏಜನ್ಸಿ ಸಿಸ್ಟಂ ಬಗ್ಗೆ ನಾನು 2-3 ಮೀಟಿಂಗ್‌ಗಳನ್ನು ಸ್ವತಃ ಮಾಡಿದ್ದೆನು. ಅದರಲ್ಲಿ ನಾವು ಏನು ಮಾಡಿದ್ದೇವೆ

ಅಂದರೆ ಈ ಕನ್‌ಸೆಷನ್ಸ್ in the matter of supply of power to all the small scale industries at the lower level at concessional rates

ಅದೆಲ್ಲವನ್ನೂ ಕೊಡಬೇಕೆಂಬ ವಿಚಾರವನ್ನು ನಾವು ಏತಕ್ಕೆ ಮಾಡಿದ್ದೇವೆ. ಅಂದರೆ, ಈ ವರ್ಗಕ್ಕೆ ನಾವು ಧೈರ್ಯ ಕೊಡಬೇಕು ಮತ್ತು ಉತ್ಪಾದನೆ ಜಾಸ್ತಿ ಮಾಡಬೇಕೆಂಬ ಕಾರಣಕ್ಕಾಗಿ. ಆದ್ದರಿಂದ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ, ಪವರ್ ಜನರೇಟ್ ಮಾಡಲು ನಾವು ಕೋಲ್‌ನ್ನು ತರುತ್ತೇನೆ. ಅದು ವಿದೇಶಗಳಿಂದ ಬರಬಹುದು. ಆದರೆ ಹಾಗೆ ಬಂದಂಥ ಕೋಲ್‌ನ್ನು ಇಟ್ಟುಕೊಳ್ಳಲು ನಾವೇನು ವ್ಯವಸ್ಥೆ ಮಾಡಿದ್ದೇವೆ ಎಂಬ ಪ್ರಶ್ನೆ ಬಂತು. ಕೋಲ್ ನಮಗೆ ಬರುವುದು ಎಷ್ಟು ಮುಖ್ಯವೋ ಅದನ್ನು ಇಟ್ಟುಕೊಳ್ಳಲು ಇರುವ ವ್ಯವಸ್ಥೆ ಕೂಡ ಅಷ್ಟೇ ಮುಖ್ಯವಾದುದು. ಅದು ಹಡಗಿನ ಮುಖಾಂತರ ಬಂದು ಬಿಡುತ್ತದೆ. ಆದಕ್ಕಾಗಿ ನಾನು ಬಲ್ಲಾರಪುರಾ ಕಾಸ್ಟಿಕ್ ಸೋಡ ಫ್ಯಾಕ್ಟರಿಯ ಹತ್ತಿರ ಇರುವ ಕೋಸ್ಟಲ್ ಹೈವೇ ಪಕ್ಕದಲ್ಲಿರತಕ್ಕಂಥ ತದಡಿ ಎಂಬಲ್ಲಿನ ಒಂದೂವರೆ ಸಾವಿರ ಎಕರೆ ಪ್ರದೇಶವನ್ನು ನಾನು ಸ್ವತಃ ಆರ್ಡರ್ ಮಾಡಿ ಕಾಯ್ದಿರಿಸಿದ್ದೆ. ಆ ಜಾಗಕ್ಕೆ ನಮ್ಮ ಕಾಲದಲ್ಲಿ ಇಯರ್‌ಮಾರ್ಕ್ ಮಾಡಿದ್ದೇವೆ. ನಾವು ಪರದೇಶಗಳಿಂದ ಕೋಲ್‌ನ್ನು ತರಿಸಿಕೊಳ್ಳುವಾಗ ಅದನ್ನು ಸ್ಟಾಕ್ ಮಾಡಿಡಲು ಕೂಡ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಈಗ ನೀವು ಅರ್ಜಂಟ್ ಆಗಿ ಈ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ನೀವು ಇಲ್ಲಿ ಎಂ.ಓ.ಯು ಅಥವಾ ಅಗ್ರಿಮೆಂಟ್‌ಗೆ ಸೈನ್ ಮಾಡುತ್ತಿದ್ದೀರಿ, ಪವರ್ ಪರ್ಚೇಸ್ ಕ್ಲೀಯರೆನ್ಸ್‌ಗೆ ನೀವು ಗವರ್ನಮೆಂಟ್ ಆಫ್ ಇಂಡಿಯಾಗೆ ಕಳುಹಿಸಿ ಅಥವಾ ಸೈನ್ ಮಾಡುತ್ತೀರಿ. ಆಗ ನಾಳೆ ಕೋಲ್ ಬಂದು ಬಿಟ್ಟರೆ ಅದನ್ನು ಎಲ್ಲಿ ಇಡುತ್ತೀರಿ? ಇಂಥ ವಿಚಾರಗಳು ಸೈಡ್ ಬೈ ಸೈಡ್ ಆಗಿ ಹೋಗಬೇಕು. ಹಾಗೆ ಮಾಡದಿದ್ದರೆ ಅದು ಸರಿ ಬರುವುದಿಲ್ಲ, ಅರ್ಜೆಂಟಾಗಿ ನೀವು ಕೋಲ್ ಸ್ಟಾಕ್ ಮಾಡಲು ನಾವೇನು ಜಾಗವನ್ನು ಇಯರ್‌ಮಾರ್ಕ್ ಮಾಡಿದ್ದೇವೆ, ಅದರ ಉಪಯೋಗಕ್ಕೋಸ್ಕರ ತತ್‌ಕ್ಷಣ ಕಾರ್ಯಕ್ರಮವನ್ನು ತೆಗೆದುಕೊಂಡು ಆ ಜಾಗಕ್ಕೆ ಒಂದು ಬೇಲಿ ಕೂಡ ಹಾಕಿಸಿದ್ದೆ. ಹಾಗೆಯೇ ನೀವೂ ಸಿದ್ಧತೆಗಳನ್ನು ಮಾಡಿಕೊಳ್ಳಿ. ಹೀಗೆ ಮಾಡಿಕೊಂಡು, ನೀವು ಕಮೀಷನ್ ಮಾಡುವ ಹೊತ್ತಿಗೆ ಕೋಲ್ ರೆಡಿಯಾಗಿ ಇರುತ್ತದೆ. ಅದೇ ರೀತಿಯಲ್ಲಿ ನಮ್ಮಲ್ಲಿ ಕೊಂಕಣ ರೈಲ್ವೇ ಬಂದಿದೆ. ಅದೇ ರೀತಿಯಲ್ಲಿ ದೇಶದಲ್ಲಿ ಸಾಕಷ್ಟು ರೈಲ್ವೇ ಲೈನ್‌ಗಳು ಪ್ರಗತಿಯಲ್ಲಿವೆ.

ರೈಲ್ವೇ ಲೈನ್ ಕನ್‌ಕ್ಷನ್ಸ್ ಎಲ್ಲಾ ಕಡೆಗಳಲ್ಲಿ ಬರುವುದರಿಂದ ಮತ್ತು ಬ್ರಾಡ್‌ಗೇಜ್ ಕನ್‌ವರ್ಷನ್ ಕೂಡ ದೇಶದಲ್ಲಿ ಬರುವುದರಿಂದ we can easily transport the coal from the sea shore to all these centres.

ರಾಜ್ಯದ ಅನೇಕ ಕಡೆಗಳಲ್ಲಿ ಕನ್‌ವರ್ಷನ್‌ಗಳು ನಡೆಯುತ್ತಿವೆ. ನಾನು ದಕ್ಕಾಗಿ ಕೇಂದ್ರ ಸರಕಾರವನ್ನು ಅಭಿನಂದಿಸುತ್ತೇನೆ. ಅವರು ಇಡೀ ಇಂಡಿಯಾ ದೇಶದಲ್ಲಿ ಮೀಟರ್‌ಗೇಜ್ ಇರುವುದನ್ನು ತೆಗೆಯಬೇಕೆಂದು ಒಂದು ನೀತಿಯನ್ನು ಮಾಡಿಕೊಂಡಿದ್ದಾರೆ. ಬ್ರಾಡ್‌ಗೇಜ್ ಕನ್‌ವರ್ಷನ ಕೂ ಬಹಳ ಚೆನ್ನಾಗಿ ನಡೆಯುತ್ತಾ ಇದೆ. ಇದು ಬಹಳ ಸಂತೋಷಪಡತಕ್ಕಂಥ ವಿಚಾರವಾಗಿದೆ. ಆದ್ದರಿಂದ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕೋಲ್ ಬಗ್ಗೆ ಸರ್ಕಾರವು ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಇವೊತ್ತು ನಮ್ಮ ಜನರೇಟಿಂಗ್ ಸೆಂಟರ್ಸ್ ಏನಿದ್ದಾವೆ ಅವುಗಳ ಸಾಮರ್ಥ್ಯವು ಎಷ್ಟೆಷ್ಟು ಮ್ಯಾಗಾವ್ಯಾಟ್ಸ್ ಎಂಬ ಬಗ್ಗೆ ನೀವೇನು ಹೊರಡಿಸುತ್ತಾ ಇದ್ದೀರಿ, ಅದರ ವಿವರಗಳನ್ನು ಪೂರ್ಣವಾಗಿ ನೀವು ಸದನಕ್ಕೆ ಕೊಟ್ಟರೆ ಅದು ಬಹಳ ಉಪಯುಕ್ತವಾಗಬಲ್ಲದು. ನಾನು ವಿಷಯ ಪ್ರಸ್ತಾಪನೆ ಮಾಡುತ್ತಿರುವುದು ರೈತರ ಪಂಪ್‌ಸೆಟ್‌ಗಳ ಬಗ್ಗೆ ಮಾತ್ರವಲ್ಲ. ವಿದ್ಯುಚ್ಛಕ್ತಿ

ಉತ್ಪಾದನೆ ಬಗ್ಗೆಯೂ ಮಾತನಾಡುವುದು ಅವಶ್ಯಕ. ವಿದ್ಯುಚ್ಛಕ್ತಿ ಡಿಸ್ಟ್ರಿಬ್ಯೂಷನ್ ವಿಚಾರದಲ್ಲಿಯೂ ವಿಚಾರ ಮಾಡಬೇಕಾಗುತ್ತದೆ. ನಮ್ಮಲ್ಲಿ ಟ್ರಾನ್ಸ್‌ಮಿಷನ್ ಲೈನ್‌ಗಳಿವೆ. ಹಾಗೆಯೇ ಟ್ರಾನ್ಸ್‌ಮಿಷನ್ ಲಾಸ್ ನಮ್ಮಲ್ಲಿ ಸಿಕ್ಕಾಪಟ್ಟೆ ಇದೆ. ನಿಜ ಹೇಳಬೇಕಾದರೆ ನಮ್ಮ ಕಾಲದಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಬಹಳ ಕಡಿಮೆ ಮಾಡಿದ್ದಕ್ಕಾಗಿ I think we have taken a gold medal at the National level if I remember correctly.

ಕೆಇಬಿಯು ಲಾಸ್ ಮಾಡಿಕೊಂಡು ಸುಸ್ತಾಗಿರುವಂಥ ಸಂಸ್ಥೆ. ನಾವು ಅದರ ಬಗ್ಗೆ ಗಮನಕೊಟ್ಟು ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆ. ನನ್ನ ಕಾಲದಲ್ಲಿ ಅದಕ್ಕೆ ಗೋಲ್‌ಮೆಡಲ್ ಬಂತು ಎಂದು ನಾನು ಹೊಗಳಿಕೊಳ್ಳುತ್ತಾ ಇಲ್ಲ. ಆದರೆ ನಾವು ಆ ದಿಸೆಯಲ್ಲಿ ಸ್ವಲ್ಪ ಒಳ್ಳೆಯ ಕೆಲಸಗಳನ್ನು ಮಾಡಿ ತೋರಿಸಿದ್ದೇವೆ ಎಂಬ ಭಾವನೆಯಿಂದ ಹೇಳುತ್ತಿದ್ದೇನೆ. ಒಳ್ಳೆಯ ಬಹಳಷ್ಟು ಸರ್ಟಿಫಿಕೇಟ್‌ಗಳು ಬಂದಿವೆ. ಬಹಳ ಗಮನಕೊಟ್ಟು ಕರ್ನಾಟಕ ಸರಕಾರದವರು ಕೆಇಬಿಯನ್ನು ಚೆನ್ನಾಗಿ ನಿರ್ವಹಿಸಿದ್ದಾರೆ ಎಂಬ ಮಾತು ನಮ್ಮ ಕಾಲದಲ್ಲಿ ಅದಕ್ಕೆ ಬಂತು. ಈಗಲೂ ಕೂಡ ಆ ಬಗ್ಗೆ ತಾವುಗಳು ಗಮನ ಹರಿಸುತ್ತೀರಿ ಎಂಬ ವಿಶ್ವಾಸವನ್ನು ಇಟ್ಟುಕೊಂಡೇ ನಾನು ಈ ಮಾತುಗಳನ್ನು ಆಡುತ್ತಿದ್ದೇನೆ. ಈ ಟ್ರಾನ್ಸ್‌ಮಿಷನ್ ಲಾಸ್ ಕಡಿಮೆಯಾಗಬೇಕೆಂದರೆ, ಮತ್ತಿತರ ಇಂಥ ವಿಚಾರಕ್ಕಾಗಿ ಪ್ರತಿವರ್ಷವೂ 1200 ಕೋಟಿರೂ.ಗಳು ಬೇಕೆಂದು ಹೇಳಿದದಾರೆ. ಏಕೆಂದರೆ ನಾವು ಬರೀ ಪವರ್ ಜನರೇಟ್ ಮಾಡಿ ಬಿಡುವುದಕ್ಕಾಗುವುದಿಲ್ಲ, ಅದಕ್ಕೆ ಪೂರಕವಾಗಿರತಕ್ಕಂಥ ಟ್ರಾನ್ಸ್‌ಮಿಷನ್ ಲೈನ್‌ಗಳನ್ನೂ ಕೂಡ ನೋಡಬೇಕಾಗುತ್ತದೆ. ನಮ್ಮಲ್ಲಿ ಟ್ರಾನ್ಸ್‌ಮಿಷನ್ ಲೈನ್‌ಗಳು ಬಹಳ ಹಳೆಯಗಳಾಗಿ ಬಿಟ್ಟಿವೆ. ಇವುಗಳನ್ನು ಇಟ್ಟುಕೊಂಡು ನಾವು ಲಾಸ್‌ನ್ನು ಕಡಿಮೆ ಮಾಡಿಕೊಳ್ಳುತ್ತೇವೆಂದು ಹೇಳಿದರೆ ಅದು ಬಗೆಹರಿಯುವುದಿಲ್ಲ. ಪವರ್ ಜನರೇಟ್ ಮಾಡುವುದರ ಜೊತೆಗೆ ನಿಮ್ಮ ಡಿಸ್ಟ್ರಿಬ್ಯೂಟರಿ ಸಿಸ್ಟಂನ್ನ ಕೂಡ ಅಪ್‌ಟುಡೇಟ್ ಆಗಿ ಇಟ್ಟುಕೊಳ್ಳತಕ್ಕ ವಿಚಾರ ಇದೆ. ಅದನ್ನು ಮಾಡಲೇಬೇಕಾಗುತ್ತದೆ. ಅದಕ್ಕಾಗಿ ಒಂದು ಸಾರಿ ಹೊರೆ ಬಿದ್ದೇ ಬೀಳುತ್ತದೆ. ಇನ್ನು ವಿಶ್ವ ಬ್ಯಾಂಕ್‌ನವರು ಕಂಡೀಷನ್ಸ್ ಹಾಕಿದ್ದಾರೆ ಎಂಬ ವಿಚಾರ ಇದೆ. ನಾವು ನಿಮಗೆ ಸಾಲ ಕೊಡಬೇಕೆಂದರೆ ನೀವು ಫ್ರೀಯಾಗಿ ರೈತರಿಗೆ ಪವರ್ ಕೊಡಬಾರದು ಎಂದು ಹೇಳಿದ್ದಾರೆ ಎಂಬ ವಿಚಾರ ಇದೆ. It is a wrong notion. ಆದರೆ ಆ ರೀತಿಯಾಗಿ ಇಲ್ಲ. ನಾನು ಅಮೇರಿಕಾಕ್ಕೆ ಹೋದಾಗ I led the official delegation to America. Our officers were also present at that time in Washington.

ಅಲ್ಲಿ ನಾವು ಮಾತನಾಡಬೇಕಾದರೆ, one Mr. Wood, Deputy Chairman of the World Bank.

ಅವರ ಹತ್ತಿರ ಮಾತನಾಡತಕ್ಕಂಥ ಕಾಲದಲ್ಲಿ ಅವರು ಪವರ್ ಜನರೇಷನ್ ಬಗ್ಗೆ ಕಂಡೀಷನ್ ಈ ರೀತಿಯಾಗಿ ಇದೆ, ನೀವು ಪವರ್‌ನ್ನು ಫ್ರೀಯಾಗಿ ಕೊಡಬಾರದು that condition is there in the agreement.

ಹಾಗೆಂದು ಅವರು ಹೇಳಿದರು. I said, no Mr. Wood, that condition is not there.

ನನಗೆಲ್ಲಾ ಗೊತ್ತಿದೆ ನಾನು ಅದನ್ನು ತರಿಸಿ ನೋಡಿದ್ದೇನೆ. ನಾನು ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಪ್ರಪೋಸಲ್‌ನ್ನು ಡಿಸ್ಟ್ರಿಬ್ಯೂಷನ್ ಬಗ್ಗೆ ತಂದಿದದಾರೆ, ಪವರ್ ಜನರೇಷನ್‌ಗೆ ಇದು ಇಲ್ಲ. ಏಕೆಂದರೆ ಪವರ್ ಜನರೇಷನ್‌ಗೆ ನಾವು ಸಾಲವನ್ನು ತೆಗೆದುಕೊಂಡಿಲ್ಲ. ನಾವು ಕರ್ನಾಟಕದಲ್ಲಿ ಏನು ಪವರ್ ಜನರೇಟ್ ಮಾಡುತ್ತಾ ಇದ್ದೇವೆ, ನಮ್ಮಲ್ಲಿ ಪವರ್ ಕಾರ್ಪೊರೇಷನ್ ಎಂದು ಒಂದು ಸಂಸ್ಥೆ

ಇದೆ. ಅದರ ಮುಖಾಂತರ ಇದಕ್ಕಾಗಿ ಬರೀ 300, 400, 500, 200, 100 ಕೋಟಿ ರೂಪಾಯಿಗಳನ್ನು ಇಡುವುದು, ಯಾರಾದರೂ ಕೇಳಿದಾಗ ಉತ್ತರವಾಗಿ ಹಣದ ಲಭ್ಯತೆಗನುಗುಣವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುವುದು ಇತ್ಯಾದಿಯಾಗಿ ಇವಗಳೆಲ್ಲವೂ ಸಾಮಾನ್ಯವಾಗಿರತಕ್ಕಂಥ ಪ್ರಶ್ನೆ ಮತ್ತು ಉತ್ತರಗಳಾಗಿವೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ನಾವೇನೋ ಧೈರ್ಯ ಮಾಡಿ ಒಂದು ಸಾರಿ ನುಗ್ಗಿ ಬಿಡಬೇಕೆಂಬ ದೃಷ್ಟಿಯಿಂದ ಹೋಗಿದ್ದವು. ಆಗ ಕೇಂದ್ರ ಸರಕಾರದವರು ಕೂಡ ಎಕಾನಮಿಕ್ ಲಿಬರಲೈಸ್ ಪಾಲಿಸಿಯನ್ನು ಅನೌನ್ಸ್ ಮಾಡಿದ ಮೇಲೆ ಫಾರಿನ್ ಇನ್‌ವೆಸ್ಟ್‌ಮೆಂಟ್ ವಿಚಾರದಲ್ಲಿ ತಾಳಿದ ಧೋರಣೆಯಿಂದ ಎಷ್ಟೋ ಅನುಕೂಲವಾಗಿದೆ. ನಾವು ನಮ್ಮ ಕಾಲದಲ್ಲಿ ಪ್ರಾರಂಭ ಮಾಡಿದ ಮೇಲೆ ಎಷ್ಟು ಸ್ಪೀಡ್‌ಅಪ್ ಆಗಬೇಕಾಗಿತ್ತು, ಅದು ಆಗಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ನಾನು ಅಧಿಕರ ಬಿಟ್ಟ ಮೇಲೆ ಆ ಕಾರ್ಯಕ್ರಮಗಳು ಎಲ್ಲವೂ ಮಲಗಿವೆ, except this Cogentrix Company which has come through

ಉಳಿದಿರತಕ್ಕಂಥ ಎಲ್ಲಾ ಕಾರ್ಯಕ್ರಮಗಳೆಲ್ಲವೂ ಕೂಡ ಕಿತ್ತುಕೊಂಡು ಹೊರಟುಹೋಗಿವೆ. ಆ ಎರಡು ವರ್ಷ ಏಕೆ ಅದು ಲೇಟ್ ಆಯಿತು ಎಂಬುದು ನಮಗೆ ತಿಳಿಯದೇ ಇರತಕ್ಕಂಥ ವಿಚಾರ. ಇವೊತ್ತು ಆಂಧ್ರ ಪ್ರದೇಶದವರು ಮತ್ತು ತಮಿಳುನಾಡಿನವರು ನಮ್ಮನ್ನು ಸೈಡ್ ಹೊಡೆದುಕೊಂಡು ಮುಂದೆ ಹೊರಟು ಹೋಗಿದದಾರೆ. ಅಂತೆಯೇ ಬೇರೆ ಯಾವುದೇ ರಾಜ್ಯಗಳವರು ಇರಬಹುದು. ಎಲ್ಲರೂ ಕೂಡ ಬಹಳ ಸ್ಪೀಡ್ ಅಪ್ ಮಾಡುತ್ತಿರುವ ಸಂದರ್ಭದಲ್ಲಿ ನಾವು ಮರೆತು ಬಿಟ್ಟ ಇವುಗಳಿಗೆ ಎರಡೆರಡು ವರ್ಷಗಳನ್ನು ವೇಸ್ಟ್ ಮಾಡಿಬಿಟ್ಟರೆ ಅದರಿಂದ ಯಾವ ಪ್ರಯೋಜನವಾಗುತ್ತದೆ? ಹೀಗೆ ನಾವು ಸಮಯವನ್ನು ವೇಸ್ಟ್ ಮಾಡುತ್ತಾ ಹೋದಂತೆ ಉತ್ಪಾದನಾ ವೆಚ್ಚವೂ ಕೂಡ ಹೆಚ್ಚು ಆಗುತ್ತಿರುತ್ತದೆ. ಅದಕ್ಕೆ ನಾವು ಅವಕಾಶ ಮಾಡಿಕೊಡಬಾರದು. ಅದಕ್ಕೆ ಸಂಬಂಧಪಟ್ಟಂತೆ ತಾವು ಮಾಡುತ್ತಿದ್ದೀರೆಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ.

ಈಗ ಯಾವುದೇ ತಪ್ಪನ್ನು ನಾನು ಮಾಡಿದರೂ ಕೂಡ ಮುಂದೆ ಭವಿಷ್ಯದಲ್ಲಿ ಯಾವ ಸರಕಾರ ಬಂದರೂ ಕೂಡ ಅದಕ್ಕೆ, ಮುಂದಿನ ಪೀಳಿಗೆಗೆ ಪೆಟ್ಟು ಬಿದ್ದಂತಾಗುತ್ತದೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಿಜ ಹೇಳಬೇಕೆಂದರೆ ಇದು ಬಹಳ ದುಃಖದಿಂದ ಹೇಳಬೇಕಾದ ವಿಚಾರವಾಗಿದೆ. ನಾವು ಆಗ ಹಾಕಿದ ಕಾರ್ಯಕ್ರಮಗಳೆಲ್ಲವೂ ನಾವು ಬಿಟ್ಟ ಮೇಲೆ ಕಿತ್ತುಕೊಂಡು ಹೋಗಿರತಕ್ಕಂಥದ್ದನ್ನು, ಆ ಕಾರ್ಯಕ್ರಮಗಳು ಮಲಗಿರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಈಗ ನೀವೇನೋ ಮಾಡುತ್ತೇವೆಂಬ ಮಾತನ್ನು ಆಡುತ್ತಿದ್ದೀರಿ, ಅದನ್ನು ನಾನು ಕಾದು ನೋಡುತ್ತಿದ್ದೇನೆ. ಈ ತರಹದ ಕಾರ್ಯಕ್ರಮಗಳನ್ನು ವೇಗವಾಗಿ ತೆಗೆದುಕೊಂಡು ಹೋಗಬೇಕೆನ್ನುವ ಆಸೆಯಿಂದ ಈ ಮಾತುಗಳನ್ನು ನಾನು ಡುತ್ತಿದ್ದೇನೆ. ಇನ್ನು ಕಾಸ್ಟ್ ಆಫ್ ಪ್ರೊಡಕ್ಷನ್ ಮುಂತಾದ ವಿವರಗಳಿಗೆ ನಾನು ಹೋಗುವುದಿಲ್ಲ. ಅದು ಬಹಳ ವಿವರಗಳಿತ್ಯಾದಿಗಳನ್ನು ಹೊಂದಿದ ದೊಡ್ಡ ಸಬ್‌ಜೆಕ್ಟ್ ಆಗಿದೆ. ಇನ್ನೊಂದು ವಿಚಾರ ಅಂದರೆ ಕೇವಲ ಮನೆಗೆ ದೀಪ ಕೊಡುವುದು, ಅಥವಾ ಭಾಗ್ಯಜ್ಯೋತಿ ಕೊಡುವುದು ಅಷ್ಟೇ ಅಲ್ಲ, ಪವರ್ ಕನ್‌ಸಂಪ್ಷನ್ ತಮಗೆ ಗೊತ್ತಿರುವ ಹಾಗೆ ಕಡಿಮೆ. ಮೊನ್ನೆ ನೀವು ಒಂದು ಉತ್ತರ ಕೊಡುವಾಗ ನಾನು ಗಮನಿಸಿದ್ದೆ. ಅದರ ಬಗ್ಗೆ ಲೇಟೆಸ್ಟ್ ಫಿಗರ್ಸ್ ಏನಿದೆ ಅದು ನನಗೆ ಗೊತ್ತಿಲ್ಲ, ನಾವೇನು ಬಿಟ್ಟು ಎಷ್ಟು ಪವರ್ ಜನರೇಟ್ ಮಾಡುತ್ತಿದ್ದೇವೆ, ಅದರಲ್ಲಿ 42 ಪರ್ಸೆಂಟ್‌ನಷ್ಟು ಕರೆಂಟ್‌ನ್ನು ಕೃಷಿ ವಲಯದವರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬ ಮಾತನ್ನು ಕೇಳಿದ ನೆನಪು ನನಗಿದೆ. if I heard you correctly. Am I correct?

ಆ 42 ಪರ್ಸೆಂಟ್ ಎಂಬುದು ಸರಿಯಿರಲಾರದೆಂಬುದು ನನ್ನ ಭಾವನೆ. ಬೇಕಾದರ ಇನ್ನೊಂದು ಸಲ ವಿಮರ್ಶೆ ಮಾಡುವುದು ಒಳ್ಳೆಯದು. ಇವತ್ತು ಕೈಗಾರಿಕಾವಲಯ ಏನಿದೆ ಅದಕ್ಕೆ ಹೋಲಿಸಿದಾಗ ಕೃಷಿ ವಲಯ ಬರುವುದಿಲ್ಲ, ನಾವು ಏನು ತಿಳಿದುಕೊಳ್ಳುತ್ತೇವೆ, ಒಂದು ಪಂಪ್‌ಸೆಟ್ಟಿಗೆ ಕನೆಕ್ಷನ್ ಕೊಟ್ಟರೆ 24 ಗಂಟೆಯೂ ನೀರು ಹೊಡೆಯುತ್ತಿರುತ್ತಾನೆ ಎಂದು ತಿಳಿದುಕೊಳ್ಳಬಾರದು, ನೋ, ಅವನು ಹಾಗೆ ಮಾಡುವುದಿಲ್ಲ, ನೀರು ಹೊಡೆದರೆ ಭೂಮಿ ಬರುವುದಿಲ್ಲ. ಉದಾಹರಣೆಗೆ ಬ್ಲಾಕ್ ಕಾಟನ್ ಸಾಯಿಲ್ ಇದೆ, ಬಾಂಬೆ ಕರ್ನಾಟಕ ಪ್ರದೇಶ ಹೈದರಾಬಾದ್ ಕರ್ನಾಟಕ ಪ್ರದೇಶ ಅದರಲ್ಲೂ ಜಾಸ್ತಿ ಪಂಪ್‌ಸೆಟ್ಟಿರುವುದ ಕೋಲಾರ ಬೀದರ್ ಬೆಂಗಳೂರು ಸುತ್ತಮುತ್ತ ಮತ್ತು ತುಮಕೂರು, ಈಗ ಅನೇಕ ಜಿಲ್ಲೆಗಳಲ್ಲಿ ನಾವು ಬೋರ್‌ವೆಲ್‌ಗಳನ್ನು ನೋಡುತ್ತಿದ್ದೇವೆ. ನನಗೆ ಗೊತ್ತಿರುವಂತೆ ನಾನು ಅಧಿಕಾರದಲ್ಲಿದ್ದಾಗ ಸುಮಾರು 9 ಲಕ್ಷ ಚಿಲ್ಲರೆ ಪಂಪ್‌ಸೆಟ್ಟಿತ್ತು. ಈಗ ಅದು 10 ಲಕ್ಷ ದಾಟಿ ಹೋಗಿದೆ ಎಂದು ನಾನು ಕೇಳಿದ್ದೇನೆ. ಬರೀ ಬೋರ್‌ವೆಲ್ಸ್ ಅಷ್ಟೇ ಅಲ್ಲ, ಓಪನ್‌ವೆಲ್ಸ್, ಹೊಳೆ ನದಿಗಳಿಗೆ ಪಕ್ಕದಲ್ಲಿ ಹಾಕಿ ನೀರು ತೆಗೆದುಕೊಳ್ಳುವುದು ಇದನ್ನು ರೈತರು ಉಪಯೋಗ ಮಾಡುತ್ತಿದ್ದಾರೆ. ಏನಾಗಿದೆ ಎಂದರೆ ಆ ರೈತರ ಗೋಳು ನೋಡುವುದಕ್ಕೆ ಸಾಧ್ಯವೇ ಇಲ್ಲ. ಇವತ್ತು ಒಂದು ಅರ್ಜಿ ಬಂದಿರುವುದನ್ನು ಪಟೇಲರಿಗೆ ನಾನು ಕಳುಹಿಸಿಕೊಡುತ್ತೇನೆ, ಈ ತೀರ್ಥಹಳ್ಳಿಯ ಕೆ. ಸೀನಪ್ಪ ಎಂಬುವನದ್ದು, ಒಳ್ಳೆಯ ಟೈಮಿಗೆ ಬಂದಿದೆ, ಅದರಲ್ಲಿರುವ ವಿಷಯ ಅವನಿಗೆ ಮಂಜೂರಾದ ಪಂಪ್‌ಸೆಟ್ಟಿಗೆ ವಿದ್ಯುತ್ ಕಂಬ ನೀಡಿ ಕನೆಕ್ಷನ್ ಕೊಡುವ ಬಗ್ಗೆ ಹಾಗೂ ಸ್ಟೇಟ್ ಬ್ಯಾಂಕ್‌ನಲ್ಲಿ ಸಾಲ ಕಟ್ಟುವ ಬಗ್ಗೆ ಏನು ಬರೆದಿದ್ದಾನೆ ಗೊತ್ತೇನು? ಎಲ್ಲಾ ಓದುವುದಿಲ್ಲ, ಎರಡೇ ಎರಡು ಕಡೆ ಬಹಳ ಚೆನ್ನಾಗಿ ಬರೆದಿದ್ದಾನೆ, ದಿನಾಂಕ 7-11-94ರಲ್ಲಿ ಆಗಿನ ವಿದ್ಯುತ್ ಮಂತ್ರಿಗಳಾದ ಎಸ್.ಎಂ. ಕೃಷ್ಣ ಅವರಿಗೂ ಇದೇ ರೀತಿ ಲಿಖಿತವಾಗಿ ಮನವಿ ಮಾಡಿದ್ದೆ. ಆದರೆ ಇದರ ಕಾಪಿಯನ್ನು ಜೆ.ಹೆಚ್ ಪಟೇಲರು, ಉಪಮುಖ್ಯಮಂತ್ರಿಗಳು ಇತ್ಯಾದಿ ಎಲ್ಲರಿಗೂ ಕಳುಹಿದ್ದೇನೆ, ಇಲ್ಲಿಯವರೆಗೂ ನನಗೆ ಉತ್ತರ ಬಂದಿರುವುದಿಲ್ಲ.

ಆದರೆ 22-2-95ರಲ್ಲಿ ತೀರ್ಥಹಳ್ಳಿ ಸ್ಟೇಟ್ ಬ್ಯಾಂಕಿನಿಂದ ಒಂದು ನೋಟೀಸ್ ಬಂದಿರುತ್ತದೆ ಅದರಲ್ಲಿ 4683 ರೂ. ಅಸಲು ಹಾಗೂ 7961 ರೂ. ಬಡ್ಡಿ ಕಟ್ಟಬೇಕೆಂದು ತಿಳಿಸಿದ್ದಾರೆ. ಇವನು ಹೇಳುವುದು ಅಸಲಿಗಿಂತ ಬಡ್ಡಿ! ಮೂಗಿಗಿಂತ ಮೂಗುತಿ ಭಾರವಾದಂತೆ ಆಗಿದೆ, ಅದರ ಈ ಬಡ್ಡಿ ಅಸಲು ಕಟ್ಟಲು ನಾನು ಹೆಣಗಾಡುತ್ತಿದ್ದೇನೆ ಎಂದು ಹೇಳಿದ್ದಾನೆ. ಮೋಟರ್ ಸಹ ತುಕ್ಕು ಹಿಡಿಯುತ್ತಿದೆ. ಈ ರೀತಿ ಆದರೆ ಬಡ ರೈತರ ಗತಿ ಏನು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ, ಅವರು ಏನೋ 5 ಕಂಬ ಬೇಕಾಗಬಹುದು ಎಂದು ಹೇಳಿದ್ದರಂತೆ ನಾನು ವಿವರ ಓದುವುದಿಲ್ಲ, ನಾನು ಅಧಿಕಾರ ವಹಿಸಿಕೊಂಡಾಗ 3 ಕಂಬದವರೆಗೆ ಎಂಬ ಒಂದು ಕಾನೂನಿತ್ತು ನಾನು ಅದನ್ನು ಬದಲಾವಣೆ ಮಾಡಿದ್ದೇನೆ. ನೀವು ದಯವಿಟ್ಟು ತರಿಸಿಕೊಡಿ, ಏಕೆಂದರೆ 3 ಕಂಬ ಎಂದು ಕುಳಿತುಕೊಳ್ಳುವುದು, ಪಿಎಲ್‌ಡಿ ಬ್ಯಾಂಕಿನವನು ಒಂದು ಕಡೆ ಸಾಲ ಕೊಡುವುದು, ನೀವು 3 ಕಂಬದ ಮೇಲೆ ಹೋಗಬಾರದು ಎಂದು ಹೇಳುವುದು.

ಇದರಲ್ಲಿ ಅರ್ಥವೇ ಇಲ್ಲ, ನಾನು ಅದನ್ನು ಬದಲಾಯಿಸಿ 5, 6, 7, 8 ಕಂಬದವರೆಗೂ ಹೋಗಿ ಏನೂ ಆಗುವುದಿಲ್ಲ, ರೈತರ ಬಗ್ಗೆ ನಾವು ಧೈರ್ಯ ಮಾಡದಿದ್ದರೆ ಇನ್ನಾರ ಬಗ್ಗೆ ಮಾಡುತ್ತೇವೆ ಎಂದು ವಿಚಾರ ಮಾಡಿ ಕೆಇಬಿಗೆ ನೂರಾರು ಕೋಟಿ ರೂ. ಹಣದ ಶಕ್ತಿಯನ್ನು ಕೂಡ ಕ್ಯಾಬಿನೆಟ್‌ನಲ್ಲಿ ತೀರ್ಮಾನ

ಮಾಡಿ ಹಣವನ್ನೂ ಕೂಡ ಕೊಟ್ಟಿದ್ದೆ. ಇದನ್ನು ಹೊಗಳಿಕೆ, ಬರೀ ನನ್ನ ಕಾಲದ್ದು ಎಂದು ತಿಳಿದುಕೊಳ್ಳಬೇಡಿ ಹೀಗೆ ಮಾಡಿದ ನೆನಪು ನನಗೆ,, ಅದಕ್ಕಾಗಿ ಹೇಳುತ್ತಿದ್ದೇನೆ. ಕೆಇಬಿಗೆ ತಮಗೆ ಗೊತ್ತಿರುವಂತೆ ನೂರಾರು ಕೋಟಿ ಹಣ ಕೊಟ್ಟಿದ್ದೇವೆ, ಕೆಇಬಿ ಬಹಳ ಸುಸ್ತಾಗಿ ನೆಲಕಚ್ಚಿರುವಂತಹ ಸಂಸ್ಥೆ, ನಾವು ಆ ಧೈರ್ಯ ಕೊಡಲಿಲ್ಲ ಎಂದರೆ ಪ್ರಯೋಜನವಿಲ್ಲವೆಂಬ ದೃಷ್ಟಿಯಿಂದ ಆ ಕ್ರಮವನ್ನು ನಾನು ಕೈಗೊಂಡಿದ್ದೆ. ಇವತ್ತೇನಾಗಿದೆ, ಕೋಲಾರ ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ 12 ಸಾವಿರದಿಂದ 18 ಸಾವಿದರವರೆಗೆ ಪಂಪ್‌ಸೆಟ್‌ಗಳಿವೆ. ಸ್ವಾಮಿ ಏನು ಬೆಳೆಯುತ್ತಾರೆ? ಅಲ್ಲಿ ರೇಷ್ಮೆಗೆ ಬೇಕಾದ ಹಿಪ್ಪುನೇರಳೆ, ರಾಗಿ ಬೆಳೆಯುತ್ತಾರೆ, ಹೂವು ಬೆಳೆಯುತ್ತಾರೆ, ತರಕಾರಿ ಬೆಳೆಯುತ್ತಾರೆ. ಅದು ಬೆಂಗಳೂರಿಗೆ ಬರುತ್ತದೆ. ಆಮೇಲೆ ತಗ್ಗಿರುವ ಪ್ರದೇಶಗಳಲ್ಲಿ ಕೆರೆ ಬಳಸಿ ಕೂಡ ಬೆಳೆಯುತ್ತಾರೆ. ಇನ್ನು ಕರ್ನಾಟಕದ ಬೇರೆ ಬೇರೆ ಕಡೆ ಭತ್ತ, ರಾಗಿ, ಜೋಳ, ವಗೈರೆ ಬೆಳೆಯುತ್ತಾರೆ. ಎಲ್ಲಾ ಕಡೆ ಸಕ್ಕರೆ ಕಾರ್ಖಾನೆಗಳು ನಡೆಯುತ್ತಿವೆ. ಉದಾಹರಣೆಗೆ ಬೀದರ್‌ಗೆ ಹೋಗುವಾಗ ಹುಮ್ನಾಬಾದ್ ಧಾಟಿದ ಮೇಲೆ ಹಳ್ಳಿಖೇದ್ ಸಕ್ಕರೆ ಕಾರ್ಖಾನೆ ಇದೆ, ಆ ಕಾರ್ಖಾನೆಗೆ ಕಬ್ಬು ಎಲ್ಲಿಂದ ಬರುತ್ತದೆ? ಇದೇ ಪಂಪ್‌ಸೆಟ್‌ಗಳಿಂದ ರೈತರರು ಎತ್ತಿ ನೀರು ಕೊಡುತ್ತಿದ್ದಾರೆ. ಇದಷ್ಟಲ್ಲದೆ ನಮ್ಮ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂದಾಪುರ ತಾಲ್ಲೂಕು ಬಳಿ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಮಲಗೇಬಿಟ್ಟಿತ್ತು. ನಾನು ಅದಕ್ಕೆ ಒಂದೋ ಎರಡೋ ಕೋಟಿ ಹಣ ಕೊಟ್ಟು ರೀಸ್ಟಾರ್ಟ್ ಮಾಡಿಸಿ ಮತ್ತ ಕೆಲವು ಲಿಫ್ಟ್ ಇರಿಗೇಷನ್‌ಗಳನ್ನೂ ನಾನು ಮಂಜೂರು ಮಾಡಿದೆ, ವರಾಹಿ ತಮಗೆಲ್ಲಾ ಗೊತ್ತಿರುವಂತೆ, ನೀರು ಹರಿದು ಸಮುದ್ರದ ಕಡೆ ಹೋಗುವುದನ್ನು ತಪ್ಪಿಸಬೇಕು. ರೈತರೆಲ್ಲಾ ಕಬ್ಬು ಬೆಳೆಯಲಿ ಎಂಬ ದೃಷ್ಟಿಯಿಂದ ಕ್ರಮ ಕೈಗೊಂಡೆ. ಇದರಿಂದ ಆ ಸಕ್ಕರೆ ಕಾರ್ಖಾನೆ ಅಲ್ಲಿ ಉಳಿದುಕೊಂಡಿತ್ತು. ಇವತ್ತು ನಾವು ಕರೆಂಟ್ ಫ್ರಿ ಮಾಡದೇ ಇದ್ದರೆ ರೈತರ ಪರಿಸ್ಥಿತಿ ಬಹಳ ಚಿಂತಾಜನಕವಾಗುತ್ತದೆ. ನಾವು ಕರೆಂಟ್ ಕೊಡುವ ಆ ವಿತರಣಾ ಕ್ರಮ ಸರಿಮಾಡಬೇಕು.

ನಿಮ್ಮ ಸೇಡಂ ತಾಲ್ಲೂಕಿನಲ್ಲಿ ಸಬ್‌ಸ್ಟೇಷನ್ ಅನ್ನು ನಾವು ಮಂಜೂರು ಮಾಡಿದ್ದೆವು, ನಿಮ್ಮ ಕಾಲದಲ್ಲಿ ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ತುಮಕೂರು ಡಿಸ್ಟ್ರಿಕ್‌ನಲ್ಲಿ ಅದೆಂಥದ್ದೋ ಕ್ರಾಸಿದೆಯಲ್ಲಾ, ನಿಟ್ಟೂರು, ಚೇಳೂರು, ಕಿಬ್ಬನಹಳ್ಳಿ ಕ್ರಾಸ್ ನಾನು ಮುಖ್ಯ ಮಂತ್ರಿ ಇದ್ದಾಗ ಹೋಗಿ ಈ ಮೂರು ಕ್ರಾಸ್‌ಗಳನ್ನು ಸ್ಟಾರ್ಟ್ ಮಾಡಿಸಿದೆ. ಇದು ಒಂದು ಉದಾಹರಣೆ.

ಅವೆಲ್ಲಾ ಕಂಪ್ಲೀಟಾಗಿವೆ, ಜನರೂ ಕೂಡ್ ಸಂತೋಷವಾಗಿದ್ದಾರೆ. ಆ ಪ್ರಶ್ನೆ ಬೇರೆ. ನಾನು ಏಕೆ ಹೇಳುತ್ತೇನೆಂದರೆ ವಿತರಣಾ ಸಿಸ್ಟಮ್ ಅನ್ನು ನಾವು ಅಫ್ ಟು ಡೇಟು ಮಾಡದೇ ಇದ್ದರೆ ರೈತರ ಪಂಪ್‌ಸೆಟ್‌ಗಳಿಗೆ ಕರೆಂಟ್ ಸರಿಯಾಗಿ ಸಿಕ್ಕುವುದಿಲ್ಲ. ಇದು ಒಂದು ವಿಚಾರ. ಮತ್ತೊಂದೇನೆಂದರೆ ಇವತ್ತು ಪಿಎಲ್‌ಡಿ ಬ್ಯಾಂಕಿನಿಂದ ಸಾಲ ತೆಗೆಯುತ್ತಾನೆ ರೈತ. ಅವನಿಗೆ ಕಾಲಕ್ಕೆ ಸರಿಯಾಗಿ ನಾವು ಕೊಡದೇ ಇದ್ದರೆ ನಾವೇ ಸಾಲ ಕೊಡಿಸಿ ಅವನ ಕತ್ತು ಹಿಸುಕಿದಂತಾಗುತ್ತದೆ. ಅದು ಮಾಡಬಾರದು. ಎರಡು ಮೂರು ವರ್ಷವಲ್ಲ, ನಾಲ್ಕೈದು ವರ್ಷವಾಗಿ ಕನೆಕ್ಷನ್ ಕೊಡಬೇಕಾಗಿರುವುದು ಹಾಗೆ ಬಿದ್ದಿವೆ. ಅವರು ಕೊಟ್ಟ ಅರ್ಜಿ ಅಲ್ಲೇ ಬಿದ್ದಿವೆ. ಅಲ್ಲಿ ಲಂಚದ ಹಾವಳಿ ಅತಿಯಾಗಿದೆ. ಇದು ನನ್ನ ಕಾಲದಲ್ಲಿ ಇರಲಿಲ್ಲ ಎಂದು ನಾನು ಹೇಳುತ್ತಿಲ್ಲ. ಕದ್ದುಮುಚ್ಚಿ ನನ್ನ ಕಾಲ ಆಗಿರಲಿ, ನಿಮ್ಮ ಕಾಲ ಆಗಿರಲಿ, ಅವು ಸುಡುಗಾಡು ನಡೆಯುತ್ತಿರುತ್ತವೆ. ಎಲ್ಲಿ ಡಿಮ್ಯಾಂಡ್ ಇದೆಯೋ ಅಲ್ಲಿ ಇದೆಲ್ಲಾ ಕೂಡ ಸ್ಟಾರ್ಟಾಗಿ ಬಿಡುತ್ತದೆ. ಎಲ್ಲೆಲ್ಲಿ ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಡಬೇಕಾದ್ದು ಇವೆ ಅದರ ಬಗ್ಗೆ ಗಮನಕೊಡದಿದ್ದರೆ ಪೆಟ್ಟು ಸಹಜವಾಗಿ ರೈತರ

ಮೇಲೆ ಬಿದ್ದು ಬಿಡುತ್ತದೆ. ಅನಂತರ ಆ ಕಂಬಗಳನ್ನು ಲಿಬರಲೈಸ್ ಮಾಡಿರುವುದನ್ನು ಮುಂದುವರೆಸಿ. ಈಗ ಕಾನೂನು ಏನಿದೆಯೋ ನನಗೆ ಗೊತ್ತಿಲ್ಲ. ಐದು ಆರು ಏಳೋ ಕಂಬ ಎಂದು ಯೋಚನೆ ಮಾಡಬೇಡಿ, ಕೊಡಿ ಕನೆಕ್ಷನ್ ಎಂದು ನಾನು ಹೇಳುತ್ತೇನೆ. ಹಾಗೆ ಕೊಡದೇ ಇದ್ದರೆ ರೈತ ಹಾಳಾಗಿ ಹೋಗುತ್ತಾನೆ. ಸಾಲ ಒಂದು ಕಡೆ ಕೊಟ್ಟು ಕನೆಕ್ಷನ್ ನಾವೇ ಕೊಡುವುದಿಲ್ಲ. ಅಂದರೆ ನಾವೇ ಅವನನ್ನು ಸಾಲಗಾರನನ್ನಾಗಿ ಮಾಡಿದ ಹಾಗಾಗುತ್ತದೆ. ಆದ್ದರಿಂದ ಇಲ್ಲಿ ಈ ತೀರ್ಥಹಳ್ಳಿ ಸೀನಪ್ಪ ಏನು ಹೇಳುತ್ತಾನೆ ಎಂದರೆ ಸ್ವಾಮಿ ನನಗೆ ಕಟ್ಟುವುದಕ್ಕಾಗುವುದಿಲ್ಲ. ನೋಟೀಸ್ ಕಾಪಿಗೀಪಿ ಎಲ್ಲಾ ಬಂದಿದೆ, ಬೇಕಾದರೆ ಅದನ್ನು ತಮಗೆ ನಾನು ಕಳುಹಿಸಿ ಕೊಡುತ್ತೇನೆ. ಕೂಲಂಕಷವಾಗಿ ವಿಚಾರ ಮಾಡಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇವರಿಗೆ 7968 ರೂ. ಬಡ್ಡಿಯನ್ನು ಮತ್ತು ಅಸಲನ್ನು ಕೆಇಬಿ ಇಲಾಖೆಯವರೇ ಕಟ್ಟಬೇಕೆಂದು ನಾನು ಕೇಳಿಕೊಳ್ಳುತ್ತೇನೆಂದು ಆತ ಹೇಳಿದ್ದಾನೆ. ಆದ್ದರಿಂದ ದಯವಿಟ್ಟು ನೀವು ಆ ರೈತನ ನೋವನ್ನು ಕುಲಂಕಷವಾಗಿ ಪರಿಶೀಲನೆ ಮಾಡಿ ಅಸಲು ಬಡ್ಡಿಗಿಡ್ಡಿ ಕಟ್ಟಿ ಕನೆಕ್ಷನ್ ಕೊಡಿಸಿ ಮಾನ ಮರ್ಯಾದೆ ಉಳಿಸಿ ಎಂದು ಆ ಸೀನಪ್ಪ ಕೇಳಿಕೊಂಡಿದ್ದಾನೆ. ಇದರ ಬಗ್ಗೆ ವಿಚಾರಮಾಡಿ, ಜೆರಾಕ್ಸ್ ಕಾಪಿ ಕೊಟ್ಟಿದ್ದಾನೆ. ಇನ್ನು ಇದರ ಬಗ್ಗೆ ನಾನು ಹೇಳುವುದಿಲ್ಲ. ಅನಂತರ, ಇನ್ನು ಫ್ರೀ ಸಪ್ಲೈ ಆಫ್ ಪವರ್ ಕೊಡಬೇಕೇ ಬೇಡವೇ ಎಂಬುದು ಮುಖ್ಯ ಅಂಶ. ಅಖಂಡ ಭಾರತದಲ್ಲೇ ರೈತರ ಪಂಪ್‌ಸೆಟ್‌ಗೆ ಪುಕ್ಕಟೆಯಾಗಿ ವಿದ್ಯುತ್ತನ್ನು ಕೊಟ್ಟಿದ್ದುದು. ನಾನು ಮುಖ್ಯಮಂತ್ರಿಯಾಗಿದ್ದಾಗ, ಬೇರೆ ಯಾವ ರಾಜ್ಯದಲ್ಲೂ ಈ ರೀತಿ ಮಾಡಿಲ್ಲವೆಂದು ನಾನು ಕೇಳಿದ್ದೇನೆ. ಹಾಗೇನಾದರೂ ಬೇರೆ ರಾಜ್ಯದವರೇನಾದರೂ ಮಾಡಿದ್ದರೆ ತಾವು ಹೇಳಬಹುದು. ನನಗೆ ಗೊತ್ತಿರುವ ಹಾಗೆ ಯಾರೂ ಮಾಡಿಲ್ಲ. ಏತಕ್ಕೆ ಮಾಡಿದೆವು? ಈ ವಿಷಯ ಕೂಡಈಚೆಗೆ ಚರ್ಚೆಗೆ ಬಂತು. ನಾವು ಹತ್ತು ಹೆಚ್‌ಪಿ ಯವರೆಗೆ ಪುಕ್ಕಟೆಯಾಗಿ ಕೊಡಬೇಕು ಎಂದು ಮಾಡಿದ್ದುದು ಒಬ್ಬ ರೈತರಿಗಾಗಿ ಅಲ್ಲ. ಇದರಿಂದ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ಗೆ, ಸುಮಾರು 25 ರಿಂದ 30-35 ಕೋಟಿ ರೂ. ವರೆಗೂ ಹಣ ಹೋಗುತ್ತದೆ. ಅದು ಈಗ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಅದು ವರ್ಷ ವರ್ಷ ವೇರಿ ಆಗುತ್ತಿರುತ್ತದೆ. ನಾನು ಇಷ್ಟೇ ಹೇಳುವುದು, ಈ ಹಣವನ್ನು ವಸೂಲು ಮಾಡಬೇಕಾದರೆ ಮೀಟರ್ ರೀಡಿಂಗ್ ಅಲ್ಲಿ ತಪ್ಪು ತಪ್ಪಾಗಿ ತೋರಿಸುವುದು, ಇವೆಲ್ಲಾ ಕೂಡ ತೊಂದರೆ ಬರುತ್ತದೆ ಎಂದು ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನಿಂದ ಕೂಡ ಅಭಿಪ್ರಾಯವನ್ನು ತೆಗೆದುಕೊಂಡೆವು. ನಾವೇ ತೀರ್ಮಾನ ಮಾಡಿಲ್ಲ. ಎಲೆಕ್ಟ್ರಿಸಿಟಿ ಬೋರ್ಡ್‌ನವರ ಅಭಿಪ್ರಾಯವನ್ನು ತೆಗೆದುಕೊಂಡು ಹಣವನ್ನು ವಸೂಲು ಮಾಡುವುದಕ್ಕೆ ಆಗದೆ ನಮ್ಮವರು ತಿರುಗಾಟ, ಒದ್ದಾಟ ಮಾಡುವ ಬದಲು, ಕಂಪ್ಲೇಂಟ್ ತೆಗೆದುಕೊಂಡು ರಿಪೇರಿ ಮಾಡುವ ಬದಲು ಇದೊಂದು ಸಾರಿ ಬಿಟ್ಟುಬಿಡುವುದು ಬಾರಿ ಒಳ್ಳೆಯದೆಂದು ಅವರ ಒಪ್ಪಿಗೆಯ ಮೇಲೆಯೇ ನಾವು ಮಾಡಿದ್ದುದು.

ಹತ್ತು ಹೆಚ್‌ಪಿ ಜಾಸ್ತಿ ಇದ್ದರೆ ಅದಕ್ಕೆ ಛಾರ್ಜ್ ಮಾಡಬೇಕೆಂದು ಇತ್ತು. ಮಾನ್ಯ ಗುಂಡೂ ರಾವ್‌ರವರ ಕಾಲದಲ್ಲಿ ಹೆಚ್‌ಪಿಗೆ 50 ರೂಪಾಯಿ ಎಂದು ಮಾಡಿದರು ಅದಕ್ಕಿಂತ ಮೊದಲು ಮೀಟರ್ ಇದ್ದವು. ತಮಗೆಲ್ಲಾ ಗೊತ್ತಿರುವ ಹಾಗೆ ಇಷ್ಟೆಲ್ಲಾ ಮಾಡಿದ್ದರು. ಅವರು ಮಾಡಿದ್ದುದು ತಪ್ಪು, ನಾವು ಮಾಡಿದ್ದುದು ಹೈಕ್ಲಾಸ್ ಎನ್ನುವ ಮಾತನ್ನು ನಾನು ಆಡುತ್ತಿಲ್ಲ. That is not my intentional at all. ಫರ್ದರ್ ಇಂಪ್ರೂವ್‌ಮೆಂಟ್ ಎಂದು ನಾವು ಅದನ್ನು ಮಾಡಿದೆವು. ಇದರಿಂದ ರೈತರಿಗೆ ಸಂತೋಷವಾಯಿತು. ಇವತ್ತು ತಾವು ದಯವಿಟ್ಟು ಹೋಗಿ ನೋಡಿಬನ್ನಿ. ಬೆಳೆ ಬೆಳೆದಿರುವ ನೂರಕ್ಕೆ ಎಂಭತ್ತು ಪರ್ಸೆಂಟ್ ರೈತರ ಬೆಳೆಗಳು ಸುಟ್ಟುಹೋಗಿದೆ. ನಾನು ಕೆಲವು ಕಡೆಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ನಿಜವಾಗಲೂ ನೋಡಿ

ನನಗೆ ಹೊಟ್ಟೆ ಉರಿದುಹೋಯಿತು. ಭತ್ತ ಸುಟ್ಟಿರುವುದು, ರಾಗಿ ಸುಟ್ಟಿರುವುದು, ಹಿಪ್ಪುನೇರಳೆ ಒಣಗಿರುವುದು ಇದನ್ನೆಲ್ಲಾ ನೋಡಿದ್ದೇನೆ.

ರೈತರು ಪಾಪ ಸ್ವಲ್ಪ ಸ್ವಲ್ಪ ಜಾಗದಲ್ಲಿ ಹಾಕಿಕೊಂಡು ಜೀವನ ಮಾಡುತ್ತಾರೆ, ಅವರೆಲ್ಲರೂ ಸುಸ್ತು ಹೊಡೆದುಬಿಟ್ಟಿದ್ದಾರೆ. Between 70 to 80 percent of the farmers, either for non-supply or irregular supply ಅಥವಾ ವೋಲ್ಟೇಜ್ ಡ್ರಾಫ್ ಆಗುವುದರಿಂದ ಇತ್ಯಾದಿ ಇತ್ಯಾದಿಯಾಗಿ ಅವರು ಬೆಳೆಯನ್ನೇ ಕಳೆದುಕೊಂಡಿರುವ ಪರಿಸ್ಥಿತಿ ಉದ್ಭವವಾಗಿದೆ. ಈ ಸಂದರ್ಭದಲ್ಲಿ ತಮ್ಮ ಗಮನ ಸೆಳೆಯುವುದು ಇಷ್ಟೆ. ನಮ್ಮ ಕಾಲದಲ್ಲಿ ಏತಕ್ಕೆ ಫ್ರೀ ಮಾಡಿದೆವು ಎನ್ನುವ ವಿಚಾರವನ್ನು ತಾವು ತಿಳಿದುಕೊಳ್ಳಬೇಕು, ಇವತ್ತು ನಾವು ಫ್ರೀ ಮಾಡಿದರೂ ಕೂಡ ಒಬ್ಬ ರೈತ, ಅವನೇನು ದೊಡ್ಡ ಸಾಹುಕಾರನಾಗಿದ್ದಾನೆಯೇ ಕರ್ನಾಟಕ ರಾಜ್ಯದಲ್ಲಿ? ಫ್ರೀ ಮಾಡಿದ ಮೇಲೆ ಯಾವ ರೈತ ಸಹಾಕಾರನಾಗಿದ್ದಾನೆ? ರೈತ ಹಿಂದೆ ಯಾವ ಮಟ್ಟದಲ್ಲಿ ಆರ್ಥಿಕವಾಗಿ ಇದ್ದ ಅದೇ ಮಟ್ಟದಲ್ಲಿ ಇದ್ದಾನೆಯೇ ವಿನಹ ಅದಕ್ಕಿಂತ ಬೆಳವಣಿಗೆಯಾಗಿರುವುದು ನಾನಂತೂ ಕಂಡಿಲ್ಲ, ಫ್ರೀ ಮಾಡಿದ ಮೇಲೂ ಕೂಡ, ಇದು ನನ್ನ ಮನಸ್ಸಿನ ವೈಯಕ್ತಿಕ ಅನಿಸಿಕೆ. ಅವನಿಗೆ ರಿಯಾಯಿತಿ ಕೊಟ್ಟರೂ ಒಂದೇ, ಬಿಟ್ಟರೂ ಒಂದೇ. ನಾಯಿ ಬಾಲ ಡೊಂಕು ಎನ್ನುವ ಅಭಿಪ್ರಾಯ ಇಟ್ಟುಕೊಂಡು ನೀವು ಮಾತನಾಡಿದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ರೈತ ದೇಶದ ಬೆನ್ನೆಲುಬು. ಅವನಿಗೆ ಸಾಕಷ್ಟು ಶಕ್ತಿಯನ್ನು ಕೊಡಬೇಕು ಎಂದು ಅವನನ್ನು ಹಾಸ್ಯ ಮಾಡಬಾರದು. ಒಂದಲ್ಲ, ಎರಡಲ್ಲ ಆ ರೀತಿ ಅವನಿಗೆ ಉಪಯೋಗ ಮಾಡುತ್ತಾ ಹೋಗಬೇಕು. ಬರೀ ಲ್ಯಾಂಡ್ ಓನರ್ಸ್ ಬಗ್ಗೆ ನಾನು ಮಾತನಾಡುತ್ತಿಲ್ಲ. ಇವತ್ತು ನೀರು ಬಿದ್ದು ಅಲ್ಲಿ ಬೆಳೆ ತೆಗೆಯುವುದಕ್ಕೆ ಹೋದರೆ ಅಕ್ಕಪಕ್ಕದಲ್ಲಿರುವ ಬಡ ಕೃಷಿ ಕಾರ್ಮಿಕರು ಏನಿರುತ್ತಾರಲ್ಲಾ, those who do not own any land of their own.

ಅವರಿಗೆ ಅಲ್ಲಿ ಕೂಲಿ ಕೆಲಸ ಸಿಗುತ್ತದೆ. ಇವತ್ತು ಅದನ್ನೂ ಕೂಡ ಗಮನದಲ್ಲಿಡಬೇಕು. ಕೃಷಿ ಕಾರ್ಮಿಕ, ಮತ್ತು ಕೃಷಿಕ ಎರಡನ್ನೂ ಕೂಡ ಗಮನದಲ್ಲಿಟ್ಟು ವಿಚಾರ ಮಾಡಬೇಕು. ಈ ಸಂದರ್ಭದಲ್ಲಿ ನಾನು ಹೇಳುವುದು, ಸಂಪೂರ್ಣವಾಗಿ ಪುಕ್ಕಟೆಯಾಗಿ ಮಾಡಿರುವುದನ್ನು ಇವತ್ತು ನೀವು ದಯವಿಟ್ಟು ಮುಟ್ಟುವುದಕ್ಕೆ ಹೋಗಬೇಡಿ. ಆ ರೈತರ ಕತ್ತನ್ನು ಹಿಸುಕುವುದಕ್ಕೆ ಹೋಗಬಾರದು. ಕರ್ನಾಟಕ ರಾಜ್ಯದಲ್ಲಿ ರೈತರು ಏನು ಬೆಳೆಯನ್ನು ಬೆಳೆಯುತ್ತಿದ್ದಾರೆ, ಇವತ್ತು ಆ ಬೆಳೆಗಳು ಬರುತ್ತಿರಲಿ. ಇತ್ತೀಚೆಗೆ ನಾನು ಮೊನ್ನೆ ಹೋದಾಗ ಕೂಡ ಸನ್ ಫ್ಲವರ್‌ನ್ನು ನೋಡಿದೆ. ಅಚ್ಚುಯಲಿ Karnataka is the leader in growing sunflower. ನನಗ ಗೊತ್ತಿರುವ ಹಾಗೆ ಅದು ಇದೆ. ಸನ್ ಫ್ಲವರ್ ಒಂದೇ ಅಲ್ಲ, ಅನೇಕವುಗಳಲ್ಲಿ ಕರ್ನಾಟಕ ಎಲ್ಲಾ ರಾಜ್ಯಗಳಿಗಿಂತ ಮುಂದಿದೆ.

ಉದಾ: ಮಧ್ಯಪ್ರದೇಶದವರು ಸೋಯಾಬೀನ್‌ನಲ್ಲಿ ಬಹಳ ಲೀಡರ್ಸ್ ಇದ್ದಾರೆ. ಶೇಂಗಾ ಬೆಳೆಯುವುದರಲ್ಲಿ ಗುಜರಾತ್‌ನವರು ಮುಂದಿದ್ದಾರೆ. ನಾವೂ ಶೇಂಗಾ ಬೆಳೆಯುತ್ತೇವೆ, ಅನಂತರ ಸೂರ್ಯಕಾಂತಿ ಬೆಳೆಯನ್ನು ಬೆಳೆಯುತ್ತೇವೆ. ಅನೇಕ ಬೆಳೆಗಳಲ್ಲೂ ನಾವೆಲ್ಲ ಲೀಡರ್ಸ್ ಆಗಿದ್ದೇವೆ. We have fertile land ತಮಗೆಲ್ಲಾ ಗೊತ್ತಿರುವ ಹಾಗೆ. ದೊಡ್ಡ ದೊಡ್ಡ ಡ್ಯಾಮ್‌ನಿಂದ ನೀರನ್ನು ತೆಗೆಯಿರಿ, ಮೂರನೇ ಒಂದು ಭಾಗ ಟೋಟಲ್ ಕೃಷಿಗೆ ಯೋಗ್ಯ ಇರುವ ಭೂಮಿ ಇದ್ದರೆ 2/3 we are depending upon small irrigation. ಮೀಡಿಯಂ ಬಹಳ ಕಡಿಮೆ. ಸ್ಮಾಲ್ ಇರಿಗೇಷನ್‌ನನ್ನು ನಾವು ಮಾಡುತ್ತಿದ್ದೇವೆ. ಅಂಡರ್ ಗ್ರೌಂಡ್‌ನಿಂದ ಟ್ಯಾಪ್ ಮಾಡಿ ನೀರನ್ನು ತೆಗೆಯಬೇಕು ಎಂದರೆ ಬೋರ್‌ವೆಲ್ ನಮಗೆ ಅನಿವಾರ್ಯವಾಗಿ ಬೇಕಾಗಿದೆ.

ಅಥವಾ ಓಪನ್ ವೆಲ್‌ನಲ್ಲಿರುವ ನೀರು ಕೂಡ ಅನಿವಾರ್ಯವಾಗಿ ಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲೂ ಕೂಡ ಆ ರೈತರಿಗೆ ಒಂದು ಸ್ವಲ್ಪವೂ ಕೂಡ ಊನವಾಗದ ಹಾಗೆ, ತೊಂದರೆಯಾಗದ ಹಾಗೆ ನೀವು ನೋಡಿಕೊಂಡು ಹೋಗಬೇಕು. ಅದನ್ನು ಬಿಟ್ಟು ನೀವು ತೆಗೆದುಕೊಂಡು ಹೋಗಿ ಮೀಟರ್ ಹಾಕುವುದಾಗಲಿ, ಇಲ್ಲ ಒಂದು ಹಾರ್ಸ್ ಪವರ್‌ಗೆ ಇಷ್ಟು ಹಣವನ್ನು ಕಟ್ಟಬೇಕು ಎಂದು ಹೇಳಿ ಹಳೆಯ ಪದ್ಧತಿಗೆ ನೀವು ಹೋಗುವುದಾಗಲಿ ಮಾಡಿದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಪಟೇಲರು ಒಂದು ಪದಪ್ರಯೋಗ ಮಾಡಿದ್ದಾರೆ, ಮೆಯಿನ್‌ಟೆನೆನ್ಸ್ ಕಾಸ್ಟ್, ಯಾವುದೋ ಒಂದು ಹೆಸರನ್ನು ಇಟ್ಟಿದ್ದೀರಿ. ಹಣ ವಸೂಲು ಮಾಡಬೇಕಾದರೆ ಅದಕ್ಕೆ ನಾಕರಣವಾಗಬೇಕಲ್ಲಾ, ತೊಟ್ಟಿಲಿಗೆ ಹಾಕಿ ತೂಗಬೇಕಲ್ಲಾ. ಅದಕ್ಕಾಗಿ ನೀವು ಆ ರೀತಿ ಮಾಡಬೇಕು ಎನ್ನುವ ವಿಚಾರ ಮಾಡಬೇಡಿ. ಆದ್ದರಿಂದ ನಾನು ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಯಾವುದೇ ಸಂದರ್ಭದಲ್ಲಿ ಕೂಡ ಈ ರೈತರಿಗೆ ಪುಕ್ಕಟೆಯಾಗಿ ಈಗ ಇರುವ ಪದ್ಧತಿಯನ್ನು ಇಲ್ಲಿಯವರೆಗೂ ಕೂಡ ಮುಂದುವರೆಸಿಕೊಂಡು ಬಂದೆವು. ಆಮೇಲೆ ಹೇಳಿಕೆಗಳು ಬಂದವು. ನಾನು ಅಧಿಕಾರ ಬಿಟ್ಟಮೇಲೆ ಬಂಗಾರಪ್ಪನವರ ಕಾಲದಲ್ಲಿ ಪುಕ್ಕಟೆಯಾಗಿ ವಿದ್ಯುಚ್ಛಕ್ತಿಯನ್ನು ರೈತರ ಪಂಪ್‌ಸೆಟ್‌ಗಳಿಗೆ ಕೊಟ್ಟಿದ್ದು ತಪ್ಪು. ನಾವು ಅದನ್ನು ವಿಮರ್ಶೆ ಮಾಡುತ್ತೇವೆ. ಹಣವನ್ನು ವಸೂಲು ಮಾಡುತ್ತೇವೆ ಎಂದು ಹೇಳಿಕೆಗಳು ಆಮೇಲೆ ಬಂದಿವೆ. ಆಮೇಲೆ ಜನರು ಕೂಡ ದಡ್ಡರೇನಲ್ಲ. ಅದನ್ನು ನೋಡುತ್ತಿದ್ದಾರೆ. ನೀವು ಅಧಿಕಾರಕ್ಕೆ ಬಂದಮೇಲೆ ನೀವೂ ಕೂಡ ಹೇಳಿಕೆಯನ್ನು ಕೊಟ್ಟಿರಿ. ನಿಮ್ಮ ಅರ್ಥ ಬೇರೆ ಇರಬಹುದು. ನೀವು ಕೂಡ ಹೇಳಿಕೆ ಕೊಟ್ಟಿರಿ. ಏನೆಂದು ಎಂದರೆ ಮೆಯಿನ್‌ಟೆನೆನ್ಸ್ ಕಾಸ್ಟ್ ಮತ್ತೊಂದು ಎನ್ನುವುದು. ನಾನು ಹೇಳುವುದು, ಅದು ಒಳ್ಳೆಯದಲ್ಲ ಬೇಡ. ಅದನ್ನು ಮುಟ್ಟುವುದಕ್ಕೂ ಹೋಗಬೇಡಿ. ಅದು ಏನು ಇದೆಯೋ ಅದು ಇರಲಿ. ಇವತ್ತು ಅವರು ಏನು ಹೇಳುತ್ತಿದ್ದಾರೆ, ವಿಶ್ವಬ್ಯಾಂಕ್‌ನವರು ತೊಂದರೆ ಕೊಡುತ್ತಾರೆ, ಮತ್ತೊಂದು ನಾನು ಹೇಳುತ್ತೇನೆ, ವಿಶ್ವ ಬ್ಯಾಂಕಿನ ಅಡಿಯಾಳಾಗಿರುವುದಕ್ಕಾಗುವುದಿಲ್ಲ. ಇವತ್ತು ವಿಶ್ವಬ್ಯಾಂಕಿನವರು ಹೇಳಿದ ಹಾಗೆ ನಾನು ಕೇಳುವುದಕ್ಕೋಸ್ಕರ ನಾನು ಇಲ್ಲ. ನಿಜ ಹಣ ಬೇಕು ಎಂದು ಹೇಳಿ ನಮ್ಮ ಘನತೆ ಗೌರವ, we cannot bow ow head.

ಈಗ ಯಾವ ವಿಶ್ವ ಬ್ಯಾಂಕ್‌ನವರು ಬಂದರೂ ಕೂಡ ಇಲ್ಲಿ ಉಳಿಸುವುದಕ್ಕೆ ಆಗುವುದಿಲ್ಲ, ನಾನು ಹೇಳುತ್ತೇನೆ. ಅದಕ್ಕೆ ನಾವೇ ಜವಾಬ್ದಾರಿ. ನಾವೇ ಅದನ್ನು ನೋಡಿಕೊಳ್ಳಬೇಕು. ಈ ಒಂದು ದೃಷ್ಟಿಯಿಂದ ಆ ರೈತರಿಗೆ ಯಾವುದೇ ರೀತಿಯ ತೊಂದರೆಯನ್ನು ಕೊಡಬಾರದು ಎಂದು ಹೇಳುತ್ತಿದ್ದೇನೆ. ಇದರಲ್ಲಿ ಪಕ್ಷಾತೀತವಾಗಿ ಎಲ್ಲರೂ ಸಿದ್ಧರಾಗಿದ್ದಾರೆ ಎಂದು ನಂಬಿದ್ದೇನೆ. ನಾನು ಎಲ್ಲಾ ಪಕ್ಷಕ್ಕೂ ಕೂಡ ವಿನಂತಿ ಮಾಡುತ್ತೇನೆ. including the party that is ruling now. ದಯವಿಟ್ಟು ರೈತರನ್ನು ಮುಟ್ಟುವುದಕ್ಕೆ ಹೋಗಬೇಡಿ. ನಾನು ನಿಮ್ಮ ಪಕ್ಷದ ಪರವಾಗಿ ಈ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ, ದಯವಿಟ್ಟು ಯಾವ ಒಂದು ತೀರ್ಮಾನ ನನ್ನ ಕಾಲದಲ್ಲಿ ಮಾಡಿದ್ದರೆ I stick on to that. ನಾನು ಅದನ್ನು ಬದಲಾವಣೆ ಮಾಡುವುದಿಲ್ಲ ನೀವು ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯಾಗಿರತಕ್ಕಂಥ ಹಣ ವಸೂಲಾತಿಯನ್ನು ರೈತರ ಪಂಪ್ ಸೆಟ್ ಮೇಲೆ ಹಾಕಿ ಹಣವನ್ನು ವಸೂಲು ಮಾಡುವುದಕ್ಕೆ ಹೋದರೆ ನಾವು ತೀವ್ರವಾಗಿ ಇದನ್ನು ಪ್ರತಿಭಟಿಸುತ್ತೇವೆ, ಮತ್ತು ವಿರೋಧ ಮಾಡುತ್ತೇವೆ. ನಾನು ಈ ಮಾತನ್ನು ಸ್ಪಷ್ಟಪಡಿಸುತ್ತೇನೆ. ದಯವಿಟ್ಟು ಇದಕ್ಕೆ ಅವಕಾಶವನ್ನು ಕೊಡದ ಹಾಗೆ. ತಾವು ಇದನ್ನು ವಿಚಾರ ಮಾಡಿ ಈಗ ಇರುವ ಪದ್ಧತಿಯನ್ನೇ ತಾವೆಲ್ಲಾ ಮುಂದುವರಿಸುತ್ತೀರಿ ಎನ್ನುವ ಮಾತನ್ನು ಹೇಳುತ್ತಾ ಕೆಪಾಸಿಟರ್ಸ್ ಅದನ್ನು ಬೇರೆ ಹಾಕಬೇಕು ಎಂದು ನಾನು ಕೇಳಿದೆ, ಅದರ ಕಾಸ್ಟ್ ಎಷ್ಟಾಗುತ್ತದೆ ಎಂದು?

ಸುಮಾರು ಆರು ನೂರೋ ಎಂ ನೂರೋ ಆಗುತ್ತದೆ. ಮಾನ್ಯ ಬೈರೇಗೌಡರು ಆರು ನೂರು ರೂಪಾಯಿ ಎಂದು ಹೇಳುತ್ತಾರೆ. ಆರು ನೂರು ರೂಪಾಯಿ ಏನು ಪುಕ್ಕಟೆಯಾಗಿ ಬರುತ್ತದೇನು? ಕುಳಿತುಕೊಂಡು ನೀವು ಬರೀ ಆರು ನೂರು ರೂಪಾಯಿ ಎಂದು ಹೇಳಿದರೆ ಹೇಗೆ? ನನ್ನ ಜೊತೆಗೆ ಬನ್ನಿ, ಕೋಲಾರ ಡಿಸ್ಟ್ರಿಕ್ಟ್‌ಗೆ ಹೋಗಿಬರೋಣ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಎಲ್ಲರಿಗಿಂತ ತೊಂದರೆ ಅನುಭವಿಸುತ್ತಿರುವವರು, ಅನಾನುಕೂಲವಾಗಿರುವುದು ನಮಗೆ.

ಶ್ರೀ ಎಸ್. ಬಂಗಾರಪ್ಪ : ಹೌದೌದು. ಅದಕ್ಕೇ ನಾನು ಹೇಳಿದ್ದುದು.

ಶ್ರೀ ಸಿ. ಬೈರೇಗೌಡ : ನೀವು ಏನು ಹೇಳುತ್ತಿದ್ದೀರೋ ಈ ಅಭಿಪ್ರಾಯ ಬಹಳಷ್ಟು ರೈತರದ್ದು ಅಲ್ಲ. ರೈತರನ್ನು ನಾನು ಅನೇಕ ಕಡೆ ಸಂಪರ್ಕಿಸಿದ್ದೇನೆ. ನಮ್ಮದೇ ಪಂಪ್‌ಸೆಟ್ ಇದೆ. ರೈತರಿಗೆ ಬೇಕಾಗಿರುವುದು ಇವತ್ತು ಹಣ ಹಾಕುವುದು, ಅಥವಾ ಮೆಯಿನ್‌ಟೆನೆನ್ಸ್ ಛಾರ್ಜ್ ಅಥವಾ ತಿಂಗಳಿಗೆ ಇಷ್ಟು ಫೀ ಎನ್ನುವುದು ಅದಲ್ಲ ಮುಖ್ಯ. ಕೆಪಾಸಿಟರ್ಸ್ ಕೂಡ ಹಾಕುವುದಕ್ಕೆ ತಯಾರಾಗಿದ್ದಾರೆ. ಅವರಿಗೆ ಬೇಕಾಗಿರುವುದು ಏನೆಂದರೆ ಗುಣಮಟ್ಟದ ವಿದ್ಯುತ್ ಈ ರೀತಿ ಗುಣಮಟ್ಟದ ವಿದ್ಯುತ್ತನ್ನು ಕೊಡಲು ನೀವು ಏನು ಮಾಡುತ್ತೀರೋ ಅದನ್ನು ಮಾಡಿ ಎನ್ನುವುದು ಶೇಕಡಾ 99ರಷ್ಟು ರೈತರ ಒಂದು ಅಭಿಪ್ರಾಯವಾಗಿದೆ. ಇದನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರಿಗೆ ಬೇಕಾಗಿರುವುದು ಗುಣಮಟ್ಟದ ವಿದ್ಯುತ್ತೇ ವಿನಹಃ ಕಣ್ಣು ಮುಚ್ಚಾಲೆಯಾಟ ಆಡುವ ವಿದ್ಯುತ್ತಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರುಗಳು ಈಗತಾನೆ ಟೇಬಲ್ ತಟ್ಟಿದ್ದು ಕೇಳಿದೆ. ನೀವು ರೆಡಿಯಾಗಿರಿ, ಭವಿಷ್ಯದಲ್ಲೂ ಕೂಡ ತಟ್ಟುತ್ತೀರಂತೆ. ನಾಳೆ ನಿಮ್ಮ ಕ್ಷೇತ್ರಕ್ಕೆ ಅಲ್ಲಿಗೆ ಹೋಗಿ. ಆಗ ಗೊತ್ತಾಗುತ್ತದೆ. ಈಗ ತಟ್ಟಿರುವ ಬಿಸಿ ಏನು ಎಂದು ಅಲ್ಲಿ ಗೊತ್ತಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಮಗೂ ಕೂಡ ಸ್ಪಷ್ಟವಾದಂಥ ಅಭಿಪ್ರಾಯವಿದೆ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಏನು ಆಗಿದೆ ಎಂದರೆ ನಾನು ಮಾನ್ಯ ಬಂಗಾರಪ್ಪನವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಜೆ.ಹೆಚ್. ಪಟೇಲ್ ಅವರಿಗೆ ವಯಸ್ಸಾಯಿತು. ಪವರ್ ಕಡಿಮೆ ಆಗಿದೆ ಏಕೆ ಸಿಟ್ಟು ಮಾಡಿಕೊಳ್ಳುತ್ತಾರೆ?

ಅಧ್ಯಕ್ಷರು : ಇಲ್ಲ, ಇಲ್ಲ, ನಾನು ಇದನ್ನು ಒಪ್ಪುವುದಿಲ್ಲ ಬಿಡಿ.

ಶ್ರೀ ಎಸ್. ಬಂಗಾರಪ್ಪ : ನಾನು ಸಭಾಧ್ಯಕ್ಷರ ಅಭಿಪ್ರಾಯವನ್ನು ಒಪ್ಪುತ್ತೇನೆ, ಮಾನ್ಯ ನಂಜೇಗೌಡರ ಅಭಿಪ್ರಾಯವನ್ನು ಒಪ್ಪುವುದಿಲ್ಲ.

ಅಧ್ಯಕ್ಷರು : ನಮ್ಮಿಬ್ಬರದ್ದೂ ಒಂದೇ ಅಭಿಪ್ರಾಯ ಆಗಿರುತ್ತದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ ನಾನು ಒಂದೇ ಒಂದು ಮಾತು ಕೊನೆಯದಾಗಿ ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಪ್ರೊಡಕ್ಷನ್ ಫುಡ್ ಫ್ರಂಟ್‌ನಲ್ಲಿ ಡ್ವಿಂಡಲ್ ಆಗುತ್ತಿದೆ ಅಂದರೆ ಬಿದ್ದು ಹೋಗುತ್ತಿದೆ. ಅದಕ್ಕೆ ನಾಳೆ ಅವಕಾಶ ಆಗಬಾರದು ಎಂಬ ದೃಷ್ಟಿಯಿಂದ 1989Ë90ರಲ್ಲಿ ಲ್ಯಾಕ್ಸ್ ಟನ್ಸ್‌ನಲ್ಲಿ 70 ಚಿಲ್ಲರೆ, 1990-91-62, 1991-92-79, 1992-93-84, 1993-94-84 ಮತ್ತೆ 1994-95ಕ್ಕೆ 81 ಹೀಗೆ ಡ್ವಿಂಡಲ್ ಆಗುತ್ತಿದೆ. ಅದಕ್ಕೆ ನಾನು ಹೇಳುವುದು

ಹೆಚ್ಚು ಹೆಚ್ಚಾಗಿ ಜನ ಪ್ರೊಡಕ್ಷನ್ ಮಾಡಬೇಕು ಎಂದು ಇದ್ದರೆ ಈ ಶಕ್ತಿಯನ್ನು ನೀವು ರೈತರಿಗೆ ತುಂಬಬೇಕಾಗುತ್ತದೆ ಎನ್ನತಕ್ಕ ಅಭಿಪ್ರಾಯವನ್ನು ನಾನು ಕೊಡುತ್ತಿದ್ದೇನೆ, ಅದು ಸಿರಿಯಲ್ಸ್ ಇರಬಹುದು, ಪಲ್ಸಸ್ ಇರಬಹುದು ಆಯಿಲ್ ಸೀಡ್ಸ್, ಶುಗರ್‌ಕೇನ್ ಇತ್ಯಾದಿ. ಆಮೇಲೆ ಪೆನ್‌ಸಂಪ್‌ಷನ್ ಆಫ್ ಪೆಸ್ಟಿಸೈಡ್ಸ್ ಏನು ಇದೆಯಲ್ಲಾ ಅದರಲ್ಲೂ ಕೂಡ ನನಗೆ ಬೆಳವಣಿಗೆ ಕಾಣಿಸುತ್ತಾ ಇಲ್ಲ. 1989-90ರಲ್ಲಿ in terms of tonnes 1990-91ರಲ್ಲಿ 4100 ಚಿಲ್ಲರೆ ಇದೆ, ಹತ್ತಿರ ಹತ್ತಿರವೇ ಇದೆ. 1991-92-4200, 1992-93-4100. ಕಡಿಮೆ ಆಗುತ್ತಿದೆ. 1993-94-4100 ಚಿಲ್ಲರೆ ಇದೆ. 1994-95 ಅಪ್ ಟು ಫೆಬ್ರವರಿ - 3500ಕ್ಕೆ ನಿಂತಿದೆ. ನೀವೇನಾದರೂ ಇದನ್ನು ಮಾಡಿದರೆ ಅದು ಮತ್ತೆ ಕಡಿಮೆ ಆಗತಕ್ಕ ಸಂದರ್ಭ ಕೂಡ ಇದೆ. ಇನ್ನು ಕನ್‌ಸಂಪ್‌ಷನ್ ಆಫ್ ಫರ್ಟಿಲೈಸರ್ಸ್ ಬಹಳ ಇಂಪಾರ್ಟೆಂಟ್. ಏಕೆಂದರೆ ಇದರ ಮೇಲೂ ಕೂಡ ಇದು ನಿಂತಿರುತ್ತದೆ. 1989-90, ನಾನು ಈಗ ಎನ್‌ಪಿಕೆ ಬಗ್ಗೆ ಹೇಳತಕ್ಕಂಥಾದ್ದು.

ಶ್ರೀ ಸಿ. ಬೈರೇಗೌಡ : ಗೊಬ್ಬರದ ಬೆಲೆ, ಅದು ಕೇಂದ್ರ ಸರ್ಕಾರದ ನೀತಿ.......

ಶ್ರೀ ಎಸ್. ಬಂಗಾರಪ್ಪ : ನಾನು ಅದರ ಬಗ್ಗೆನೇ ಹೇಳುತ್ತಿದ್ದೇನೆ, ತಾವು ಕುಳಿತುಕೊಳ್ಳಿ. ನೀವು ಏಕೆ ಜಂಪ್ ಮಾಡುತ್ತಿದ್ದೀರಿ. 1989-90ರಲ್ಲಿ This is in lakh tonnes 7 ಲಕ್ಷದ 80 ಸಾವಿರ. 1990-91-8 ಲಕ್ಷದ 38 ಸಾವಿರ. 1990-95ರಲ್ಲಿ 9 ಸಾವಿರ ಚಿಲ್ಲರೆ. 1992-93-8 ಲಕ್ಷ ಚಿಲ್ಲರೆ. 1993-94 8 ಲಕ್ಷ ಚಿಲ್ಲರೆ. 1994-95 ನಾಲ್ಕು ಲಕ್ಷ ಚಿಲ್ಲರೆ. ಅರ್ಧಕ್ಕೆ ಅರ್ಧ ಕಡಿಮೆಯಾಗಿ ಹೋಗುತ್ತದೆ. ಫೇಲ್ಯೂರ್ ಆಗಿದೆ. ಇದರ ಮೇಲೆ ನಿಮ್ಮ ಇಷ್ಟ. ನೀವು ಇದರ ಮೇಲೆ ಕೂಡ I am foreËwarning you ನಾಳೆ Consumption of fertilisers ನಿಂದ ಹಣ ಕಟ್ಟುವುದಕ್ಕೆ ಆಗದೇ ಅದರಿಂದ ರೈತರಿಗೆ ಪೆಟ್ಟು ಬೀಳುತ್ತದೆ ಎಂಬ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಇಷ್ಟು ಮಾತನ್ನು ಮಾನ್ಯ ಸಭಾಧ್ಯಕ್ಷರಿಗೆ ಹೇಳಿ ಯಾವುದೇ ಸಂದರ್ಭದಲ್ಲಿ ಕೂಡ ರೈತರ ಪಂಪುಸೆಟ್ಟಿಗೆ ವಿದ್ಯುಚ್ಛಕ್ತಿ ಕೊಡತಕ್ಕ ವಿಚಾರದಲ್ಲಿ ಈಗ ಇರತಕ್ಕ ಪದ್ಧತಿಯನ್ನು ಹೊರಗೆ ಹೋಗಬಾರದು. ಈ ಪದ್ಧತಿಯನ್ನೇ ಮುಂದುರಿಸಿಕೊಂಡು ಹೋಗಬೇಕು. ಯಾವುದೇ ಕಾಲದಲ್ಲಿ ಕೂಡ ರೈತರಿಗೆ ನೋವಾಗುವ ರೀತಿಯಲ್ಲಿ ತಾವು ನಡೆದುಕೊಳ್ಳಬೇಕು ಎನ್ನತಕ್ಕ ಒತ್ತಡವನ್ನು ನಾವು ತರುತ್ತಿದ್ದೇವೆ, ಈ ಚರ್ಚೆಯಲ್ಲಿ, ನೀವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಅಲ್ಪ ಮತ ಅಥವಾ ಬಹು ಮತದ ಬಗ್ಗೆ ಗಮನ ಕೊಡದೆ ರೈತರ ಭವಿಷ್ಯದ ಬಗ್ಗೆ ಚಿಂತನೆ ಮಾಡುತ್ತಾ ಉತ್ತರ ಕೊಡುತ್ತೀರಿ ಎನ್ನತಕ್ಕ ನಂಬಿಕೆಯನ್ನು ಇಟ್ಟು ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ, ನಮಸ್ಕಾರ.

+ ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಭಾಧ್ಯಕ್ಷರೇ, ವಿದ್ಯುಚ್ಛಕ್ತಿಯ ಕೊರತೆ ಮತ್ತು ರೈತರ ಪಂಪುಸೆಟ್ಟಿಗೆ ಈಗ ಕೊಡುತ್ತಿರುವ ಉಚಿತ ವಿದ್ಯುತ್ ಬಗ್ಗೆ ಮಾನ್ಯ ಬಂಗಾರಪ್ಪನವರು ಬಹಳ ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲ್ ಅವರು ಎರಡನೆಯ ಸಾರಿ ವಿದ್ಯುಚ್ಛಕ್ತಿ ಮಂತ್ರಿಯಾಗಿ ಸಾಕಷ್ಟು ಅನುಭವ ಇರತಕ್ಕಂಥ ಒಬ್ಬ ಹಿರಿಯ ಮುಖಂಡರು. ಅವರ ಕಾಲದಲ್ಲಿ ನಾವು ಬಹಳಷ್ಟು ನಿರೀಕ್ಷಣೆಯನ್ನು ಮಾಡಿದ್ದೆವು. ಈ ಮೂರು ತಿಂಗಳಲ್ಲಿ ಎಲ್ಲವನ್ನೂ ಸಹಿತ ಮಾಡುವುದಕ್ಕೆ ಆಗುವುದಿಲ್ಲ ಎಂಬ ತಿಳುವಳಿಕೆ ಎಲ್ಲರಿಗೂ ಇದ್ದರೂ ಸಹ ಎರಡು ಮೂರು ತಿಂಗಳಿಂದ ಒಂದು ರೀತಿಯಾದಂಥ ವ್ಯತ್ಯಯವನ್ನು ರೈತರು ಹಾಗೂ ಸಾರ್ವಜನಿಕರು ಅನುಭವಿಸುತ್ತಾ ಇರತಕ್ಕದ್ದು ಅವರಿಗೂ ಚೆನ್ನಾಗಿ

ಗೊತ್ತಿದೆ. ಅದಕ್ಕೆ ನಾವ್ಯಾರೂ ಕಾರಣವಲ್ಲ. ಅನೇಕ ವರ್ಷಗಳಿಂದ ಹತ್ತಾರು ವರ್ಷಗಳಿಂದ ನಾವು ವಿದ್ಯುಚ್ಛಕ್ತಿ ಬಗ್ಗೆ ನಡೆದುಕೊಂಡಂಥ ರೀತಿ ನಮ್ಮ ಸರ್ಕಾರಗಳು, ಆವತ್ತಿನ ಪರಿಸ್ಥಿತಿಗೆ ಕಾರಣ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಆದರೆ ಸೂಕ್ಷ್ಮವಾಗಿ ಎರಡು ಮೂರು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು 1994ನೆಯ ಇಸವಿಯಲ್ಲಿ 13230 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ನಾವು ಮಾರಾಟ ಮಾಡಿದ್ದೇವೆ. ಈ 13 ಸಾವಿರ ಅಥವಾ 14 ಸಾವಿರ ಮಿಲಿಯನ್ ಯೂನಿಟ್ ಮಾರಾಟದಲ್ಲಿ 3ಸಾವಿರ ಮಿಲಿಯನ್ ಯೂನಿಟ್ ಅದು ಹೊರಗಡೆಯಿಂದ ಬಂದಿರತಕ್ಕ ವಿದ್ಯುಚ್ಛಕ್ತಿ. ನಮ್ಮ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ಸುಮಾರು ಮೂರು ಸಾವಿರ ಕೋಟಿ ರೂಪಾಯಿಯಷ್ಟು ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡುತ್ತಿದೆ ಎಂದು ಹೇಳಿ ನನಗಾದರೂ ಅನಿಸುತ್ತದೆ. ಇವತ್ತಿನ ವಿದ್ಯುಚ್ಛಕ್ತಿ ಲಾಸ್, ಪ್ರಾಫಿಟ್ ತೋರಿಸಿರಬಹುದು. ನಾನು ಹೇಳುತ್ತೇನೆ ಸಂಪೂರ್ಣವಾಗಿ ಈ ಸ್ಥಿತಿಗೆ ಕಾರಣಕರ್ತರು ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನ ಅಧಿಕಾರಿಗಳು ಎಂದು. ಈ ಮಾತನ್ನು ನಾನು ಹೇಳುತ್ತಿದ್ದರೆ ತಪ್ಪಾಗಿ ತಾವು ಭಾವಿಸಿಕೊಳ್ಳಬಾರದು. ಯಾವುದೇ ಸರ್ಕಾರ ಕಾರಣ ಅಲ್ಲ. ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿರತಕ್ಕಂಥ ಅಧಿಕಾರಿಗಳಿಗೆ ಫೈನಾನ್ಷಿಯಲ್ ನಾಲೆಡ್ಜ್ ಇರತಕ್ಕದ್ದು ಆಗಲೀ ಟೆಕ್ನಿಕಲ್ ನಾಲೆಜ್ ಇರತಕ್ಕದ್ದು ಆಗಲೀ ಬಹಳ ಶಾರ್ಟೇಜ್ ಎಂದು ಹೇಳಿ ನನಗೆ ಅನಿಸುತ್ತದೆ.

ಒಂದಾನೊಂದು ಕಾಲದಲ್ಲಿ ಕರ್ನಾಟಕದವರು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿ ಗೋವಾಕ್ಕೆ ಕೊಡುತ್ತಿದ್ದರು. ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಶರಾವತಿ ಕಟ್ಟುವಾಗ ವಿದ್ಯುಚ್ಛಕ್ತಿಯನ್ನು ಯಾರಿಗೆ ಮಾಡಬೇಕು ಎಂದು ಹೇಳಿ ಇದೇ ಸದನದಲ್ಲಿ ಚರ್ಚೆ ಆಗಿದೆ. ಇಂತಹ ಒಂದು ಸ್ಟೇಟ್‌ನಲ್ಲಿ ಇವತ್ತಿನ ದಿವಸ ವಿದ್ಯುಚ್ಛಕ್ತಿ ಡಿಫಿಸಿಟ್ ನೋಡಬೇಕಾದರೆ ಕಾರಣಕರ್ತರು ಸಂಪೂರ್ಣವಾಗಿ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿರತಕ್ಕ ಅಧಿಕಾರಿಗಳು, ಈ ಮಾತನ್ನು ನಾನು ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗಲೂ ಸಹಿತ ಹೇಳಿದ್ದ, ಈಗಲೂ ಹೇಳುತ್ತಿದ್ದೇನೆ ನಾನು ಒಂದು ಉದಾಹರಣೆ ಕೊಡುತ್ತೇನೆ. ವಿದ್ಯುಚ್ಛಕ್ತಿ ಬಗ್ಗೆ ಐ.ಪಿ. ಸೆಟ್‌ಗೆ 42 ಪರ್ಸೆಂಟನ್ನು ನಾವು ಉಪಯೋಗಿಸುತ್ತಿದ್ದೇವೆ ಎನ್ನತಕ್ಕದ್ದು ನಮ್ಮ ಬಜೆಟ್‌ನಲ್ಲಿ ಬಂದಿದೆ. 42 ಪರ್ಸೆಂಟ್ ಉಪಯೋಗಿಸಲಿಲ್ಲ ಎನ್ನತಕ್ಕ ಮಾತನ್ನು ನಾನೂ ಒಪ್ಪುತ್ತೇನೆ, ಮಾನ್ಯ ಬಂಗಾರಪ್ಪನವರೂ ಒಪ್ಪುತ್ತಾರೆ ಮಾನ್ಯ ಬೈರೇಗೌಡರೂ ಒಪ್ಪುತ್ತಾರೆ. ಕಾರಣ ಏಕೆ ಎಂದರೆ ಈ ಫಿಗರ್ಸ್ ಏನು ಇದೆ, ಇದು ಸರಿಯಿಲ್ಲ ಎನ್ನತಕ್ಕ ವಾದವನ್ನು ನಾನು ಹಿಂದೆಯೇ ಒಪ್ಪಿಕೊಂಡಿದ್ದೇನೆ. ಹಿಂದೆ ಒಂದು ಐಪಿ ಸೆಟ್‌ಗೆ 1300 ಯೂನಿಟ್ಸ್ ಎಂದು ಹೇಳಿ ಕ್ಯಾಲ್‌ಕ್ಯುಲೇಟ್ ಮಾಡಿದರು. ಆಮೇಲೆ ಇನ್ನೂ ಜಾಸ್ತಿ ಉಪಯೋಗಿಸಿದ್ದೇವೆ ಎಂದು ಹೇಳಿ ಒಂದು ಐಪಿ ಸೆಟ್‌ಗೆ 2600 ಯೂನಿಟ್ ಎಂದು ಮಾಡಿದರು. ಆಮೇಲೆ ಇನ್ನೂ ಉಪಯೋಗಿಸುತ್ತಿದ್ದೇವೆ ಎಂದು ಹೇಳಿ ಒಂದು ಐಪಿ ಸೆಟ್‌ಗೆ 5000 ಯೂನಿಟ್ ಎಂದು ಮಾಡಿದರು. ಈಗ ಒಂದು ಐಪಿ ಸೆಟ್‌ಗೆ 6200 ಯೂನಿಟ್ ಅನ್ನು ಉಪಯೋಗಿಸುತ್ತಿದ್ದೇವೆ. ಒಂಭತ್ತು ಲಕ್ಷ ಐಪಿ ಸೆಟ್‌ಗೆ 9 ಇಂಟು ಆರು ಎಂದು ಗುಣಿಸಿ 42 ಪರ್ಸೆಂಟ್‌ನ್ನು ಕೊಟ್ಟಿರತಕ್ಕ ಫಿಗರ್ಸ್ ಏನು ಇದೆ, ಇದರ ಬಗ್ಗೆ ನಾನು ಮಾನ್ಯ ದೇವೇಗೌಡರವರನ್ನು ಕೇಳುವುದು ಏನೆಂದರೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಬೇಕು. ತಮ್ಮ ಅಧ್ಯಕ್ಷತೆಯಲ್ಲಿ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ. 42 ಪರ್ಸೆಂಟ್ ವಿದ್ಯುಚ್ಛಕ್ತಿಯನ್ನು ನಾವು ರೈತರಿಗೆ ಕೊಡುತ್ತಿದ್ದೇವೆಯೇ? ಈ ಫಿಗರ್ಸ್ ಕರೆಕ್ಟಾಗಿದೆಯೇ ಎಂದು ನೋಡಬೇಕು. ಇದು ಖಂಡಿತವಾಗಿ ಕರೆಕ್ಟಾಗಿ ಇಲ್ಲ. ಇದರ ಬಗ್ಗೆ ಡಿಸ್ಪ್ಯೂಟ್ ಇದೆ. ತಮ್ಮ ಅಧ್ಯಕ್ಷತೆಯಲ್ಲಿ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ. ಇವರು ಕ್ಯಾಲ್‌ಕ್ಯುಲೇಟ್ ಮಾಡಿರತಕ್ಕದ್ದು ಹೇಗೆ ಎಂದರೆ ಜನರೇಟಿಂಗ್ ಪಾಯಿಂಟ್ ಆಫ್ ವ್ಯೂನಿಂದ ಎಷ್ಟು ಉತ್ಪಾದನೆ ಆಗುತ್ತದೆ, ಆ ಉತ್ಪಾದನೆ ಟವರ್‌ನಿಂದ ಮೀಟರ್‌ರವರೆಗೆ ಲೆಕ್ಕ. ಉತ್ಪಾಧನೆಯಲ್ಲಿ ಲೆಕ್ಕ ಹಾಕಿ ಕೊಡುವುದು, 10 ಸಾವಿರ ಮಿಲಿಯನ್ ಯೂನಿಟ್

ಉತ್ಪಾದನೆ. ಖರ್ಚು ಆಗಿರತಕ್ಕದ್ದು 9 ಸಾವಿರ ಮಿಲಿಯನ್ ಯೂನಿಟ್. ಅಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಎಂದು ಲೆಕ್ಕ ಹಾಕಿಕೊಂಡು ಅದರಲ್ಲಿ ಬಂದಿರತಕ್ಕದ್ದನ್ನು ಗುಣಿಸಿಕೊಂಡು ಮಾಡಿರತಕ್ಕದ್ದಕ್ಕೆ ನಾವು ಒಪ್ಪಿಕೊಳ್ಳಬಾರದು.

ಶ್ರೀ ಜಿ.ಬಿ. ಶಿವಕುಮಾರ್ : ತಾವು ಹೇಳಿದರಲ್ಲಾ 42 ಪರ್ಸೆಂಟ್ ಎಂದು. ಕಳ್ಳತನ ಆಗಿರತಕ್ಕದ್ದು ಎಲ್ಲವನ್ನೂ ಸೇರಿಸಿ ಪುಕ್ಕಟೆ ಕೊಡುತ್ತಿರುವುದನ್ನು ರೈತರ ಲೆಕ್ಕಕ್ಕೆ ಬರೆಸಿರುವುದೇ ಇಲ್ಲಿ ಬಂದಿರುವುದು.

ಶ್ರೀ ಕೆ.ಎನ್. ನಾಗೇಗೌಡ : ಅದನ್ನೇ ನಾನು ಹೇಳಿದೆ. ಜನರೇಟಿಂಗ್ ಪಾಯಿಂಟ್‌ನಿಂದ ಮೀಟರ್ ಪಾಯಿಂಟ್‌ವರೆಗೆ ಲೆಕ್ಕ ಹಾಕಿ ಟ್ರಾನ್ಸ್‌ಮಿಷನ್ ಲಾಸ್ 9-10 ಪರ್ಸೆಂಟ್ ನಮ್ಮ ರಾಜ್ಯದಲ್ಲಿ ಥೆಫ್ಟ್ ಇದೆ. ಮಾನ್ಯ ವೀರೇಂದ್ರ ಪಾಟೀಲ್ ಅವರು ಇದ್ದಾಗ, ನಾನೂ ವೀರೇಂದ್ರ ಪಾಟೀಲರು, ಮಾನ್ಯ ರಾಜಶೇಖರ್ ಮೂರ್ತಿಯವರು, ಪ್ರಭು ಮತ್ತು ಅಲ್ಲಿದ್ದಂತಹ ಅಧಿಕಾರಿಗಳನ್ನು ಕರೆಯಿಸಿ ಪೊಲೀಸ್ ಆಫೀಸರ್ ಆನಂದ್ ಅವರನ್ನು ವಿಜಿಲೆನ್ಸ್ ಆಫೀಸರ್ ಎಂದು ಮಾಡಬೇಕೆಂದು ಹೇಳಿ ಯೋಚನೆ ಮಾಡಿದೆವು. ಅಷ್ಟು ಹೊತ್ತಿಗೆ ವೀರೇಂದ್ರ ಪಾಟೀಲರು ಆರೋಗ್ಯ ಕೆಟ್ಟಿತು ಅದನ್ನು ಅಲ್ಲಿಗೇ ಬಿಟ್ಟೆವು. ನಾನು ಇವತ್ತೂ ಹೇಳುತ್ತೇನೆ. ವಿಜಿಲೆನ್ಸ್ ಎಂದರೆ ಕಳ್ಳತನ ಮಾಡುವುದೇ ಮೇಜರ್ ಸ್ವಾಮಿ. ಅದರಲ್ಲಿ ಎಲ್ಲಾ ಹೆವಿ ಇಂಡಸ್ಟ್ರೀಸ್. ತಾವು ನೋಡಬೇಕು. ತಾವು ಹೈವೇಯಲ್ಲಿ ಹೋದರೆ ವೈಟ್‌ಫೀಲ್ಡ್ ಕಡೆಗೆ ಹೋಗಬೇಕು, ಅಥವಾ ನಮ್ಮ ತುಮಕೂರು ಕಡೆಗೆ ಹೋಗಬೇಕು ಎಲ್ಲಾ ಹೆವಿ ಇಂಡಸ್ಟ್ರೀಸ್‌ಗಳು, ಅಲ್ಲೆಲ್ಲಾ ಇದು ನಡೆಯುತ್ತಿರುತ್ತವೆ ಮತ್ತು ಪೊಲೀಸ್ ಆಫೀಸರ್ಸ್‌ನ್ನು ಹಾಕಿದ್ದೇವೆ. ಆದರೆ ಇಲ್ಲೆಲ್ಲಾ ಥೆಫ್ಟ್ ಆಗುತ್ತಿದೆ. ಆ ಥೆಫ್ಟ್‌ನ್ನು ಇಲ್ಲಿಗೆ ಹಾಕುತ್ತಾರೆ, ಆ ಟ್ರಾನ್ಸ್‌ಮಿಷನ್ ಲಾಸ್ ಕೂಡ ಹಾಕುತ್ತಾರೆ.

ಮಾನ್ಯ ಬಂಗಾರಪ್ಪನವರು ಹೊರಗಡೆ ಹೋದರು. ನನಗೆ ಗೋಲ್ಡ್ ಮೆಡಲ್ ಕೊಟ್ಟರು ಎಂದು ಹೇಳಿದರು. ಗೋಲ್ಡ್ ಮೇಡಲ್ ಅಲ್ಲಿ ಕೊಟ್ಟಿದ್ದುದು. ಗೋಲ್ಡ್ ಮೇಡಲ್ ಅನ್ನು ಎಲ್ಲರೂ ತೆಗೆದುಕೊಂಡು ಬರುತ್ತಾರೆ. ಈ ವಿಚಾರದಲ್ಲಿ ಮೇಲಿನ ಸದನದಲ್ಲಿ ನನಗೆ ಹಾಗೂ ಮಾನ್ಯ ಬಂಗಾರಪ್ಪನವರಿಗೆ ಚರ್ಚೆ ಆಗಿತ್ತು. ಕಾರಣ ಏಕೆ ಎಂದರೆ 25 ಪರ್ಸೆಂಟ್ 26 ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್ ಆದರೂ ಸಹ ಅದನ್ನು 18 ಪರ್ಸೆಂಟ್, ಹದಿನೆಂಟೂವರೆ ಪರ್ಸೆಂಟ್ ಎಂದು ಬರೆದುಕೊಂಡು ಬಂದಿದ್ದಾರೆ ನಮ್ಮ ಅಧಿಕಾರಿಗಳು. ಧೈರ್ಯದಿಂದ ಬರೆದುಕೊಂಡು ಬಂದಿದ್ದಾರೆ. ಆದ್ದರಿಂದ ಈ ಎರಡು ಮೂರು ಕಾರಣದಿಂದ ಇವತ್ತು ಆಲೋಚನೆ ಮಾಡಬೇಕು. ಈ ಒಂದು ಐಪಿ ಸೆಟ್‌ಗಳ ಮೇಲೆ ನಾವೇನು ಕ್ಯಾಲ್ಕ್ಯುಲೇಷನ್ ಹಾಕುತ್ತಿದ್ದೇವೆಲ್ಲಾ ಅದು ಸರಿಯಿದೆಯೇ ಎಂಬುದನ್ನು ನೋಡಬೇಕು. ನಮ್ಮ ಬಂಗಾರಪ್ಪನವರ ಕಾಲದಲ್ಲಿ ನಾವೇ ಕುಳಿತು ಒಂದಷ್ಟು ಐ.ಪಿ. ಸೆಟ್ ಜಾಸ್ತಿ ಮಾಡಬೇಕು ಎಂದು ಮಾಡಿದೆವು. 40 ಸಾವಿರದಿಂದ 60 ಸಾವಿರಕ್ಕೆ ಐಪಿ ಸೆಟ್ ಕೊಟ್ಟುಬಿಟ್ಟೆವು ಒಂದೇ ವರ್ಷ. ಏಳು ಸಾವಿರ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗುತ್ತಾ ಇದ್ದಂತಹ ಕಾಲದಲ್ಲಿ 15 ಸಾವಿರ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಯಿತು. ಆ ವರ್ಷ 15 ಸಾವಿರ ಟ್ರಾನ್ಸ್‌ಫಾರ್ಮರ್ ಆ ವರ್ಷ ಐಪಿ ಸೆಟ್ ಕೊಟ್ಟ ಕಾಲದಲ್ಲಿ ಸುಟ್ಟು ಹೋಯಿತು. ನಾವು ಸಿಸ್ಟಂ ಇಂಪ್ರೂವ್‌ಮೆಂಟ್ ಮಾಡಲಿಲ್ಲ. ಟಿಡಿ ಲಾಸ್ ರೆಡ್ಯೂಸ್ ಮಾಡುವುದಕ್ಕೆ ಹೋಗಲಿಲ್ಲ. ಥೆಫ್ಟನ್ನು ನೋಡುವುದಕ್ಕೆ ಹೋಗಲಿಲ್ಲ, ಜನರೇಟಿಂಗ್ ಪಾಯಿಂಟ್ ಆಡ್ ಮಾಡುವುದಕ್ಕೆ ಹೋಗಲಿಲ್ಲ. ಆದರೆ ಐಪಿ ಸೆಟ್ ಮಾತ್ರ ಹ್ಯಾಡ್ ಮಾಡಿಕೊಂಡು ಬಂದೆವು. ರೂರಲ್ ಎಲೆಕ್ಟ್ರಿಫಿಕೇಷನ್ ಆಡ್ ಮಾಡಿಕೊಂಡು ಬಂದೆವು. ಸ್ಟ್ರೀಟ್ ಲೈಟ್ ಆಡ್ ಮಾಡಿಕೊಂಡು ಬಂದೆವು. From Generation point to the consumption point ಆಡ್ ಮಾಡಿಕೊಂಡು ಬಂದೆವು. ಇಂಡಸ್ಟ್ರಿಯಲ್ ಲೈನ್ ಆಡ್ ಮಾಡಿಕೊಂಡು

ಬಂದೆರು. ಲೋಡ್‌ಗಳನ್ನು ಆಡ್ ಮಾಡಿಕೊಂಡು ಹೋದೆವು. ಆದರೆ ನಾವು ಸಿಸ್ಟಂ ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಹೋಗಲಿಲ್ಲ.

1.10 ಪಿ.ಎಂ

ಇವತ್ತು ವಿಶ್ವಬ್ಯಾಂಕ್‌ನವರು ಲೋನ್ ಕೊಡುವುದಿಲ್ಲವೆಂದು ಹೇಳುತ್ತಿರುವುದರಿಂದ ಐಪಿ ಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಡಲು ಆಗುವುದಿಲ್ಲವೆನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಹಿಂದೆ ಎಸ್.ಎಂ. ಕೃಷ್ಣರವರು ಇದ್ದಾಗ ಸಹ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಹಿಂದು ಪತ್ರಿಕೆಯಲ್ಲಿ ಇದರ ಬಗ್ಗೆ ಒಂದು ವರದಿ ಬಂದಿದ್ದು ಅದರಲ್ಲಿ 787 ಕೋಟಿ ರೂಪಾಯಿಗಳು ವಿಶ್ವ ಬ್ಯಾಂಕ್‌ನಿಂದ ಲೋನ್ ಬಂದಿದೆ. ಆದರೆ ವಿಶ್ವ ಬ್ಯಾಂಕ್‌ನವರು ಕೆಇಬಿಯ ಫರ್ಫಾಮೆನ್ಸ್ ಸರಿಯಾಗಿಲ್ಲವೆಂದು ಹೇಳಿದ್ದಾರೆ. ಅವರು ಸಾಲವನ್ನು ಕೊಡುವಾಗ ಮೂರು ಷರತ್ತುಗಳನ್ನು ಹಾಕಿದ್ದಾರೆ. ಮೊದಲನೆಯದು ಬೆಂಗಳೂರಿನಲ್ಲಿ ಮಾಸ್ಟರ್ ಪ್ಲಾನ್ ಅಂದರೆ ಮೆಗಾಸಿಟಿ ಮಾಡುವುದಕ್ಕಾಗಿ, ಟ್ರಾನ್ಸ್‌ಫಾರ್ಮರ್ ಲೈನನ್ನು ಮಾಡುವುದಕ್ಕಾಗಿ ಮತ್ತು ದಾವಣಗೆರೆ ಲೈನನ್ನು ಮಾಡುವುದಕ್ಕೋಸ್ಕರವೆಂದು ಸಾಲವನ್ನು ಕೊಟ್ಟಿದ್ದಾರೆ. ಆಗ ಬಂಗಾರಪ್ಪನವರ ಕಾಲದಲ್ಲಿದ್ದ ಕೆಇಬಿಯ ಅಧ್ಯಕ್ಷರಾದ ನರಸಿಂಹಮೂರ್ತಿಯವರು 787 ಕೋಟಿ ರೂಪಾಯಿಗಳಲ್ಲಿ 50 ಕೋಟಿ ರೂಪಯಿಗಳಷ್ಟು ಮೆಟೀರಿಯಲ್‌ನ್ನು ತೆಗೆದುಕೊಂಡು ಬಂದರು. ವಿಶ್ವಬ್ಯಾಂಕ್‌ನವರು ನೀವೇನು ಖರ್ಚು ಮಾಡುತ್ತೀರಿ ಅಷ್ಟು ಹಣವನ್ನು ಕೊಡುತ್ತೇವೆಂದರು. ಇವರು 40-50 ಕೋಟಿ ರೂಪಾಯಿಗಳ ಮೆಟೀರಿಯಲ್‌ನ್ನು ಕೊಂಡು ತಂದರು. ಅದಕ್ಕೆ ಲೋನ್ ಕೊಟ್ಟರು. ಅನಂತರ 3-4 ವರ್ಷಗಳ ಕಾಲ ಅವರು ಸಾಲವನ್ನು ಕೊಡಲಿಲ್ಲ. ಕಾರಣ ನಾವು ಹಣವನ್ನು ಖರ್ಚು ಮಾಡಲಿಲ್ಲ.

ಒಂದು ನಯಾಪೈಸೆಯನ್ನು ಸಹ ಕೆಇಬಿಗೆ ಕೊಡಲಿಲ್ಲ. ಆದುದರಿಂದ ವಿಶ್ವ ಬ್ಯಾಂಕ್‌ನವರು ಇವರಿಗೆ ಪತ್ರವನ್ನು ಬರೆದು ಕೆಇಬಿಯಲ್ಲಿ ಸರಿಯಾಗಿ ಕೆಲಸ ಮಾಡಿಲ್ಲ, ಆದುದರಿಂದ ನಿಮಗೆ ಹಣವನ್ನು ಕೊಡುವುದಿಲ್ಲವೆಂದು ಹೇಳಿದ್ದಾರೆ. ಅವರು ಐಪಿ ಸೆಟ್‌ಗಳಿಗೋಸ್ಕರವಾಗಿ ಸಾಲ ಕೊಡುವುದನ್ನು ನಿಲ್ಲಿಸಿಲ್ಲವೆಂದು ಹೇಳಲಿಲ್ಲ. ಇದರ ಬಗ್ಗೆ ಲಿಖಿತ ಸೂಚನೆಯು ವಿಶ್ವಬ್ಯಾಂಕ್‌ನಿಂದ ಅಂದರೆ ವಾಶಿಂಗ್‌ಟನ್‌ನಿಂದ ಹೊರಟು ಅದು ಹಿಂದು ಪತ್ರಿಕೆಯಲ್ಲಿ ದೊಡ್ಡದಾಗಿ ಬಂತು. ನಾನು ಆಗ ಎಸ್.ಎಂ. ಕೃಷ್ಣರವರಿಗೆ ಇದರ ಬಗ್ಗೆ ಹೇಳಿದ್ದೆ, ಐಪಿ ಸೆಟ್‌ಗಳಿಗೋಸ್ಕರ, ರೈತರಿಗೋಸ್ಕರ ಸಾಲವನ್ನು ನಿಲ್ಲಿಸಿದ್ದಾರೆ ಎನ್ನತಕ್ಕ ಭಾವನೆ ಬಾರಬಾರದು ಕೆಇಬಿಯ ಕೆಲಸ ಸರಿಯಾಗಿ ನಡೆಯದಿರತಕ್ಕದ್ದರಿಂದ ಸಾಲವನ್ನು ನಿಲ್ಲಿಸಿದ್ದಾರೆ. ಕೆಇಬಿಯ ಫರ್ಫಾಮೆನ್ಸ್ 19 ಪರ್ಸೆಂಟ್ ವಿಶ್ವ ಬ್ಯಾಂಕ್‌ನವರು ಕೇಳಿದ್ದ ಫರ್ಫಾಮೆನ್ಸ್ 80 ಪರ್ಸೆಂಟ್ ಮಾಡಬೇಕೆಂದು ಆದರೆ ಇವರು ಮಾಡಿರತಕ್ಕದ್ದು 19 ಪರ್ಸೆಂಟ್. ಕೆಇಬಿನವರು ಯಾವಾಗ ಈ ರೀತಿ ಮಾಡಿದರೋ ಯಾವಾಗ ಇವರಿಗೆ ಖರ್ಚು ಮಾಡಲು ಹಣವನ್ನು ಕೊಡಲಿಲ್ಲವೋ ಆಗ ವಿಶ್ವ ಬ್ಯಾಂಕ್‌ನವರು ಸಾಲವನ್ನು ಕೊಡುವುದನ್ನು ನಿಲ್ಲಿಸಿದ್ದಾರೆ. 787 ಕೋಟಿ ಹಣದಲ್ಲಿ ಇವರು ಖರ್ಚು ಮಾಡಿರತಕ್ಕದ್ದು ಕೇವಲ 60 ಕೋಟಿ ರೂಪಾಯಿಗಳು. ಕೆಇಬಿಗೆ ಹಣವನ್ನೇ ಕೊಟ್ಟಿಲ್ಲ. ಇವರು ಹಣವನ್ನು ಖರ್ಚು ಮಾಡಲಿಲ್ಲ. ಅದಕೋಸ್ಕರ ವಿಶ್ವ ಬ್ಯಾಂಕ್‌ನವರು ಸಾಲವನ್ನು ಕೊಟ್ಟಿರುವುದಿಲ್ಲ. ಆದರೆ 42 ಪರ್ಸೆಂಟ್ ಐಪಿ ಸೆಟ್‌ಗಳಿಗಾಗಿ ಕೊಡುತ್ತಿರುವುದರಿಂದ ನಮಗೆ ನಷ್ಟವಾಗಿದೆ, ಅದಕ್ಕಾಗಿ ರೈತರಿಗೆ ವಿದ್ಯುತ್‌ನ್ನು ಉಚಿತವಾಗಿ ಕೊಡುವುದನ್ನು ನಿಲ್ಲಿಸುತ್ತೇವವೆನ್ನತಕ್ಕ ನೀತಿಯೇನಿದೆ ಅದು ಸರಿಯಾಗುವುದಿಲ್ಲ, ಆದ್ದರಿಂದ ನಾನು ಏನು ಹೇಳುತ್ತೇನೆಂದರೆ, ತಾವು ಒಂದು ಹೊಸ ಪವರ್ ಪಾಲಿಸಿಯನ್ನು ಮಾಡಬೇಕು. ಇಲ್ಲದಿದ್ದರೆ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದಕ್ಕೆ ನಾವು ಮತ್ತೆ ನೀವು ಜವಾಬ್ದಾರರಾಗಬಾರದು. ತಮ್ಮ

ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿಯನ್ನು ಮಾಡಬೇಕು. ಮತ್ತು ನಮ್ಮ ಇಡೀ ಕೆಇಬಿ ಅಧಿಕಾರಿಗಳನ್ನು ಬದಲಾವಣೆ ಮಾಡಬೇಕು. ಅವರುಗಳೇ ಇದಕ್ಕೆಲ್ಲಾ ಜವಾಬ್ದಾರರು. ಯಾವುದಕ್ಕೂ ಸರಿಯಾದ ಅಕೌಂಟಬಿಲಿಟಿ ಇಲ್ಲ. ಉದಾಹರಣೆಗೆ, ಇತ್ತೀಚೆಗೆ ಪಿಯರ್‌ಲೆಸ್ ಸಂಸ್ಥೆಯಿಂದ ಸಾಲವನ್ನು ತೆಗೆದುಕೊಂಡು ಬಂದರು. ಮಾನ್ಯ ವೀರಪ್ಪ ಮೊಯಿಲಿರವರು 180 ಕೋಟಿ ಪಿಯರ್‌ಲೆಸ್ ಸಂಸ್ಥೆಯ ಹಣವನ್ನು ಕೆಇಬಿಗೆ ಕೊಟ್ಟೆವು ಎಂದು ಹೇಳಿದ್ದಾರೆ. ನಾನು ಮಾನ್ಯ ಖರ್ಗೆಯವರಲ್ಲಿ ಕೇಳುವುದೇನೆಂದರೆ 200 ಕೋಟಿ ಪಿಯರ್‌ಲೆಸ್ ಸಂಸ್ಥೆಯಿಂದ ಏನು ಹಣ ಬಂತು ಅದರಲ್ಲಿ ಎಷ್ಟು ಹಣವನ್ನು ಕೆಇಬಿಗೆ ಕೊಟ್ಟಿದ್ದೀರಿ? ನನಗೆ ಗೊತ್ತಿರುವ ಹಾಗೆ 45 ಕೋಟಿ ಮೊದಲ ಕಂತನ್ನು ಕೆಇಬಿಗೆ ಕೊಟ್ಟಿದ್ದಾರೆ. ನೂರು ಕೋಟಿ ಹಣವನ್ನು ಸರ್ಕಾರದ ಹೆಸರಿನಲ್ಲಿ ಡ್ರಾ ಮಾಡಿಕೊಂಡರು. ಮಾನ್ಯ ಖರ್ಗೆಯವರೇ, ತಾವೇ ಹೇಳಿ ಅದರಲ್ಲಿ ಕೆಇಬಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರೆಂದು. ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಕೆಇಬಿ ಅಧಿಕಾರಿಗಳಿಂದ ಗ್ಲೆಕ್ಟ್ ಆಗಿದೆ, ಕೆಇಬಿ ನವರು ರೈತರನ್ನು ನೆಗ್ಲೆಕ್ಟ್ ಮಾಡಿದ್ದಾರೆ. ಈ ಎಲ್ಲಾ ಕಾರಣಗಳಿಂದ ನಾವು ಇಂಥಹ ಪರಿಸ್ಥಿತಿಯಲ್ಲಿ ಹಳ್ಳಿಗಳಿಗೆ ಹೋಗಿ ರೈತರಿಗೆ ಕೊಟ್ಟಿರುವ ಪಂಪುಸೆಟ್‌ನ ಉಚಿತ ವಿದ್ಯುತ್‌ನ್ನು ತಪ್ಪಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಶ್ರೀ ಲೈನ್ ಪಂಪ್‌ನ್ನು ನಾವು ಕಾನ್ಸ್‌ಟ್ಯೂಟ್ ಮಾಡಿರತಕ್ಕದ್ದು. ಅದರಲ್ಲಿ ಮೂರು, ಐದು ಮತ್ತು ಏಳು ಎಂದು ಮೂರು ಸ್ಟೇಜ್ ಮಾಡಿ ಐಪಿ ಸೆಟ್‌ಗೆ ಫಸ್ಟ್ ಕ್ಲಿಯರ್ ತ್ರೀ ಪೋಲ್ಸ್, ಸೆಕೆಂಟ್ ಕ್ಲಿಯರ್ ಫೈವ್ ಪೋಲ್ಸ್ ಎಂದು ರೂಲ್‌ನ್ನು ಮಾಡಿದ್ದುದು ನಾವು. ಆದ್ದರಿಂದ ದಯಮಾಡಿ ಐಪಿ ಸೆಟ್‌ಗಳಿಗಾಗಿ ಕೊಟ್ಟಿದ್ದೇವೆ ಎಂಬ ಕಾರಣಕ್ಕಾಗಿ ವಿಶ್ವ ಬ್ಯಾಂಕ್‌ನವರು ಸಾಲವನ್ನು ಕೊಡಲು ತಕರಾರು ಎತ್ತಿಲ್ಲ. ತಾವು ಐಪಿ ಸೆಟ್‌ಗಳ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕು. ಅದಕ್ಕಾಗಿ ನಾನು ಹೇಳುವುದೇನೆಂದರೆ ತಾವು ಹೊಸ ಪವರ್ ಪಾಲಿಸಿಯನ್ನು ಮಾಡಬೇಕು. ಇದರ ಬಗ್ಗೆ ಹೊಸ ವ್ಯವಸ್ಥೆಯನ್ನು ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಒಂದೆರಡು ದಿವಸಗಳಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ತಮ್ಮ ಅಧ್ಯಕ್ಷತೆಯಲ್ಲಿ ಒಂದು ಪರಿಣಿತರ ಸಮಿತಿಯನ್ನು ಮಾಡಬೇಕು. ಆ ಸಮಿತಿಯವರು ಒಂದು ತಿಂಗಳ ಕಾಲ ಕುಳಿತು ಇದನ್ನು ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡುವುದು ಸೂಕ್ತವೆಂಬುದು ನನ್ನ ಸಲಹೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ತಮಗೆಲ್ಲರಿಗೂ ಗೊತ್ತಿರುವ ಹಾಗೆ ಈ ಹಿಂದೆಯೇ ಅಂಥ ಪರಿಣಿತರ ಸಮಿತಿಯನ್ನು ಮಾಡಿದ್ದೆವು, ಅವರಲ್ಲಿ ಬೈರೇಗೌಡರೂ ಸಹ ಇದ್ದರು. ಆ ಸಮಿತಿಯವರು ಈಗಾಗಲೇ ಒಂದು ವರದಿಯನ್ನು ಕೊಟ್ಟಿದ್ದಾರೆ. ಬಹುಶಃ ಆ ವರದಿಯನ್ನೇ ಇಂಪ್ಲಿಮೆಂಟ್ ಮಾಡಲು ಸಾಧ್ಯವಾಗುತ್ತದೆ. ಮತ್ತೆ ಇನ್ನೊಂದು ಸಮಿತಿಯನ್ನು ಮಾಡುವುದು ಅಷ್ಟೊಂದು ಸೂಕ್ತವಲ್ಲ. ಇನ್ನು ಪಿಯರ್ ಲೆಸ್‌ನಿಂದ 200 ಕೋಟಿ ಸಾಲವನ್ನು ಯಾರಿಗೆ ಕೊಟ್ಟರು ಏನು ಮಾಡಿದರು ಎಂದು ಮಾನ್ಯ ನಾಗೇಗೌಡರಿಗೇ ಗೊತ್ತಿದೆ. ನಾಗೇಗೌಡರು ಆಗ ನಮ್ಮ ಜೊತೆಯಲ್ಲೇ ಇದ್ದರು. ಅದು ಅವರಿಗೆ ಗೊತ್ತಿದೆ. ಬಂಗಾರಪ್ಪನವರೂ ಸಹ ಇದ್ದರು. ಆ ಹಣವನ್ನು ಏನು ಮಾಡಿದ್ದೇವೆಂದು ಮೊಯ್ಲಿಯವರು ಹೇಳಿದರು. ಇಲ್ಲಿ ಕುಳಿತು ನನ್ನ ಪಜೀತಿ ಏನಾಗಿದೆ ಎಂದರೆ ಕಾಂಗ್ರೆಸ್ ಪಕ್ಷ ಮಾಡಿರತಕ್ಕ ಎಲ್ಲಾ ವಿಷಯಗಳಿಗೆ ನಾನು ಏನು ಹೇಳಬೇಕು ಎನ್ನುವುದೇ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ಅದಕ್ಕಾಗಿಯೇ ನಿಮ್ಮನ್ನು ಕಾಂಗ್ರೆಸ್ ಪಕ್ಷದ ಮುಖಂಡರಾಗಿ ಮಾಡಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಇದು ಕಾಂಗ್ರೆಸ್ ಪಕ್ಷದ ಹಣವಲ್ಲ. ಕೆಇಬಿ ಯನ್ನು ಸರ್ಕಾರದವರು ಬಹಳ ವರ್ಷಗಳಿಂದ ನೆಗ್ಲೆಕ್ಟ್ ಮಾಡಿಕೊಂಡು ಬಂದಿರುವುದರಿಂದ

ಕೆಇಬಿಯ ಆರ್ಥಿಕ ವ್ಯವಸ್ಥೆಯು ಹದಗೆಟ್ಟು ಹೋಗಿದೆ. ಆದ್ದರಿಂದ ಅದರ ಪರ್ಫಮೆನ್ಸ್ 19 ಪರ್ಸೆಂಟ್ ಆಗಿದೆ. ಇದಕ್ಕೆ ಕಾರಣ ಅಲ್ಲಿರುವ ಮಿಸ್ ಮೆನೇಜ್‌ಮೆಂಟ್. ಇವತ್ತು ಸಾಲವನ್ನು ಕೊಡುತ್ತಿಲ್ಲ ಎನ್ನತಕ್ಕ ಅನಿಸಿಕೆ ಇದೆ. ಆದರೆ ಐಪಿ ಸೆಟ್‌ಗಳಿಗಾಗಿ ಉಚಿತ ವಿದ್ಯುತ್‌ನ್ನು ಕೊಟ್ಟಿರುವುದರಿಂದ ಈ ರೀತಿ ವಿಶ್ವ ಬ್ಯಾಂಕ್‌ನವರು ಸಾಲವನ್ನು ಕೊಡುತ್ತಿಲ್ಲವೆನ್ನತಕ್ಕ ಭಾವನೆ ಬೇಡ. ಪಿಯರ್‌ಲೆಸ್‌ನಿಂದ ಪಡೆದ ಸಾಲದಲ್ಲಿ 180 ಕೋಟಿಗಳನ್ನು ಕೆಇಬಿಗೆ ಕೊಟ್ಟಿದ್ದೇವೆಂದು ಮೊಯ್ಲಿಯವರು ಹೇಳಿದರು. ಅದರ ಬಗ್ಗೆ ನಾನು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಆದ್ದರಿಂದ ಪಿಯರ್‌ಲೆಸ್ ಹಣದಲ್ಲಿ ಎಷ್ಟನ್ನು ಕೆಇಬಿಗೆ ಕೊಟ್ಟಿದ್ದೀರಿ? ಬಾಕಿ ಎಷ್ಟು ಹಣವನ್ನು ಸರ್ಕಾರ ಡ್ರಾ ಮಾಡಿಕೊಂಡಿದೆ?

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಅತೀ ಮುಖ್ಯವಾದ ವಿಚಾರದ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಬಹುಶಃ ರೈತನ ಸಮಸ್ಯೆಗಳ ಬಗ್ಗೆ ತಿಳಿದಿರತಕ್ಕಂಥ ಸಾಕಷ್ಟು ಅನುಭವವನ್ನು ಹೊಂದಿರತಕ್ಕಂಥ ಉಪ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರಿಗೆ ರೈತನ ಬವಣೆಯ ಬಗ್ಗೆ ಹೊಸದಾಗಿ ತಿಳಿಸತಕ್ಕ ಅಗತ್ಯವಿಲ್ಲ. ರೈತರ ಪಂಪುಸೆಟ್ಟುಗಳಿಗೆ ಏನೋ ಉಚಿತವಾಗಿ ವಿದ್ಯುತನ್ನು ಕೊಟ್ಟು ಉಪಕಾರ ಮಾಡುತ್ತಿದ್ದೇವೆ ಎನ್ನತಕ್ಕ ಭಾವನೆ ನಿಮ್ಮ ಅಧಿಕಾರಿಗಳಲ್ಲಿದೆ. ತಾವು ರಾಜ್ಯದ ಯಾವುದೇ ಊರಿಗೆ ಹೋದರೂ ಸಹ ಒಬ್ಬ ರೈತ ಐಪಿ ಸೆಟ್‌ನ್ನು ಹಾಕಿಸಿಕೊಳ್ಳಲು ಅದೆಷ್ಟು ಬಾರಿ ನಿಮ್ಮ ಅಧಿಕಾರಿಗಳನ್ನು ಭೇಟಿ ಮಾಡುತ್ತಾನೆ, ವಿದ್ಯುತ್‌ನ ಸಂಪರ್ಕಕ್ಕಾಗಿ ಅವರುಗಳು ಕೊಡತಕ್ಕ ಕಂಬವನ್ನು ತನ್ನ ಗಾಡಿಯಲ್ಲಿ ತೆಗೆದುಕೊಂಡು, ಕಂಬವನ್ನು ಸೆಟ್ಟು, ವೈರನ್ನು ಅವನೇ ತೆಗೆದುಕೊಂಡು ಹೋಗಿ ಕೆಲಸ ಮಾಡಬೇಕಾದಂಥ ಸ್ಥಿತಿ ಇದೆ. ನಾನು ತಮ್ಮಲ್ಲಿ ರೈತನ ಪರವಾಗಿ ಕೈಜೋಡಿಸಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಾನು ಯಾರ ಬಗ್ಗೆಯೂ ಸಹ ಆರೋಪ ಮಾಡುವುದಿಲ್ಲ, ಯಾವುದೇ ಕ್ಷೇತ್ರಕ್ಕೆ ಹೋದರೂ ಸಹ ಹಣವನ್ನು ಕೊಡದೆ, ಅಧಿಕಾರಿಗಳ ಮನೆ ಬಾಗಿಲಿಗೆ ತಿರುಗದೆ ಎಲ್ಲೋ ರಾಜಕೀಯ ಶಿಫಾರಸ್ಸು ಹಾಗೂ ರಾಜಕೀಯ ವ್ಯಕ್ತಿಗಳ ಹಿಂದೆ ಇರುವವರನ್ನು ಉಳಿದ ಸಾವಿರಾರು ಜನ ರೈತರು ವಿದ್ಯುತ್ ಸಂಪರ್ಕಕ್ಕಾಗಿ ಅಧಿಕಾರಿಗಳ ಮನೆ ಬಾಗಿಲನ್ನು ಸುತ್ತಿದರೆ ಮಾತ್ರ ಅದು ಸಿಗುತ್ತದೆ.

ನೀರು ಬಂದು ಎರಡು ಮೂರು ವರ್ಷಗಳಾಗಿದೆ, ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡಿದ್ದಾನೆ, ಬಡ್ಡಿಯನ್ನು ಕಟ್ಟುತ್ತಿದ್ದಾನೆ. ನೀಡಿದೆಯೆಂದು ಸ್ವಲ್ಪ ಬೆಳೆಯನ್ನು ತೆಗೆಯೋಣವೆಂದು ಆಸೆಯನ್ನಿಟ್ಟುಕೊಂಡಿರುವ ರೈತನು ಕಣ್ಣೀರನ್ನು ಹಾಕತಕ್ಕ ಪರಿಸ್ಥಿತಿ ಇದೆ. ರಾಜ್ಯದ ಎಲ್ಲಾ ಕಡೆ ಹೀಗೆ ಇದೆ. ಆದ್ದರಿಂದ ತಾವು ಅವರೆಲ್ಲರಿಗೂ ವಿದ್ಯುತ್‌ನ್ನು ಕೊಡುವ ಬಗ್ಗೆ ಮುಂದಿನ ಏಪ್ರಿಲ್‌ನಲ್ಲಿ ಒಂದು ದಿನಾಂಕವನ್ನು ನಿಗದಿ ಮಾಡಿ. ತಮಗೆ ಆ ಶಕ್ತಿ ಇದೆ. ಏಕೆಂದರೆ ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಅವನು ಬಿತ್ತನೆ ಮಾಡಬೇಕಾಗುತ್ತದೆ. ಈ ರೀತಿ ಐಪಿ ಸೆಟ್ಟುಗಳನ್ನು ಹಾಕಿಕೊಂಡಿರುವವರಲ್ಲಿ ಬಹುತೇಕ ರೈತರು ಖುಷ್ಕಿ ಜಮೀನಿನಲ್ಲಿ, ನೀರು ದೊರೆಯದಿರುವ ಕಡೆಗಳಲ್ಲಿ, ಮಳೆಯನ್ನೇ ಅವಲಂಬಿಸಿಕೊಂಡಿರುವವರು ಮಾತ್ರ ಹಾಕಿಕೊಂಡಿದ್ದಾರೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಐಪಿ ಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಡುವಲ್ಲಿ ಪೆಂಡಿಂಗ್ ಇರುವಂಥವುಗಳಿಗೆಲ್ಲಾ ಯಾವುದೇ ಜಾತಿಯನ್ನೂ ಸಹ ಆಧಾರವಾಗಿ ಇಟ್ಟುಕೊಳ್ಳದೆ ಎಲ್ಲಾ ಜಾತಿಯವರನ್ನು ಸೇರಿಸಿ ಒಂದೇ ಬಾರಿಗೆ ವಿದ್ಯುತ್ ಸಂಪರ್ಕವನ್ನು ಕೊಡುವ ಕೆಲಸ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರೆ, ಇವೊತ್ತು ತಾವು ಏನಾದರೂ ಮಾಡಿ ಈ ರಾಜ್ಯದ ಜನತೆಯನ್ನು ವಿದ್ಯುತ್ ಕಣ್ಣು ಮುಚ್ಚಾಲೆಯಿಂದ ಪಾರು ಮಾಡುವಂತೆ ಒಂದು ವಿಶೇಷವಾದ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ವಿದ್ಯುತ್ ಕೊರತೆ ಏನಿದೆ, ಇದರ ಬಗ್ಗೆ

ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡೋಣ. ಇರುವುದನ್ನು ಈಗ ಸಮರ್ಥವಾಗಿ ಬಳಸಿಕೊಂಡು ಮೊದಲು ರೈತರಿಗೆ ಆದ್ಯತೆ ಮೂಲಕ ಕೊಡೋಣ. ಕೆ.ಇ.ಬಿ ಇಲಾಖೆ ನಷ್ಟದಲ್ಲಿ ನಡೆಯುತ್ತಿದೆಯೆಂದು ತಾವು ಹೇಳುತ್ತಿದ್ದೀರಿ. ಇವೊತ್ತು ರೈತನಿಗೆ ಏನಾದರೊಂದು ದರ ನಿಗದಿಪಡಿಸಬೇಕು. ಆತನಿಗೆ ಉಚಿತವಾಗಿ ವಿದ್ಯುತ್ ಕೊಟ್ಟರೆ, ಅದನ್ನು ಆತ ಬೇರೆ ರೂಪದಲ್ಲಿ ಸಮಾಜಕ್ಕೆ ವಾಪಸ್ಸು ಮಾಡುತ್ತಾನೆ. ಹೇಗೆಂದರೆ, ಕಡಿಮೆ ದರದಲ್ಲಿ ಹಣ್ಣು ಹಂಪಲು, ತರಕಾರಿಗಳನ್ನು ಬೆಳೆದು ಕೊಡುತ್ತಾನೆ, ತಾವು ತಿನ್ನುವ ಅನ್ನವನ್ನು ಬೆಳೆದು ಕೊಡುತ್ತಾನೆ. ಹೀಗಿದ್ದರೂ ಆತನ ಸ್ಥಿತಿ ಏನಾಗಿದೆ ಎಂದರೆ ನನಗೆ ಗೊತ್ತಿರುವಂತೆ ಇಲ್ಲಿಗೆ ಬಂದಿರುವ 224 ಶಾಸಕರುಗಳಲ್ಲಿ 15-20 ಶ್ರೀಮಂತ ಶಾಸಕರುಗಳ ಮನೆಯಲ್ಲಿ ಕೆಲಸ ಮಾಡುವ ರೈತನ ಪರಿಸ್ಥಿತಿ ಗೊತ್ತಿಲ್ಲದೆ ಇರಲಿಕ್ಕಿಲ್ಲ. ಆದರೆ, ವಾಸ್ತವಿಕವಾಗಿ ಸ್ವಾತಂತ್ರ್ಯ ದೊರೆತ 47 ವರ್ಷಗಳಲ್ಲಿ ಆತನ ಸ್ಥಿತಿ ಏನಾಗಿದೆ? ಅದಕ್ಕೋಸ್ಕರ, ನಿಮಗೆ ಈ ಬಗ್ಗೆ ಸಲಹೆ ಕೊಡುವುದೇನೆಂದರೆ, ತಾವು ಈ ಕೃಷಿಯನ್ನು ಉದ್ದಿಮೆಯಾಗಿ ಪರಿಗಣಿಸಬೇಕು. ರೈತನ ಹೊಲ ಕಾರ್ಖಾನೆಯಿದ್ದಂತೆ. ನಿಮ್ಮ ಕಬ್ಬಿನ ಕಾರ್ಖಾನೆ ನಿಂತರೆ ಪುನಃ ನಡೆಯಬಹುದು, ನಿಮ್ಮ ಕಾಗದ ಕಾರ್ಖಾನೆ ನಿಂತರೆ ಪುನಃ ನಡೆಯಬಹುದು.

ಆದರೆ, ರೈತನ ಹೊಲ ಎನ್ನುವ ಕಾರ್ಖಾನೆ ನಿಂತರೆ ಈ ನಾಡಿನ ಜನರು ಮಣ್ಣು ತಿನ್ನಬೇಕಾಗುತ್ತದೆ. ಒಂದು ಕಾಲದಲ್ಲಿ ಆಹಾರಕ್ಕೆ ಕೊರತೆ ಇದ್ದು, ಹೊರದೇಶಕ್ಕೆ ಭಿಕ್ಷೆ ಬೇಡಲು ಹೋದಂಥ ಸಂದರ್ಭದಲ್ಲಿ ನಮ್ಮನ್ನೆಲ್ಲಾ ಸ್ವಾವಲಂಬಿ ಮಾಡಿದವನು ರೈತ. ಅದಕ್ಕಾಗಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ದಯಮಾಡಿ ಅದನ್ನು ಸುಧಾರಿಸುವುದಕ್ಕೆ ವಿಶೇಷ ಪ್ರಯತ್ನ ಮಾಡಬೇಕು. ಇನ್ನು ಕೆಪ್ಯಾಸಿಟರ್ ಬಗ್ಗೆ ಹೇಳುವುದಾದರೆ, ಕೆಪ್ಯಾಸಿಟರ್ ಏಕೆ ಬೇಕು? ವಿದ್ಯುತ್ ಯಥೇಚ್ಛವಾಗಿ ಇದ್ದಾಗ ಮೋಟಾರ್ ಸುಡುತ್ತದೆ, ತೊಂದರೆಯಾಗುತ್ತದೆ. ಅದಕ್ಕೋಸ್ಕರ ಕೆಪ್ಯಾಸಿಟರ್ ಬೇಕು. ಈತನಿಗೆ ವಿದ್ಯುತ್ ಇಲ್ಲವಲ್ಲಾ, ಇನ್ನು ಕೆಪ್ಯಾಸಿಟರ್ ಏಕೆ? ರೈತ 700-800 ರೂಪಾಯಿಗಳಸಾಲ ಮಾಡಿ ತೊಂದರೆಯಲ್ಲಿರುವಾಗ ಇವರಿಗೆ ಯಾವಾಗ ಕೆಪ್ಯಾಸಿಟರ್ ಬೇಕು, ಏನೇನು ಅಗತ್ಯತೆಯಿದೆ, ಇದರ ಬಗ್ಗೆ ಈಗಾಗಲೇ ಸನ್ಮಾನ್ಯ ಸದಸ್ಯರಾದ ನಾಗೇಗೌಡರು ಸಲಹೆ ಕೊಟ್ಟಿದ್ದಾರೆ. ಹಿಂದೆ ರೈತರ ಪಂಪುಸೆಟ್ಟುಗಳಿಗೆ ಏನಾದರೂ ಅನಾಹುತವುಂಟಾಗಿ ತೊಂದರೆಗೀಡಾದರೆ ಪರಿಶೀಲಿಸಲು ಶಾಸಕರುಗಳನ್ನೊಳಗೊಂಡ ಒಂದು ಸಮಿತಿ ಇತ್ತು. ಈಗ ತಮ್ಮ ಮೂಲಕ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾನು ಅದನ್ನು ಸದನ ಸಮಿತಿ ಎಂದು ಕರೆಯುವುದಿಲ್ಲ. ವಿದ್ಯುತ್ ಸುಧಾರಣೆಯಾಗುವವರೆಗೆ ಎಲ್ಲಾ ಪಕ್ಷದ ಶಾಸಕರುಗಳನ್ನೊಳಗೊಂಡ ಒಂದು ಸಮಿತಿ ರಚಿಸಿ, ಅದಕ್ಕೆ ಒಬ್ಬ ಟೆಕ್ನಿಕಲ್ ಎಕ್ಸ್‌ಪರ್ಟ್ ಜೊತೆಯಲ್ಲಿ ಕೊಡಿ. ನಾವು ತಿಂಗಳಿಗೊಮ್ಮೆ ಒಂದು ಜಿಲ್ಲೆಗೆ ಹೋಗಿ ಪ್ರತ್ಯೇಕವಾಗಿ ನೋಡುತ್ತೇವೆ. ರಾಜಕೀಯವಾಗಿ ಶಿಫಾರಸ್ಸು ಇರುವ ಕೆಲವು ಕಡೆ ವಿದ್ಯುತ್ ಸರಬರಾಜಾಗುತ್ತಿದೆ, ಬೇಕಾದವರಿಗೆ ಅನುಕೂಲವಾಗುತ್ತಿದೆ. ಇನ್ನೊಂದು ಕಡೆ ಹೇಳುವವರು, ಕೇಳುವವರು ಯಾರೂ ಇಲ್ಲ. ಅವರು ಸತ್ಯಾಗ್ರಹ ಚಳುವಳಿ ಮಾಡಿ ಹಣ್ಣಾಗುತ್ತಿದ್ದಾರೆ, ಸುಸ್ತಾಗುತ್ತಿದ್ದಾರೆ. ಆದುದರಿಂದ, ಈ ದಿಕ್ಕಿನಲ್ಲಿ ತಾವು ವಿಶೇಷವಾದ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ಹತ್ತು ಗಂಟೆಯಾದರೂ ನಿರಂತರವಾಗಿ ರೈತರಿಗೆ ವಿದ್ಯುತ್ ಕೊಡುತ್ತೇವೆಂದು ತಾವು ಅಧಿಕಾರಕ್ಕೆ ಬಂದಾಗ ಹೇಳಿದ್ದೀರಿ. ಆ ರೀತಿ ವಿದ್ಯುತ್ ಕೊಟ್ಟಿಲ್ಲ. ಅದು ವಿದ್ಯುತ್ ಕೊರತೆಯಿಂದ ಇರಬಹುದು, ನಿಮ್ಮ ಅಧಿಕಾರಿಗಳ ಕಳಕಳಿಯ ಕಾರಣಕ್ಕೆ ಇರಬಹುದು.

ಬೇರೆ ಕಾರಣಕ್ಕೋಸ್ಕರ ಇತ್ತ ಕಡೆ ನಿಮ್ಮ ಅಧಿಕಾರಿಗಳು ಗಮನ ಕೊಡುತ್ತಿಲ್ಲ. ಅವರಿಗೆ ನೀವು ಹೇಳುತ್ತೀರಾ? ಆದೇಶ ಕೊಡುತ್ತೀರಾ? ನಿಮ್ಮ ಮೊದಲ

ಕರ್ತವ್ಯವೇನೆಂದರೆ, ರೈತನ ಹೊಲಕ್ಕೆ ನೀರು ಕೊಡಬೇಕು. ಕಾರ್ಖಾನೆಗಳಿಗೆ ವಿದ್ಯುತ್ ಕೊಡುವುದು ಅನಂತರ. ನಮ್ಮರಾಜ್ಯಕ್ಕೆ ಕಾರ್ಖಾನೆಗಳು ಬೇಡ. ನೂರಕ್ಕೆ ಶೇಕಡ 80ರಷ್ಟು ಜನರು ವಾಸಿಸುವಂಥ ಗ್ರಾಮೀಣ ಜನರ ಬದುಕು ಹಸನಾಗುವ ಅಗತ್ಯವಿರುವಂಥ ಐ.ಪಿ. ಸೆಟ್ಟುಗಳಿಗೆ ವಿದ್ಯುತ್ ಕೊಡುವುದೇ ನಮ್ಮ ಮೊದಲಿನ ಆದ್ಯತೆಯಾಗಬೇಕು. ಅನಂತರ, ಬೇರೆ ಕಾರ್ಖಾನೆಗಳಿಗೆ ಆದ್ಯತೆ ಮೂಲಕ ವಿದ್ಯುತ್ ಕೊಡುವಂತಾಗಬೇಕು. ಈ ನಿಲುವನ್ನು ತೆಗೆದುಕೊಂಡಾಗ ಬಹುಶಃ ಈ ನಿಟ್ಟಿನಲ್ಲಿ ಏನಾದರೂ ಸುಧಾರಣೆ ಮಾಡಬಹುದೆಂದು ನಾನು ತಿಳಿದುಕೊಂಡಿದ್ದೇನೆ. 1994-95ರ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಇಲಾಕೆ ಬಗ್ಗೆ ವಿಶೇಷ ಸಮಿತಿ ಮುಂದೆ ತಾವು ಹೇಳಿರುವಂಥ ಮಾತು ಸುಮಾರು 3,900 ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆಂದು ಹೇಳಿದ್ದೀರಿ. ಅಂದರೆ, ಇವೊತ್ತು ನಮ್ಮ ರಾಜ್ಯದಲ್ಲಿ ಸುಮಾರು 600, 700, 800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಕೊರತೆ ಇದೆಯೆಂದಾಯಿತು.

ವಿದ್ಯುತ್ ಉತ್ಪಾದನೆಗೆ ತಾವು ಏನು ಆದ್ಯತೆ ಕೊಟ್ಟಿರಿ? ಎಂಟನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ತಾವು ಹೇಳಿರುವಂತೆ 1992-93ನೇ ಸಾಲಿನಲ್ಲಿ ತಾವು 114 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಗುರಿ ಇಟ್ಟುಕೊಂಡಿದದೀರಿ ಮತ್ತು ಇದಕ್ಕಾಗಿ 339 ಕೋಟಿ 88 ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ಆದರೆ, ವಿದ್ಯುತ್ ಉತ್ಪಾದನೆಯಾಗಿರುವುದು ಕೇವಲ 18.9 ಮೆಗಾವ್ಯಾಟ್ ಮಾತ್ರ. ಹಾಗೆಯೇ 1993-94ರ ವಾರ್ಷಿಕ ಯೋಜನೆಯಲ್ಲಿ 9.19 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಸಾಧಿಸುತ್ತೇವೆಂದು 239 ಕೋಟಿ 92 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದರು. ಈ ಅಂಕಿ-ಅಂಶಗಳನ್ನು ನಾವು ನೋಡಿದಾಗ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಖರ್ಚಾಗಿರುವ ಹಣ ಸರಾಸರಿ ನೋಡಿದರೆ 26 ಕೋಟಿ 6 ಲಕ್ಷ ರೂಪಾಯಿಗಳು. ಅಂದರೆ, ಈ ರಾಜ್ಯ ತೀವ್ರತರವಾಗಿ ವಿದ್ಯುತ್ ಸಮಸ್ಯೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ನಿಮ್ಮ ಯೋಜನಾಗಾರರು, ಅಧಿಕಾರಿಗಳು ಮತ್ತು ಸರ್ಕಾರ ಯಾವ ದಿಕ್ಕಿನತ್ತ ಸಾಗಿದೆ, ಇದರ ಬಗ್ಗೆ ಎಷ್ಟರಮಟ್ಟಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೀರಿ? ಎಂಬುದರ ಬಗ್ಗೆ ತಾವು ಯೋಚಿಸಬೇಕು. ಅದೇ ರೀತಿ 1994-95ರ ವಾರ್ಷಿಕ ಯೋಜನೆಯಲ್ಲಿ

307 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ 241.4 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಗುರಿ ಹೊಂದಿದ್ದೇವೆಂದು ಹೇಳುತ್ತೀರಿ. 1994ರ ನವೆಂಬರ್-ಡಿಸೆಂಬರ್‌ವರೆಗೆ ತಾವು ಖರ್ಚು ಮಾಡಿರುವ ಹಣ ನನಗೆ ಗೊತ್ತಿರುವ ಪ್ರಕಾರ ಸುಮಾರು 140 ಕೋಟಿ ರೂಪಾಯಿಗಳಷ್ಟು ದಾಟುವುದಿಲ್ಲ. ಇನ್ನು ಉಳಿದಂಥ 100 ಕೋಟಿ ರೂಪಾಯಿಗಳು ಏನು? ಯಕ್ಷಿಣಿ ಮಾಡುತ್ತೀರಾ? ನಿಮ್ಮಲ್ಲಿ ಮಂತ್ರದಂಡ ಇದೆಯೇ? ನಾನು ಏನು ಹೇಳುತ್ತಿದ್ದೇನೆಂದರೆ, ಯಾವ ಯೋಜನೆಯಲ್ಲಿ ವಿದ್ಯುತ್ ಉತ್ಪಾದನೆಗೆಂದು ಹಣವನ್ನು ತೆಗೆದಿಟ್ಟಿದ್ದೀರಿ, ಕಳೆದ ನಾಲ್ಕು ವರ್ಷಗಳ ಅಂಕಿ-ಅಂಶಗಳನ್ನು ತೆಗೆದುಕೊಂಡಾಗ, ಯಾವುದೇ ವರ್ಷದಲ್ಲೂ ಸಹ ತಾವು ನಿಗದಿಪಡಿಸಿದಂಥ ಹಣವನ್ನು ವಿದ್ಯುತ್ ಉತ್ಪಾದನೆಗೆ ಖರ್ಚು ಮಾಡಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಬೇಡಿಕೆಗಳ ಮೇಲೆ ತಾವು ಉತ್ತರಿಸುವಂಥ ಸಂದರ್ಭದಲ್ಲಿ ಹೇಳಿ. ರಾಜ್ಯದ ಜನರು ತೀವ್ರತರವಾಗಿ ವಿದ್ಯುತ್ ಬರ ಎದುರಿಸುತ್ತಿರಬೇಕಾದರೆ, ಈಗ ತಾನೆ ಹೊಸ ಸರ್ಕಾರ ಬಂದಿದೆ, ನಾನು ಎಲ್ಲದರ ಬಗ್ಗೆಯೂ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಸಮಸ್ಯೆಗಳೇನಿದೆ, ರಾಜ್ಯದಲ್ಲಿ ವಿದ್ಯುತ್ ಅಭಾವದಿಂದಾಗಿ ಯಾವ ಸಮಯದಲ್ಲಿ ವಿದ್ಯುತ್ ಬರುತ್ತದೆ, ಹೋಗುತ್ತದೆಂದು ಗೊತ್ತಿಲ್ಲ. ಇದರ ಪರಿಣಾಮವೇನೆಂದರೆ, ರೈತನ ಪಂಪುಸೆಟ್ಟುಗಳಿಗೆ ಮಾತ್ರವಲ್ಲ, 3-4 ಟ್ಯಾಂಕುಗಳು ಇರುವಂಥ, ಹಳ್ಳಿಯಲ್ಲಿ ಇವೊತ್ತು ಮಿನಿ ವಾಟರ್ ಸಪ್ಲೈ ಏನಿವೆ, ಆ ಟ್ಯಾಂಕುಗಳು ತುಂಬುತ್ತಿಲ್ಲ. ಬೇಕಾದರೆ

ನೀವು ವರದಿಯನ್ನು ತರಿಸಿಕೊಳ್ಳಿ. ನಿಮ್ಮ ಸರ್ಕಾರ ಒಳ್ಳೆಯ ಹೆಸರು ಬರಬೇಕೆಂದಿದ್ದರೆ ಈ ದಿಸೆಯಲ್ಲಿ ಪ್ರಯತ್ನ ಮಾಡಿ. ತಮಗೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಜನರು ಮತ ಕೊಟ್ಟಿರಬಹುದು. ಇದು ಬೇರೆ ರಾಜಕಾರಣ. ಆದರೆ, ನಮ್ಮನ್ನು ನಂಬಿರುವಂಥ ಜನರಿಗೆ ನಾವು-ನೀವು ಎಲ್ಲಾ ಸೇರಿ ಅದಕ್ಕೆ ಏನಾದರೂ ಪರಿಹಾರ ಹುಡುಕುವಂಥ ವಿಶೇಷವಾದ ಪ್ರಯತ್ನ ಮಾಡಬೇಕಾಗಿದೆ.

ಬಂಗಾರಪ್ಪನವರು, ವೀರಪ್ಪ ಮೊಯ್ಲಿಯವರು ಸದನದಲ್ಲಿ ಈಗ ಇಲ್ಲ. ಬಹುರಾಷ್ಟ್ರೀಯ ಸಂಸ್ಥೆಗಳನ್ನು ನಾವು ಕರೆಯುತ್ತಿದ್ದೇವೆಂದು ಅವರು ಅಧಿಕಾರದಲ್ಲಿದ್ದಾಗ ಹೇಳಿಕೊಂಡು ಬಂದರು. ನೀವೂ ಹೇಳಿದ್ದೀರಿ. ಉಪ ಮುಖ್ಯಮಂತ್ರಿಗಳು ಬಂದರು, ಕೆಂಪು ರತ್ನಗಂಬಳಿ ಹಾಸಿ ಅವರನ್ನು ಕರೆದಿದ್ದೀರಿ. ಇವೊತ್ತು ಉದ್ದುದ್ದು ಭಾಷಣ ಮಾಡಿದಿರಲ್ಲಾ, ಸಾಧನೆ ಏನಾಗಿದೆ? ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಹೊರ ದೇಶಗಳಿಗೆ ಹೋಗಿ ಬಂದರು, ವೀರಪ್ಪ ಮೊಯ್ಲಿಯವರು ಅದೇ ರೀತಿ ಮುಂದುವರೆದರು. ಕಳೆದ ಐದು ವರ್ಷಗಳಲ್ಲಿ ಒಂದು ಯೂನಿಟ್‌ನಷ್ಟು ವಿದ್ಯುತ್ ಉತ್ಪಾದನೆ ಮಾಡಿದಿರಾ? ನೀವೂ ಸಹ ಇದೇ ಮಾತನ್ನು ಹೇಳಿದ್ದೀರಿ. ಅಂದರೆ, ಇನ್ನೂ ಮೂರು ವರ್ಷಗಳು ಬೇಕು. ಕೇಂದ್ರದ ಅನುಮತಿ ಸಿಕ್ಕಿಲ್ಲವೆಂದು ಹೇಳಿದ್ದೀರಿ. ಜನವರಿಯೊಳಗೆ ಅನುಮತಿ ತೆಗೆದುಕೊಂಡು ಬರುತ್ತೇವೆಂದು ಈಗಾಗಲೇ ಹೇಳಿದ್ದೀರಿ. ಇವೊತ್ತು ಮಾರ್ಚ್ 31ನೇ ತಾರೀಖು ಕಳೆಯುತ್ತಿದೆ, ಇನ್ನೂ ಅನುಮತಿ ತೆಗೆದುಕೊಂಡು ಬಂದಿಲ್ಲ. ನಾವ್ಯಾರು ಕೂಡ ಅದಕ್ಕೆ ಅಡ್ಡಿಪಡಿಸಿಲ್ಲ. ತಾವು ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅನಂತರ ದುಡ್ಡು ಇಲ್ಲವೆಂದು ಹೇಳುತ್ತಿದ್ದೀರಿ. ಇವೊತ್ತು ಬೃಹತ್ ಕೈಗಾರಿಕೆಗಳಿಗೆ ವಿದ್ಯುತ್ ಬರುವುದಕ್ಕೆ ಕಾರಣವೇನು? ಇದಕ್ಕೆ ಏನು ಉತ್ತರ ಕೊಡುತ್ತೀರಿ? ಕೋರ್ಟಿನಲ್ಲಿದೆಯೆಂದು ಹೇಳುತ್ತೀರಿ. ಏಕೆ ಕೋರ್ಟಿಗೆ ಹೋಗುತ್ತಾರೆ? ಕೋರ್ಟಿನಲ್ಲಿ ಕೇಸ್ ಹಾಕುವ ಮಟ್ಟಕ್ಕೆ ಹೋಗುವಂಥಾದ್ದು ಏನಿದೆ? ಯಾರ ಜೊತೆಯಾದರೂ ಮಾತುಕತೆಯಾಡಿ ಹಣವನ್ನು ವಸೂಲು ಮಾಡುವುದಕ್ಕೆ ವಿಶೇಷ ಗಮನ ಕೊಡಿ. ಅಂದರೆ, ನಿಮ್ಮ ಅಧಿಕಾರಿಗಳಿಗೂ ಕೋಟ್ಯಾಂತರ ರೂಪಾಯಿಗಳ ಬಾಕಿ ಬರಬೇಕಾಗಿರುವಂಥ ಕಾರ್ಖಾನೆ ಮಾಲೀಕರ ಜೊತೆ ಏನಾದರೂ ಹೊಂದಾಣಿಕೆ ಇದೆಯೇ? ನಾನು ಅತ್ತ ಹಾಗೆ ಮಾಡ್ತೀನಿ, ನೀವು ಸಾಯೋ ಹಾಗೆ ಮಾಡು ಎಂದು ನಾಟಕ ಮಾಡುತ್ತಿದ್ದಾರೋ? ಕೋರ್ಟಿನಲ್ಲಿ ಕೇಸ್‌ನಡೆಸಿದರೆ ಅದು 4-6 ವರ್ಷಗಳ ಕಾಲ ಮುಂದಕ್ಕೆ ಹೋಗುತ್ತದೆ. ಬರಬೇಕಾದ ಒಂದು ಕೋಟಿಗೆ ನಾಲ್ಕು ವರ್ಷ ಮುಂದಕ್ಕೆ ಹೋದರೆ ಒಂದು ಕೋಟಿ ಬಡ್ಡಿಯಾಯಿತು. ನಾವು ಬಡ್ಡಿ ಕಟ್ಟಿ ವಿದ್ಯುತ್ ಉತ್ಪಾದನೆಗೆ ಭಿಕ್ಷೆ ಬೇಡುತ್ತಿದ್ದೇವೆಯೇ? ನಿಮ್ಮ ಇಲಾಖೆಯನ್ನು ಸರಿಯಾದ ರೀತಿಯಲ್ಲಿ ಬಿಗಿ ಮಾಡಿ. ಕಾರ್ಖಾನೆಯವರು ಕೋರ್ಟಿಗೆ ಹೋಗುತ್ತಾರೋ, ಹೋಗಲಿ, ಅಲ್ಲೇ ಸಾಯಲಿ. ವಿದ್ಯುತ್ ಅನ್ನು ಡಿಸ್‌ಕನೆಕ್ಟ್ ಮಾಡಿ. ಏನಾಗುತ್ತದೆಯೇ ನೋಡೋಣ.

ಶ್ರೀ ಸಿ. ಬೈರೇಗೌಡ : ಅದಕ್ಕೆ ಕಾನೂನು ಅಡ್ಡಿ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾನೂನು ಅಡ್ಡಿ ಬರುತ್ತದೆಂದು ನೀವು ನಗುತ್ತಿದ್ದೀರಲ್ಲಾ? ತಾವು ಇಲ್ಲಿ ಕುಳಿತಿದ್ದಂಥ ಸಂದರ್ಭದಲ್ಲಿ ಇದೇ ರೀತಿ ತಾವು ಭಾಷಣ ಮಾಡಿರುವುದನ್ನು ತೆಗೆದು ತೋರಿಸುತ್ತೇನೆ.

ಶ್ರೀ ಬಿ. ಬೈರೇಗೌಡ : ನಾನು ಯಾವತ್ತೂ ಕೂಡ ಈ ತರಹ ಭಾಷಣ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಗೊತ್ತಿಲ್ಲ, ನಾನು ರೈತನ ಮಗ, ನಿಮ್ಮಷ್ಟು ಬುದ್ಧಿವಂತನಲ್ಲ. ನಾನು ಒರಟು ಭಾಷೆಯಲ್ಲೆ ಹೇಳುತ್ತಿದ್ದೇನೆ. ಇದನ್ನು

ಸರಿಪಡಿಸಲಿ, ಜೆ.ಹೆಚ್. ಪಟೇಲರಿಗೆ ಒಳ್ಳೆಯ ಹೆಸರು ಬರಲಿ, ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ, ರೈತ ಬದುಕಲಿ, ಮತ ಕೊಟ್ಟ ಜನರು ನೆಮ್ಮದಿಯಿಂದಿರಲಿ ಎಂದು ಹೇಳುತ್ತಿದ್ದೇನೆ. ಈ ರೀತಿ ಹೇಳುವುದಕ್ಕೆ ಯಾವ ಭಾಷೆ ಬೇಕು?

ಅಧ್ಯಕ್ಷರು : ವಿದ್ಯುತ್ ಸಮಸ್ಯೆ ಬಗ್ಗೆ ನಮಗೂ ಗಂಭೀರತೆ ಇತ್ತು. ಆದರೆ, ಹಸಿವು ಜಾಸ್ತಿಯಾಗುತ್ತಾ ನೀವು ಏನು ಹೇಳುತ್ತಿದ್ದೀರೋ ಅದು ಗೊತ್ತಾಗುತ್ತಿಲ್ಲ, ವೋಲ್ಟೇಜ್ ತಲೆಗೆ ಹತ್ತುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಟ್ಟು 8 ಖಾಸಗೀ ಸಂಸ್ಥೆಗಳ ಮೂಲಕ ಕ್ರಿಸ್ತಶಕ 2000ಇಸವಿಯೊಳಗೆ 2760ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತೇವೆಂದು ಹೇಳಿದ್ದೀರಿ. ಕಳೆದ ಮೂರು ವರ್ಷಗಳ ಯೋಜನೆಗಳಲ್ಲಿ ಸರ್ಕಾರದ ಸಾಧನೆ ನೋಡಿದಾಗ ಕೇವಲ ಎರಡು ವರ್ಷಗಳ ಅವಧಿಯಲ್ಲಿ ವರ್ಷಕ್ಕೆ 500 ಮೆಗಾವ್ಯಾಟ್ ವಿದ್ಯುತ್ ಸೃಷ್ಟಿಸುವ ಮಾತನ್ನು ಹೇಳುತ್ತೀರಿ. ಇದು ಹೇಗೆ ಸಾಧ್ಯವಾಗುತ್ತದೆ? 1995-96ನೇ ಸಾಲಿನಲ್ಲಿ ತೆಗೆದಿಟ್ಟಿರುವಂಥ ಹಣವನ್ನು ನೋಡಿದಾಗ ಇದು ಸಾಧ್ಯವಾಗುತ್ತದೆಯೇ? ವಿದ್ಯುತ್ ಉತ್ಪಾದನೆಗೆ ತಾವು ಬಹುರಾಷ್ಟ್ರೀಯ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡಿದ್ದೀರಿ. ಇದಕ್ಕೆ ಕೇಂದ್ರ ಸರ್ಕಾರ ಏಕೆ ಅನುಮತಿ ಕೊಡುತ್ತಿಲ್ಲ? ಮುಖ್ಯಮಂತ್ರಿಯವರು ಮತ್ತು ಪ್ರಧಾನ ಮಂತ್ರಿಗಳಾದ ನರಸಿಂಹರಾವ್‌ರವರು ಪಕ್ಕಪಕ್ಕದಲ್ಲೇ ಕುಳಿತು ಕಿವಿ ಹತ್ತಿರ ಮಾತನಾಡುತ್ತಿರುವ ಫೋಟೋ ನೋಡುತ್ತೇವೆ. ಇದರಲ್ಲಿ ತೊಂದರೆಯೇನಿದೆ? ಏಕೆ ಮಂಜೂರಾತಿ ಮಾಡಿಕೊಡಬಾರದು? ಬೇಕಾದರೆ, ಈ ವಿಷಯವಾಗಿ ಕೇಂದ್ರಕ್ಕೆ ಒಂದು ನಿಯೋಗ ತೆಗೆದುಕೊಂಡು ಹೋಗೋಣ. 24 ಗಂಟೆಯೊಳಗೆ ಆ ಫೈಲಿಗೆ ಸಹಿ ಹಾಕಿಸಿ ವಾಪಸ್ಸು ತೆಗೆದುಕೊಂಡು ಬರೋಣ. ಆ ಫೈಲನ್ನು ಅವರು ಇಟ್ಟುಕೊಳ್ಳುವುದೆಂದರೇನು? ರೈತ, ಸಾಮಾನ್ಯ ಜನರು ವಿದ್ಯುತ್ ಬರದಿಂದ ಸಾಯುತ್ತಿರಬೇಕಾದರೆ, ಸಂಕಷ್ಟ ಎದುರಿಸುತ್ತಿರಬೇಕಾದರೆ, ಬಹುರಾಷ್ಟ್ರೀಯ ಸಂಸ್ಥೆಗಳವರು ಇಲ್ಲಿಗೆ ಬಂದು ತಮ್ಮ ಕೆಲಸ ಪ್ರಾರಂಭಿಸುವುದಕ್ಕೆ ಸಿದ್ಧವಿರಬೇಕಾದರೆ ಒಂದು ದಿನ ವಿಳಂಬ ಏಕೆ ಆಗುತ್ತದೆ? ನಿಮಗೆ ಪುರುಸೊತ್ತಿಲ್ಲವೇ? ನಾಳೆ ದಿವಸ ಅಧಿವೇಶನ ಮುಗಿದರೆ ಮತ್ತೆ ಎರಡು ದಿವಸಗಳ ರಜಾ ಬಳಿಕ ಸೋಮವಾರವೇ ಸೇರುವುದು. 'ದಯಮಾಡಿ ಅಧಿವೇಶನವನ್ನು ಏಳನೇ ತಾರೀಖಿನವರೆಗೆ ವಿಸ್ತರಿಸುವುದು ಬೇಡ, ಅದರ ಅಗತ್ಯವಿಲ್ಲ. ಜೆ.ಹೆಚ್. ಪಟೇಲರು, ವಿರೋಧ ಪಕ್ಷದವರನ್ನು ಅಗತ್ಯವಿದ್ದರೆ ಎಲ್ಲರನ್ನೂ ಕರೆದುಕೊಂಡು ದೆಹಲಿಗೆ ಹೋಗಿ.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ವಿರೋಧ ಪಕ್ಷದ ನಾಯಕರು ಬೇಕಾಗಿದ್ದರೆ ಅಸೆಂಬ್ಲಿ ಸಮಾವೇಶ ಕ್ಲೋಸ್ ಮಾಡೋಣ, ಏಳನೇ ತಾರೀಖಿನವರೆಗೆ ಬೇಡ, ಡೆಲ್ಲಿಗೆ ಹೋಗಿಬರೋಣ ಎಂದು ಹೇಳುತ್ತಾರೆ, ನಿಮಗೆ ಒಪ್ಪಿಗೆ ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ಅದು ಸಾಧ್ಯವಿಲ್ಲ. ಅವರು ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಅದನ್ನು ನಾನು ವಿರೋಧ ಮಾಡುತ್ತಿಲ್ಲ. ಆದರೆ ಇದು ನನ್ನ ಅಭಿಪ್ರಾಯ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಸ್ವಲ್ಪ ಹಸಿವಾಗಿದೆ, ಹಸಿವನ್ನು ಮರೆಯಲಿ, ತಾವು ಮಧ್ಯದಲ್ಲಿ ಚುಟುಕ ಹಾರಿಸಿ. ತಾವು ಸ್ವಲ್ಪ ಸೀರಿಯಸ್ಸಾಗಿ ತೆಗೆದುಕೊಂಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಬಹಳಷ್ಟು ಮಾತನಾಡುವ ಚಟವೇನೂ ನನಗೆ ಇಲ್ಲ, ಬಹಳಷ್ಟು ಮಾತನಾಡತಕ್ಕಂತಹ ಅಪೇಕ್ಷೆಯೂ ಇಲ್ಲ. ನಿಮ್ಮ ಕೆ.ಇ.ಬಿ. ಮತ್ತೆ ಕೆ.ಪಿ.ಸಿ. ಇವೆರಡರ ಮಧ್ಯ ಸಂಬಂಧಗಳು ಒಳ್ಳೆಯದಿಲ್ಲ. ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳೇ, ದಯಮಾಡಿ ಯಾವುದಾದರೂ ಒಂದನ್ನು ಮುಚ್ಚಿ ಬಿಡಿ. ಇಲ್ಲದಿದ್ದರೆ ಖಂಡಿತ ನಾವು ಉದ್ಧಾರವಾಗುವುದಿಲ್ಲ. ಒಂದು ಮುಚ್ಚಿ

ಒಂದರ ಮೂಲಕ ತಾವು ಮ್ಯಾನೇಜ್‌ಮೆಂಟ್ ಮಾಡಿಸಿ ಏನೂ ತೊಂದರೆ ಇಲ್ಲ. ತಾವು ಹೇಳಿದ್ದೀರಲ್ಲಾ ಕಲ್ಲಿದ್ದಲು ಕೊರತೆ ಇಲ್ಲ ಎಂದು ಇದು ಸತ್ಯ ತಾನೇ, ಕಲ್ಲಿದ್ದಲಿನ ಕೊರತೆಯಿಂದ ದಿನಕ್ಕೆ 16 ದಶ ಲಕ್ಷ ಯೂನಿಟ್ ಉತ್ಪಾದನೆ ಆಗಬೇಕಾಗಿದ್ದಂತಹ ವಿದ್ಯುತ್ ಉತ್ಪಾದನೆಯಲ್ಲಿ 11 ದಶ ಲಕ್ಷ ಯೂನಿಟ್ ಮಾತ್ರ ಉತ್ಪಾದನೆ ಆಗುತ್ತದೆ. ನಿಮ್ಮ ದಾಖಲೆಗಳು ನಮಗೆ ಸಿಗುತ್ತದೆ. ಅಂದರೆ ಕಲ್ಲಿದ್ದಲು ಕೊರತೆ ಇದೆ. ಕಲ್ಲಿದ್ದಲಿನ ಕೊರತೆಯನ್ನು ನೀಗುವುದಕ್ಕೆ ಏನು ಮಾಡುತ್ತೀರಿ? ವಿದೇಶದಿಂದ ತರಿಸುತ್ತೀರಾ? ನಮ್ಮದು ಏನೂ ಅಭ್ಯಂತರವಿಲ್ಲ. ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಿ, ಇರುವಂತಹ ವ್ಯವಸ್ಥೆ ಹಾಳಾಗದಂತೆ ನೋಡಿಕೊಳ್ಳಿ. ಯಾವುನೋ ಒಬ್ಬ ಕೊಜೆಂಟಿಕ್ಸ್ ಇನ್ನೊಬ್ಬರನ್ನು ಕರೆದುಕೊಂಡು ಬರುವುದು ಇದೆಲ್ಲಾ ಏಕೆ? ಆಮೇಲೆ ಸ್ವಾಮಿ ಇರುವುದನ್ನು ಸರಿ ಮಾಡಿ, ಮತ್ತೆ ಉತ್ಪನ್ನ ಜಾಸ್ತಿ ಮಾಡಿ. ಇರುವಂತಹುದು ಸರಿಯಾಗಿಲ್ಲದೆ ಕಳ್ಳತನ ಆಗುತ್ತಿದೆ. ದೊಡ್ಡ ದೊಡ್ಡ ಕಾರ್ಖಾನೆಗಳು ‘‘ಹುಚ್ಚಿ ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂದು ನಡೆಯುತ್ತಿವೆ. ಅವೆಲ್ಲಾ ಸ್ವಲ್ಪ ಬಿಗಿ ಮಾಡಿ. ಅದು ಏನೋ ನಮಗೆ ಕಾರಣಗಳನ್ನು ಹೇಳಿದ್ದಾರೆ. ಈ ಚರ್ಚೆಯಾದ ಮೇಲಾದರೂ ಸಹ ನಾವು ನಮ್ಮ ಕ್ಷೇತ್ರಕ್ಕೆ ಹೋದಾಗ ನಮ್ಮ ರೈತನ ಮನೆಯಲ್ಲಿ ಹಳ್ಳಿಗಳಲ್ಲಿ ಕುಡಿಯುವ ನೀರು ಸಿಗುವಂತೆ ಮಾಡಿ. ರೈತನ ಪಂಪ್‌ಸೆಟ್ಟುಗಳು 10 ಗಂಟೆ ಅಲ್ಲ 8 ಗಂಟೆ ಆದರೂ ಪ್ರಾರಂಭವಾಗಿ ಬೇಸಿಗೆ ಬೆಳೆ ಅವರ ಕೈಗೆ ಬರುವಂತೆ ಮಾಡಿದರೆ ಬಹುಶಃ ಈ ಚರ್ಚೆ ಮಾಡಿದ್ದಕ್ಕೆ ಉಪಯೋಗವಾಗುತ್ತದೆ. ಆ ದಿಕ್ಕಿನಲ್ಲಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ವಿಶೇಷ ಗಮನವನ್ನು ಕೊಡಬೇಕೆಂದು ಒತ್ತಾಯ ಮಾಡಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಸಭಾಧ್ಯಕ್ಷರೇ, ಬಹಳ ಗಂಭೀರವಾಗಿ ವಿದ್ಯುಚ್ಛಕ್ತಿಯ ಬಗ್ಗೆ ಮಾಜಿ ಮುಖ್ಯ ಮಂತ್ರಿಗಳು ಹಾಗೂ ಸನ್ಮಾನ್ಯ ನಾಗೇಗೌಡರು, ವಿರೋಧ ಪಕ್ಷದ ನಾಯಕರು ಮತ್ತು ಯಡಿಯೂರಪ್ಪನವರು ಬಹಳ ಗಂಭೀರವಾಗಿ ಮಾತನಾಡಿದರು. ಆದರೆ ಎಲ್ಲರೂ ರೈತನಿಗೆ 42ಪರ್ಸೆಂಟ್ ವಿದ್ಯುಚ್ಛಕ್ತಿಯನ್ನು ಪುಕ್ಕಟೆ ಕೊಡುತ್ತಿದ್ದಾರೆ. ಆದ್ದರಿಂದ ವಿದ್ಯುಚ್ಛಕ್ತಿ ನಷ್ಟವಾಗಿದೆಯೆಂಬ ರೀತಿಯಲ್ಲಿ ಮಾತನಾಡಿದ್ದಾರೆ. ಸನ್ಮಾನ್ಯ ಬಂಗಾರಪ್ಪನವರು ಪುಕ್ಕಟೆ ಕೊಟ್ಟಿದ್ದನ್ನು ಅವರು ಪುಕ್ಕಟೆ ಕೊಡಲೇಬೇಕು ಎನ್ನುವ ನಿಲುವನ್ನು ಅವರು ಹೇಳಿದ್ದಾರೆ. ಆದರೆ ಪೇಪರ್‌ನಲ್ಲಿ ನೂತನವಾದ ಸರ್ಕಾರ ಒಂದು ಸಮಿತಿ ಮಾಡಿ ರೈತರ ಪರಿಸ್ಥಿತಿಯನ್ನು ತಾವು ಅವಲೋಕನ ಮಾಡಿದಾಗ ಅವರಿಗೆ ಪುಕ್ಕಟೆ ಕೊಟ್ಟರೆ ಇಲ್ಲ. ಅವರಿಗೆ ದುಡ್ಡು ತೆಗೆದುಕೊಂಡು ಕೊಟ್ಟರೂ ಅವರು ಎಷ್ಟು ನಷ್ಟವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಿ. ಆದರೆ ನಾವೆಲ್ಲಾ ಮಾತನಾಡುತ್ತಿದ್ದೇವೆ ಪುಕ್ಕಟೆ ಕೊಡುತ್ತಿದ್ದೇವೆ, ಆದರೂ ರೈತರ ಪರಿಸ್ಥಿತಿ ಏನು ಎಂಬ ಬಗ್ಗೆ ಮಾತನಾಡುತ್ತೇವೆ. ಆದರೆ ಸರ್ಕಾರವೇ ವೈಜ್ಞಾನಿಕವಾಗಿ ಆಲೋಚನೆ ಮಾಡಬೇಕು. ವಿದ್ಯುತ್ ಉಳಿತಾಯ ಮಾಡತಕ್ಕಂತಹ ಒಂದು ವೈಜ್ಞಾನಿಕ ವ್ಯವಸಾಯ ಪದ್ಧತಿಯನ್ನು ಪರಿಚಯ ಮಾಡುವುದರಲ್ಲಿ ನಾವು ಹಿಂದುಳಿದಿದ್ದೇವೆ ಎಂದು ಒಪ್ಪಿಕೊಳ್ಳಬೇಕು.

ಇವತ್ತು ಏನಾಗಿದೆ ಅಂದರೆ ಪಂಪು ಸೆಟ್ಟುಗೆ ಕರೆಂಟ್ ಕೊಡುತ್ತಿದ್ದೇವೆ ಎಂದು ಮಾತನಾಡುತ್ತೀರಿ. ಡ್ರಿಪ್ ಇರಿಗೇಷನ್ ಸ್ಪ್ರಿಂಕೆಲರ್ ಹೆಚ್ಚು ಉಪಯೋಗ ಮಾಡುವುದರಿಂದ ರೈತರಿಗೆ ಸುಮಾರು ಈಗ ಏನು ಕರೆಂಟ್ ಕೊಡುತ್ತೀರಿ, ಇದರಲ್ಲಿ 50 ಭಾಗವನ್ನು ಉಳಿತಾಯ ಮಾಡಬೇಕಬಹುದು.. ಇಲ್ಲ ನಾವು ಏನು ಡ್ರಿಪ್ ಇರಿಗೇಷನ್ ಸ್ಪ್ರಿಂಕ್ಲರ್‌ಗೆ 50 ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆ ಎಂದು ಏನು ತೀರ್ಮಾನ ಮಾಡಿದ್ದೇವೆ ಅದನ್ನು 75 ಪರ್ಸೆಂಟ್ ಕೊಡಬೇಕು. ಇವತ್ತು ಈಗಾಗಲೇ ಬಿಹಾರದಲ್ಲಿ ಕಬ್ಬಿಗೆ

ಡ್ರಿಪ್ ಇರಿಗೇಷನ್ ಮಾಡತಕ್ಕಂತಹ ಒಂದು ಪರಿಸ್ಥಿತಿ ಬಂದಿದೆ. 50 ಪರ್ಸೆಂಟ್ ಕೊಡುತ್ತಿದ್ದೇವೆ, ಕೊಡುತ್ತಿಲ್ಲ ಎಂದು ಅಲ್ಲ, ವ್ಯಾಪಕವಾಗಿ ಆ ಕಾರ್ಯಕ್ರಮ ನಡೆಯುತ್ತಿದೆ. ಅದರಲ್ಲೂ ಎಕರೆಗೆ ಇಷ್ಟು ಎಂದು ಎರಡೂವರೆ ಎಕರೆ ಎಂದು ಒಂದು ಲಿಮಿಟ್ ಮಾಡಿದ್ದೀರಿ, ಉದಾಹರಣೆಗೆ ಮುಂದಗಿರಿ ಎಂಬ ಒಂದು ಗ್ರಾಮದಲ್ಲಿ ಕೇವಲ ಐದು ಹೆಚ್.ಪಿ. 10 ಹೆಚ್ 35 ಎಕರೆಯನ್ನು ಪ್ಲಾಂಟೇಷನ್ ಮಾಡಿರತಕ್ಕಂತಹ ಉತ್ತಮವಾದ ಪರಿಸ್ಥಿತಿಯಲ್ಲಿರತಕ್ಕಂಥದ್ದು ನೀವು ನೋಡಬಹುದು. ಕೇವಲ ಐದರಿಂದ ಆರು ಗಂಟೆ ಟೈಮ್ ಕರೆಂಟ್ ಉಪಯೋಗ ಮಾಡುವುದು. ಅದರಿಂದ ಬಹಳ ಮಹತ್ವದವಾದ ಬದಲಾವಣೆ. ಇದರಿಂದ ರಸಾಯನಿಯ ಉಳಿತಾಯ ಮಾಡಬಹುದು. ಮಣ್ಣಿನ ಅಂಶವನ್ನು ಕಾಪಾಡಬಹುದು, ಉತ್ತಮವಾದ ಆಹಾರವನ್ನು ಜನರಿಗೆ ಸಿಗತಕ್ಕಂತಹ ಕಾರ್ಯಕ್ರಮ ಮಾಡಬಹುದು. ಅದಕ್ಕೆ ಕಾರಣಗಳೇನೆಂದರೆ ನಾವು ಕೇವಲ ಪಂಪ್‌ಸೆಟ್ಟಿನಲ್ಲಿ ರೈತರ ವಿದ್ಯುಚ್ಛಕ್ತಿಯ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಇವತ್ತು ಅವನು ಬೆಳೆದಂತಹ ಬೆಲೆಗೆ ಒಂದು ಉತ್ತಮವಾದ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡದೇ ಇರುವುದರಿಂದ ನಮಗೆ ಯಾರಿಗೂ ರೈತರ ಸ್ಥಿತಿಯ ಬಗ್ಗೆ ಮಾತನಾಡುವುದಕ್ಕೆ ನೈತಿಕ ಹಕ್ಕು ಇಲ್ಲ. ನೈತಿಕ ಹಕ್ಕು ಯಾವಾಗ ಬರುತ್ತದೆ ಅಂದರೆ ಅವನು ಬೆಳೆದ ಬೆಳೆಗೆ ಯಾವಾಗ ನಾವು ಉತ್ತಮವಾದ ವೈಜ್ಞಾನಿಕವಾಗಿ ಬೆಲೆಯನ್ನು ನಾವು ನಿಗಧಿ ಮಾಡುತ್ತೇವೋ ಆಗ ಸರ್ಕಾರಕ್ಕೆ, ಯಾವುದೇ ಸರ್ಕಾರ ಇರಬಹುದು, ಆ ಸರ್ಕಾರಕ್ಕೆ ಮಾತನಾಡುವ ಹಕ್ಕು ಬರುತ್ತದೆ. ಎಲ್ಲಿಯವರೆಗೆ ಗುಲಾಮಗಿರಿ ಮಾರುಕಟ್ಟೆ ಪದ್ಧತಿಯಲ್ಲಿ ನಾವು ರೈತರನ್ನು ಗುಲಾಮರಾಗಿ ಇಟ್ಟುಕೊಂಡಿರುತ್ತೇವೆಯೋ ಅಲ್ಲಿಯವರೆ ನಾವು ಅದನ್ನು ಪುಕ್ಕಟೆ ಕೊಡುತ್ತೇವೆ ಇದನ್ನು ಸಬ್ಸಿಡಿ ಕೊಡುತ್ತೇವೆಂದು ಕೇವಲ ಮಾತನಾಡುತ್ತೇವೆ, ಆದು ರೈತರಿಗೆ ನೇಣು ಹಾಕುವ ವಿಷಯ.

ಇದನ್ನು ದಯವಿಟ್ಟು ವೈಜ್ಞಾನಿಕ ವಿಚಾರವನ್ನು ಆಲೋಚನೆ ಮಾಡಿ ವಿತರಣಾ ವ್ಯವಸ್ಥೆ, ಆಹಾರ ಪದ್ಧತಿ ಇದನ್ನೆಲ್ಲಾ ವೈಜ್ಞಾನಿಕವಾಗಿ ಮಾಡಲು ಕೇವಲ ಇಸ್ರೇಲ್‌ಗೆ ಹೋಗಿ ನೋಡಿಕೊಂಡು ಬಂದು ನಾವು ಅದನ್ನು ಮಾಡುತ್ತೇವೆ ಇದನ್ನು ಮಾಡುತ್ತೇವೆ ಎಂದು ಹೇಳುವುದು ಅಲ್ಲ, ಇದನ್ನು ಇಂಪ್ಲಿಮೆಂಟ್ ಮಾಡತಕ್ಕಂತಹ ಒಂದು ಸಮಿತಿ ಇರಬೇಕು. ಇವತ್ತಿನ ಕೃಷಿ ಇಲಾಖೆ ಇರುವುದು ಏನೂ ಪ್ರಯೋಜನವಿಲ್ಲ. ಕನಿಷ್ಠ ಬಿತ್ತನೆ ಬೀಜ ಕೊಡದೇ ಇರತಕ್ಕಂತಹ ನಿಶ್ಯಕ್ತ ಇಲಾಖೆ. ಅದು ಕೇವಲ ಭಾಷಣ ಮಾಡತಕ್ಕಂತಹ ಇಲಾಖೆಯಾಗಿದೆ. ಆಳವಾಗಿ ರೈತನ ಬದುಕಿನ ಬಗ್ಗೆ ಆಲೋಚನೆ ಮಾಡಿ ಏನಾದರೂ ವಿದ್ಯುಚ್ಛಕ್ತಿಯಲ್ಲಿ ಸುಧಾರಣೆ ತರುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ದಯವಿಟ್ಟು ಗಂಭೀರವಾಗಿ ಆಲೋಚನ ಮಾಡಿ. ರೈತರ ಮೇಲೆ ಹೇರತಕ್ಕಂತಹ ವ್ಯವಸ್ಥೆಯನ್ನು ಬಿಟ್ಟು ರೈತನ ಬದುಕನ್ನು ಉತ್ತಮವಾದ ಸ್ಥಿತಿಗೆ ತೆಗೆದುಕೊಂಡು ಹೋಗಬೇಕು. ಯಾವುದೇ ಕಾರಣಕ್ಕೂ ರೈತನ ಬೆಳೆ ನಷ್ಟ ಆಗದೆ ಇರತಕ್ಕಂಥ ಉತ್ತಮವಾದ ಕರೆಂಟ್ ವ್ಯವಸ್ಥೆಯನ್ನು ತಾವು ಕೊಡಲಿಕ್ಕೆ ಸಾಧ್ಯವೇ ಎಂದು ಅದರ ಬಗ್ಗೆ ಮಾತನಾಡೋಣ. ಅದರಿಂದ ತಾವು ದಯವಿಟ್ಟು ಈ ವೈಜ್ಞಾನಿಕ ವಿಚಾರವನ್ನು ಆಲೋಚನೆ ಮಾಡಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಂಜುನಾಥ್ ಸಿ. ಕನ್ನೂರ್ (ಶಿಗ್ಗಾಂವ್) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ವಿದ್ಯುತ್ತಿನ ಬಗ್ಗೆ ಈಗಾಗಲೇ ಸಾಕಷು ಹಿರಿಯರು ಬೆಳಕನ್ನು ಈ ಸದನದಲ್ಲಿ ಚೆಲ್ಲಿದ್ದಾರೆ. ಇಡೀ ರಾಜ್ಯದಲ್ಲಿ ಇವತ್ತು ವಿದ್ಯುಚ್ಛಕ್ತಿ ಅಭಾವದಿಂದ ಜನರು ಸಂಪೂರ್ಣವಾಗಿ ತತ್ತರಿಸಿದ್ದಾರೆ ಎನ್ನತಕ್ಕಂತಹ ಮಾತನ್ನು ಈಗ ಹೇಳಬೇಕಾಗಿದೆ. ಇವತ್ತು ರೈತರ ಪಂಪ್‌ಸೆಟ್‌ಗಳಿಗೆ ಅಷ್ಟೇ ಅಲ್ಲ ಎಲ್ಲಾ ದೃಷಿಯಿಂದ ಇವತ್ತು ನಾವು ಸಾರ್ವಜನಿಕರಿಗೆ ಈ ವಿದ್ಯುತ್ತಿನ ತೊಂದರೆ ಆಗಿದೆ ಅನ್ನತಕ್ಕಂಥಾದ್ದು ಕೇವಲ 33 ಕೆ.ವಿ.ಸ್ಟೇಷನ್‌ಇವತ್ತು

ಅಲ್ಲಿ 110 ಕೆ.ವಿ. ಸ್ಟೇಷನ್ ಮಂಜೂರಾತಿ ಮಾಡಿದ್ದಾರೆ. ಆದರೆ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಇವತ್ತು ಅಲ್ಲಿ 33 ಕೆ.ವಿ. ಸ್ಟೇಷನ್ ವಿದ್ಯುತ್ ಘಟಕಗಳು ಇದ್ದರೂ ಕೂಡ ಶಿಗ್ಗಾವ್ ಮತ್ತು ಸವಣೂರಿನಲ್ಲಿ ಇನ್‌ಕಮಿಂಗ್ ಎಷ್ಟದೆ ಅಂದರೆ ಅಧಿಕಾರಿಗಳ ರಿಪೋರ್ಟ ಪ್ರಕಾರ 23ರಿಂದ 25 ಕೆ.ವಿ. ಸ್ಟೇಷನ್ ಅಲ್ಲಿ ಬರುತ್ತವೆ ಎನ್ನತಕ್ಕಂಥದನ್ನು ಅಧಿಕಾರಿಗಳು ಮೇಲಧಿಕಾರಿಗಳಿಗೆ ತಿಳಿಸಿದ್ದಾರೆ. ಇವತ್ತು 23ರಿಂದ 25 ಕೆ.ವಿ. ಸ್ಟೇಷನ್ ಅಲ್ಲಿವೆ. ಇದರಿಂದ ವಿದ್ಯಾರ್ಥಿಗಳಿಗೆ ಓದಲಿಕ್ಕಾಗುವುದಿಲ್ಲ. ಅಲ್ಲಿ ಅಲ್ಲಿ ಬೆಡ್‌ಲ್ಯಾಂಪ್ ರೀತಿಯಾಗಿ ಇವತ್ತು ವಿದ್ಯುತ್ ಕಾಣುತ್ತಿದೆ ಜೊತೆಗೆ ಚುನಾವಣೆ ಸಂದರ್ಭದಲ್ಲಿ ಕೆಲವು ಹಿರಿಯರು ನಮ್ಮಲ್ಲಿ ಬಂದಿದ್ದರು. ಡಿ.ಕೆ. ನಾಯ್ಕರ್, ಎಂ.ಪಿ. ರವರು ಮತ್ತು ಇನ್ನಿತರರು ಬಂದಿದ್ದರು ರಾತ್ರಿ 8 ಘಂಟೆ ಸುಮಾರಿಗೆ ಅವರು ಕೇಳಿದರು. ಕ್ಯಾಡಲ್‌ಲೆಸ್ ದ್ಯಾನ್ ಜೀರೋ ಕ್ಯಾಡಲ್ ಇದೆ ಎನ್ನತಕ್ಕಂತಹ ಮಾತನ್ನು ಅಲ್ಲಿರತಕ್ಕಂತಹ ಸಾರ್ವಜನಿಕರು ಮತ್ತು ಅವರು ಕೂಡ ಅಭಿಪ್ರಾಯ ಪಟ್ಟರು. ಇಂತಹ ಪರಿಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ ರೈತರ ಪಂಪ್‌ಸೆಟ್ಟಿಗೆ ನಾವು ಅನಂತರ ಹೋಗಬೇಕಾಗುತ್ತದೆ. ಅದಕ್ಕಿಂತ ಮುಂಚಿತವಾಗಿ ಅವಶ್ಯಕವಾಗಿ ಎಷ್ಟು ಬೆಳಕು ಬೇಕೋ ಅಷ್ಟು ಬೆಳಕು ಇಲ್ಲ. ಇಡೀ ರಾಜ್ಯದಲ್ಲಿ ಅತಿ ಲೋಯಸ್ಟ್ ವೋಲ್ಟೇಜ್ ಪಾಕೆಟ್ ಅಂದರೆ ಇವತ್ತು ಶಿಗ್ಗಾಂವ್‌ಮತ್ತು ಸವಣೂರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಧಾರವಾಡ ಜಿಲ್ಲೆ ಯಲ್ಲಂತೂ ಲೋಯೆಸ್ಟ್ ವೋಲ್ಟೇಜ್ ಪಾಕೆಟ್ ಎನ್ನತಕ್ಕಂಥದ್ದನ್ನು ಅಲ್ಲಿರತಕ್ಕಂತಹ ಅಧಿಕಾರಿಗಳು ಸರ್ಕಾರಕ್ಕೆ ಈಗಾಗಲೇ ವರದಿಯನ್ನು ತಿಳಿಸಿದ್ದಾರೆ. ಆ ಕಾರಣ ಕೊಡಲೇ ಇದನ್ನು ಸರಿಪಡಿಸತಕ್ಕಂತಹ ಕೆಲಸವನ್ನು ಮಾಡಬೇಕು. ಕಳೆದ ವರ್ಷ ಸವಣೂರಿನಲ್ಲಿ ಸಮರ್ಪಕವಾದ ವಿದ್ಯುತ್ತನ್ನು ಈ ಜನರಿಗೆ ಪೂರೈಸಲೇ ಹೋದರೆ ನಾನು ಆತ್ಮ ದಹನವನ್ನು ಮಾಡಿಕೊಳ್ಳುತ್ತೇನೆ ಎನ್ನತಕ್ಕಂಥ ಮಾತನ್ನು ಗದಿಗಪ್ಪ ನಾಡಿಗೇರ್‌ರವರು ಹೇಳಿದ್ದಾರೆ ಅಧಿಕಾರಿಗಳೊಡನೆ ಹಾಗೆ ಹೋಗಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಈ ರೀತಿ ಭಿತ್ತಿ ಪತ್ರಗಳು ಬಂದಿವೆ ಎನ್ನತ್ತಕ್ಕಂತಹ ಮಾತನ್ನು ಅಧಿಕಾರಿಗಳು ಹೇಳಿದ್ದಾರೆ. ಆದಾಗ್ಯೂ ಕೂಡ ಇವತ್ತು ಯಾವುದೇ ಕ್ರಮವನ್ನು ತೆಗೆದು ಕೊಳ್ಳದೆ ಇರುವುದು ಬಹಳ ವಿಷಾದಕರ ಸಂಗತಿ.

ಆ ಕಾರಣ ಇಂತಹ ಪರಿಸ್ಥಿತಿ ಇದ್ದಾಗ ಆ ಭಾಗದಲ್ಲಿ ಮೊದಲು 3-4 ಗಂಟೆ ಲೋಡ್ ಷೆಡ್ಡಿಂಗ್ ಮಾಡುತ್ತಿದ್ದರು. 8-10 ಗಂಟೆಯವರೆಗೂ ವಿದ್ಯುತ್‌ನ್ನು ಲೋಡ್ ಷೆಡ್ಡಿಂಗ್ ಮಾಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದರಿಂದಾಗಿ ಬಹಳಷ್ಟು ಜನ ಈ ವಿದ್ಯುತ್‌ನ ಬಗ್ಗೆ ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ನನ್ನ ಮತಕ್ಷೇತ್ರದಲ್ಲಿ ಸಾಕಷು ತೊಂದರೆಯಾಗಿದೆ. ನಾನೂ ಕೂಡ ಈ ಬಗ್ಗೆ ಪತ್ರಿಕೆಗಳಲ್ಲಿ ಹೇಳಿಕೆ ಮಾಡಿದ್ದೇನೆ. ಒಂದು ವೇಳೆ ಒಂದು ತಿಂಗಳೊಳಗೆ ವಿದ್ಯುತ್ತು ವ್ಯವಸ್ಥೆಯನ್ನು ಸರಿಪಡಿಸದೇ ಹೋದರೆ ನಾನು ಕೆಇಬಿ ಚೀಫ್ ಆಫೀಸರ್ ಮತ್ತು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ಮಾಡಬೇಕಾಗುತ್ತದೆ. ಇದನ್ನು ಪ್ರತಿಭಟನೆ ಮಾಡಬೇಕಾಗುತ್ತದೆಂದು ಈಗಾಗಲೇ ಹೇಳಿದ್ದೇನೆ. ಮಾನ್ಯ ಉಪಮುಖ್ಯಮಂತ್ರಿಗಳು ಬಹಳಷ್ಟು ಅನುಭವಿಕರು ಇದ್ದಾರೆ. ಅವರು ವಿದ್ಯುತ್ತನ್ನು ಸಮರ್ಪಕವಾಗಿ ಪೂರೈಕೆ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತಾರೆ. ಎಂದು ನಾವು ನಂಬಿದ್ದೇವೆ. ಮತ್ತು 2-3 ದಿವಸದ ಹಿಂದೆ ಮಾನ್ಯ ನಂಜೇಗೌಡರೂ ಕೂಡ ಒಂದು ಒಳ್ಳೆಯ ವಿಚಾರವನ್ನು ಹೇಳಿದರು. ಕೇರಳದ ಗ್ರಾಫೈಟ್ ಇಂಡಿಯಾ ಎನ್ನುವಂತಹ ಕಂಪನಿಗೆ ವಿದ್ಯುತ್ತನ್ನು ಕೊಡುತ್ತಿದ್ದಾರೆ ಎನ್ನುವ ವಿಚಾರವನ್ನು ಹೇಳಿದರು, ಆ ಕಾರಣ....

ಅಧ್ಯಕ್ಷರು : ಅಲ್ಲ ನೀವು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದೀರಾ?

ಶ್ರೀ ಮಂಜುನಾಥ್ ಸಿ. ಕನ್ನೂರು : ಆದುದರಿಂದ ಇವತ್ತು ನಮ್ಮ ಜನರಿಗೆ ಬೇಕಾದಂಥ ವಿದ್ಯುತ್ತನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಡಿಮ್ಯಾಂಡ್‌ಗೂ ಮತ್ತು ಜನರೇಷನ್‌ಗೂ ಇರತಕ್ಕಂಥ ಅಂತರದಿಂದ ಉಂಟಾಗಿರತಕ್ಕಂಥಾದ್ದು ಎಂದು ಎಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ಅದರ ಬಗ್ಗೆ ಈಗಾಗಲೇ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ನಾನಾದರೂ ಕೂಡ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ಅಲ್ಲಿ ಇರತಕ್ಕಂಥ ಪರಿಸ್ಥಿತಿಯಲ್ಲಿ ವಿದ್ಯುತ್ತಿನ ಗುಣಮಟ್ಟವನ್ನು ಯಾವ ರೀತಿಯಿಂದ ಕೊಡಬೇಕು ಮತ್ತು ಅದರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನುವಂಥಾದ್ದು ಒಂದು. ಮೊದಲು ನಾವು ವಿದ್ಯುಚ್ಛಕ್ತಿಯನ್ನು ಉಳಿತಾಯ ಮಾಡತಕ್ಕಂಥ ರೀತಿಯನ್ನು ಕಲಿಯಬೇಕಾಗುತ್ತದೆ. ಉದಾಹರಣೆಗೆ ನಗರಸಭೆ ಮತ್ತು ಪುರಸಭೆಗಳಲ್ಲಿ ಸಂಜೆ ವೇಳೆ 6 ಗಂಟೆಗೆ ಬೀದಿ ದೀಪಾಹಾಕಿದರೆ ಬೆಳಿಗ್ಗೆ 8 ಗಂಟೆಯವರೆಗೆ ಆರಿಸದೆ ಇರತಕ್ಕಂಥದ್ದು ನಡೆಯುತ್ತದೆ. ಈ ಬೀದಿ ದೀಪಗಳಲ್ಲಿ ಆಗುತ್ತಿರುವ ವಿದ್ಯುತ್ ಅಪವ್ಯಯವನ್ನು ನಿಲ್ಲಿಸಲು ಉಪಾಯದಿಂದ ಆಟೋ ಸ್ವಿಚ್ ನಗರಸಭೆ ಮತ್ತು ಪುರಸಭೆಯವರು ಇಟ್ಟುಕೊಂಡಿರುವ ಕ್ರಮ ಕೈಗೊಳ್ಳಬೇಕು ನಮ್ಮ ಕಛೇರಿಗಳಲ್ಲೇ ನೋಡಿ, ಯಾರೇ ಮಂತ್ರಿಗಳು ಇರಲಿ ಅಧಿಕಾರಿಗಳು ಇರಲಿ, ಅವರು ಅಲ್ಲಿ ಇಲ್ಲದೆ ಹೋದರೂ ಕೂಡ ಅಲ್ಲಿ ಫ್ಯಾನ್, ಹಾಗೂ ಲೈಟ್‌ಗಳು ಉರಿಯುತ್ತಲೇ ಇರುತ್ತವೆ. ಆ ಉಳಿತಾಯ ನಮ್ಮಿಂದಲೇ ಪ್ರಾರಂಭವಾಗಬೇಕು. ಅದನ್ನು ಯಾವರೀತಿ ಮಾಡಬೇಕು ಎಂದು ಹೇಳಿ. ನಾವು ಟಿವಿಯಲ್ಲಿ ನೋಡಿದ್ದೇವೆ ಪ್ರಕೃತಿದತ್ತವಾಗಿ ಬರತಕ್ಕಂಥಾದ್ದನ್ನು ಉಪಯೋಗಿಸಿ ಎಂದು ಪರದೆ ಎಳೆದು ಬಿಟ್ಟು ಸೂರ್ಯನನ್ನು ತೋರಿಸುತ್ತಾರೆ. ಆದರೆ ಮನೆಯಲ್ಲಿ ಬೆಳಕನ್ನು ಮುಚ್ಚಿ ಬಿಟ್ಟು ಇಂಟೀರಿಯರ್ ಡೆಕೋರೇಷನ್ ಮಾಡಿಕೊಂಡು ಲೈಟ್‌ಫ್ಯಾನ್ ಹಾಕುತ್ತೇವೆ. ಇದನ್ನು ಸರಿಪಡಿಸಿಕೊಳ್ಳುವುದಕ್ಕೆ ದಾರಿ ಹುಡುಕಿಕೊಳ್ಳಬೇಕು ಹಾಗೂ ಉಳಿತಾಯಕ್ಕೆ ಪ್ರಯತ್ನ ಮಾಡಬೇಕು ಎನ್ನುವುದು ಒಂದು. ಮತ್ತೊಂದು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಒಂದು ಕಮಿಟಿ ಮಾಡಿ ಅಲ್ಲಿ ಕೈಗಾರಿಕೋದ್ಯಮ ಮಿಲ್‌ಗಳು ವ್ಯಾಪಾರಸ್ಥರು ಮತ್ತು ಉದ್ದಿಮೆದಾರರು ಯಾರಿದ್ದಾರೆ ಅವರನ್ನು ಕರೆದು ಎಷ್ಟೆಷ್ಟು ವೇಳೆ ವಿದ್ಯುತ್ತನ್ನು ಉಪಯೋಗಿಸಬೇಕು ಎನ್ನುವುದಕ್ಕೆ ಒಂದು ನಿರ್ಬಂದ ಹೇರಬೇಕು. ಬಹಳ ಮುಖ್ಯವಾಗಿ ಇವತ್ತು ನಮಗೆ ಶೈಕ್ಷಣಿಕ ವರ್ಷದ ಕೊನೆಯಭಾಗ. ನಮಗೆ ಬಡ್ಡಿ ಮನ್ನಾ ಆಯಿತು, ಅಕ್ಕಿ ಬೆಲೆ ಕಡಿಮೆಯಾಯಿತು. ಈ ಸಾರಿ ನಮ್ಮ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷೆಗೆ ಹಾಜರಾದ ಎಲ್ಲರಿಗೂ ಕೂಡ ಪರೀಕ್ಷೆ ಮೌದಕ್ಕೆ ಹಾಕಿದ್ದೇವೆ ಎಂದು ಪಾಸ್ ಕೊಟ್ಟುಬಿಟ್ಟರೆ ನಾವು ಯಾರ ಶಾಪಕ್ಕೂ ಬಲಿಯಾಗುವುದಿಲ್ಲ. ನಾನು ಏಕೆ ಈ ಮಾತ ಹೇಳುತ್ತಿದ್ದೇನೆ ಎಂದರೆ ಇವತ್ತು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿರುವವರಿಗೆ ಬಹಳ ಕಷದ ಪರಿಸ್ಥಿತಿಯಾಗಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಇದನ್ನು ಯಾವರೀತಿ ಮಾಡುತ್ತಾರೆ ಎನ್ನುವುದನ್ನು ತಿಳಿಸಬೇಕು ಮಾನ್ಯ ಬಂಗಾರಪ್ಪನವರು ಪುಕ್ಕಟೆ ವಿದ್ಯುತ್ತನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ನಾನು ಅವರನ್ನು ಪ್ರಶಂಸೆ ಮಾಡುತ್ತಾ ಜೊತೆಗೆ ಪುಕ್ಕಟೆ ವಿದ್ಯುತ್ ಪಡೆದುಕೊಂಡಂತಹ ರೈತ ಒಂದು ಪಂಪ್‌ಸೆಟ್‌ಗೆ 10 ಹೆಚ್‌ಪಿ ಹಾಕಿಕೊಂಡು ಕಳ್ಳತನ ಮಾಡತಕ್ಕಂಥ ಕೆಲಸವೂ ಉಂಟು. ಪಕ್ಕದಲ್ಲಿಕರುವವರಿಗೆ ನೀರನ್ನು ಕೊಟ್ಟುದ್ದು ತೆಗೆದುಕೊಂಡಿರುವುದೂ ಉಂಟು. ಇವತ್ತು ನಮ್ಮ ಪದಾರ್ಥಗಳನ್ನು ನಾವೇ ಕಳ್ಳತನ ಮಾಡಿಕೊಳ್ಳುವುದಾದರೆ, ಇನ್ನು ಮುಂದಕ್ಕೆ ಆತ್ಮಾವಲೋಕನ ಮಾಡಿಕೊಂಡು ಈ ರೀತಿ ಆಗುತ್ತಿರುವುದನ್ನು ತಪ್ಪಿಸದೇ ಹೋದರೆ ಈ ಸಮಸ್ಯೆ ಯಾವುದೂ ಕೂಡ ಬಗೆಹರಿಯುವುದಿಲ್ಲ. ಅದಕ್ಕೆ ಕಟ್ಟುನಿಟ್ಟಾದಂತಹ ಕ್ರಮವನ್ನು ಅವರು ಜಾರಿಗೆ ತರಲಿ. ಅದು ಎಷ್ಟೇ ನಿಷ್ಠುರವಾದರೂ ಪರವಾಗಿಲ್ಲ. ಮೇಜರ್ ಇಂಡಸ್ಟ್ರೀಸ್‌ನಲ್ಲಿ 50 ಪರ್ಸೆಂಟ್

ಪವರ್ ಕಟ್ ಮಾಡುತ್ತಿದ್ದಾರೆ. ಆ ಒಂದು ವಿಷಿಯಸ್ ಸರ್ಕಲ್ ಇದೆ 'ಡಿ' ಗ್ರೂಪ್ ನೌಕರರು ಮಾರುತಿ ಕಾರಿನಲ್ಲಿ ಹೋಗಿಬಿಟ್ಟು ವೇಳೆ ಇಲ್ಲದ ವೇಳೆಯಲ್ಲಿ ಹೋಗಿಬಿಟ್ಟು ಮಾಡಿಕೊಂಡು ಬರುತ್ತಿದ್ದಾರೆ. ಸಮರ್ಥ ಅಧಿಕಾರಿಗಳು ಇದ್ದಾರೆ. ಅವರನ್ನು ಉಪಯೋಗಿಸಿಕೊಳ್ಳಿ. ಇದಕ್ಕೆ ಏನಾದರೂ ನಿರ್ಭಂಧ ತೆಗೆದುಕೊಂಡು ಬನ್ನಿ. ಈ ಒಂದು ವಿಷಿಯಸ್ ಸರ್ಕಲ್ ಅನ್ನು ನೀವು ಪ್ರಭಾವ ಬೀರಿ ಇದನ್ನು ತಡೆಗಟ್ಟುವಂತಹ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಸೋಲಾರ್ ಎನರ್ಜಿ ಬಗ್ಗೆ ಹೇಳುವುದಾದರೆ ಚೌಲ್ಟ್ರಿ ಇರಬಹುದು, ಹೋಟೇಲ್ ಇರಬಹುದು 1 ದೊಡ್ಡ ದೊಡ್ಡ ಉದ್ಯಮಗಳಿರಬಹುದು ಈ ಸೋಲಾರನ್ನು ಸಾಕಷ್ಟು ಬಳಕೆ ಮಾಡಿಕೊಂಡರೆ ಈ ಪವರ್ ಉಪಯೋಗವನ್ನು ತಡೆಯಬಹುದು ಎಂದು ಹೇಳಿ ಅದಕ್ಕೂ ಕೂಡ ಎಲ್ಲಾರೀತಿಯ ಪ್ರೋತ್ಸಾಹ ನೀಡಿ ಬೇರೊಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ ನಾನು ಯಾವರೀತಿ ಕರ್ತವ್ಯವನ್ನು ನಿಭಾಯಿಸಬೇಕು ಎಂದು ತುಂಬಾ ಚಿಂತೆಯಾಗಿದೆ. ಮಾನ್ಯ ಸದಸ್ಯರು ಹೇಳತಕ್ಕಂಥ ಸ್ಥಿತಿಗತಿಗಳು ಬಹಳ ಪಾಲು ನಿಜ. ಅದನ್ನು ಯಾರೂ ಉತ್ಪ್ರೇಕ್ಷೆ ಮಾಡಿದ್ದಾರೆ ಎಂದು ಹೇಳುವುದಿಲ್ಲ. ಅಥವಾ ಅವರು ಕೇಳಿರತಕ್ಕಂಥ ಪರಿಹಾರವನ್ನು ಈಗಲೇ ಕೊಡುವುದಕ್ಕೆ ಆಗುತ್ತದೆ ಎನ್ನುವ ವಿಶ್ವಾಸ ನನಗೆ ಇಲ್ಲ. ಆದುದರಿಂದ ಇವತ್ತು ಸ್ಥಿತಿಗತಿಗಳನ್ನು ನಾವೆಲ್ಲರೂ ಕೂಡ ತಿಳಿದುಕೊಳ್ಳಬೇಕು. ಮಾನ್ಯ ಬಂಗಾರಪ್ಪನವರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಪವರ್ ಜನರೇಷನ್ ಬಗ್ಗೆ ನಾವುತಡ ಮಾಡದೆ ಆದಷ್ಟು ಬೇಗ ಹೆಚ್ಚು ಪವರ್‌ನ್ನು ಜನರೇಟ್‌ಮಾಡಿ ಅದನ್ನು ನಂತರ ಉಪಯೋಗ ಮಾಡತಕ್ಕಂಥ ವ್ಯವಸ್ಥೆ ಹಾಗೂ ಹೇಗೆ ಮಾರಾಟ ಮಾಡಬೇಕು, ಯಾವ ಕೈಗಾರಿಕೆಗೆ ಕೊಡಬೇಕು. ಕೃಷಿಗೆ ಕೊಡಬೇಕು, ಹಾಗೂ ಇದನ್ನು ಯೂರು ಯೂರಿಗೆ ಕೊಡಬೇಕು ಎನ್ನುವುದನ್ನು ನಂತರ ಆಲೋಚನೆ ಮಾಡಬೇಕೆಂದು ಅವರು ಹೇಳಿದ್ದಾರೆ. ನಾವು ಈಗ ಈ ದಿಸೆಯಲ್ಲಿ ಹೊರಟ್ಟಿದ್ದೇವೆ. ಆದಷ್ಟು ಬೇಗ ಪವರ್ ಜನರೇಟ ಮಾಡತಕ್ಕಂಥ ಕಂಪನಿಗಳು ಏನು ಬಂದಿವೆ ಅವರಿಗೆ ನಮ್ಮ ಸರ್ಕಾರದ ವತಿಯಿಂದ ಆದಷ್ಟು ಬೇಗ ಪರವಾನಗಿ ಕೊಡುತ್ತೇವೆ. ಬಹಳ ಕಂಪನಿಗಳಿಗೆ ಕೇಂದ್ರ ಸರ್ಕಾರದ ಕೆಲವು ಕಾರಣಗಳಿಂದ ತಡವಾಗುತ್ತಿದೆ. ಕೇಂದ್ರ ಸರ್ಕಾರ ಏಕೆ ತಡ ಮಾಡುತ್ತಿದೆ ಎಂದು ನಾನು ಹೇಳಿದರೂ ಅದು ಪ್ರಯೋಜನವಾಗುವುದಿಲ್ಲ. ಆದರೆ ತತ್‌ಕ್ಷಣ ಮಾಡಬಹುದು. ಅಂಗಡಿಯಲ್ಲಿ ಕರೆಂಟ್ ಹೋದಾಗ ಸಣ್ಣ ಸಣ್ಣ ಜನರೇಟಿಂಗ್ ಯುನಿಟ್ ಇಟ್ಟು ಕೊಂಡಿರುತ್ತಾರೆ. 3 ಕಿಲೋವ್ಯಾಟ್ 6 ಕಿಲೋ ವ್ಯಟ್‌ಎಂದು. ನಾವು 100ಮೆಗಾವ್ಯಾಟ್‌ದು 25,30ಸಣ್ಣ ಸಣ್ಣ ಯುನಿಟ್ ಯಲಹಂಕದಲ್ಲಿ ಹಾಕಿದ್ದೇವಲ್ಲ ಅಂಥ ಯುನಿಟ್‌ಗಳನ್ನು ಹಾಕಿದರೆ, ಒಂದೂವರೆ ವರ್ಷದೊಳಗೆ ಅಥವಾ 18 ತಿಂಗಳೊಳಗಾಗಿ ನಾವು ಪವರ್ ಜನರೇಷನ್ ಇಂಪ್ರೂವ್ ಮಾಡಬಹುದು. ಅದು ಸಾಧ್ಯತೆ ಇದೆ. ಇನ್ನು ಥರ್ಮಲ್‌ಎಂದರೆ ಒಟ್ಟು ಶಾಖೋತ್ಪನ್ನದಲ್ಲಿ ಕಲ್ಲಿದಲ್ಲು ಇದೆ. ಡೀಸಲ್ ಇದೆ, ಗ್ಯಾಸ್ ಇದೆ, ಆಯಿಲ್ ಇದೆ, ಬೇರೆ ಬೇರೆ ಮಲ್ಟಿ ಫ್ಯೂಯಲ್ ಎಂದು ಕರೆಯುತ್ತಾರಲ್ಲಾ ಇವತ್ತು ಯಾವುದೇ ಯುನಿಟ್‌ನ್ನು ಕೋಲ್ ಬೇಸ್ಡ್ ಜನರೇಟ್ ಮಾಡಬೇಕಾದರೆ ಮೂರೂವರೆ ವರ್ಷ ಕನಿಷ 4 ವರ್ಷವಾದರೂ ಬೇಕು. ಇನ್ನು ಹೈಡಲ್ ಪ್ರಾಜೆಕಸ್ಟ್ ನಮ್ಮ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಹೈಡಲ ಕೆಪ್ಯಾಸಿಟಿ ಏನಿದೆ ಅದರೊಳಗೆ only 46 ಪರ್ಸೆಂಟ್ is tapped.ಇನ್ನು ಉಳಿದದ್ದು ಏಕೆ ಆಗಲಿಲ್ಲ ಎಂದರೆ ಯಾವುದೇ ಹೈಡಲ್ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಬೇಕಾದರೆ 4-6 ಡಿಪಾರ್ಟ್‌ಮೆಂಟ್‌ಗಳಿಗೆ ಹೋಗುತ್ತದೆ. ಫಾರೆಸ್ಟ್ ಡಿಪಾರ್ಟಮೆಂಟ್ ಎನ್‌ವಿರಾನ್ ಮೆಂಟಲ ಡಿಪಾರ್ಟಮೆಂಟ್ ಹೀಗೆ 4-6 ಡಿಪಾರ್ಟಮೆಂಟ್‌ಗಳು ಅಬ್ಜೆಕ್ಷನ್ ಹಾಕದ್ದರಿಂದ ಹೈಡಲ್ ಪ್ರಾಜೆಕಟ್ಸ್ ಹೊಸದು ಯಾವುದನ್ನು ನಾವು ತೆಗೆದುಕೊಳ್ಳುವುದಕ್ಕೆ ಆಗಿಲ್ಲ, ಎಕ್ಸೆಪ್ಟ್ ಅಲಮಟ್ಟಿ. ಕಾದ್ರಾ ಕೊಡಸಳ್ಳಿ, ಶಿವನಸಮುದ್ರಂ ಗೇರುಸೊಪ್ಪಾ ಇದೆಲ್ಲಾ

ಪ್ರಾಜೆಕಸ್ಟ್ ನಡೆಯುತ್ತಿದೆ. 97ಕ್ಕೆ ಒಂದು ಕಮಿಷನ್ ಆಗಬಹುದು. 98ಕ್ಕೆ ಕೆಲವು ಕಮಿಷನ್ ಆಗಬಹುದು. ಈಗ ರಾಯಚೂರು ಥರ್ಮಲ್ ಸ್ಟೇಷನ್ ಕೋಲ್ ಬೇಸ್ಡ್ ಥರ್ಮಲ್ ಸ್ಟೇಷನ್. ಈಗ ನಾಲ್ಕು ಯುನಿಟ್ ರೆಡಿರಿ ಇವೆ. ಅದರಲ್ಲಿ ಮೂರು ಯುನಿಟ್ ಕೆಲಸ ಮಾಡುತ್ತಿವೆ. 4ನೇ ಯುನಿಟ್ ಕಮಿಷನ್ ಆಗಿಲ್ಲ ಏಕೆಂದರೆ ಅದು ಜಪಾನ್ ಕಂಪನಿಯವರು ಬಂಡವಾಳ ಹಾಕಿದ್ದಾರೆ. ಅವರು ಎಲ್ಲಾ ಟೆಸ್ಟ್ ಮಾಡಿ ಯಾವುದೇ ರೀತಿಯಿಂದ ತೊಂದರೆ ಇಲ್ಲ ಎಂದು ಒಂದು ತಿಂಗಳು ಟೆಸ್ಟ್ ಮಾಡಿದ ಮೇಲೆ ಅವರು ನಮಗೆ ಒಪ್ಪಿಸಿಕೊಡುತ್ತಾರೆ. ನಾವು ಅದನ್ನು ತೆಗೆದುಕೊಳ್ಳುವುದು ಟೆಸ್ಟ ಆದಮೇಲೆ. ಈಗ ಆ ಟೆಸ್ಟ್ ನಡೆಯುತ್ತಿದೆ. ಆದುದರಿಂದ ತತ್‌ಕ್ಷಣ ಸಮಸ್ಯೆಯನ್ನು ಬಗೆಹರಿಸದಿದ್ದರೆ ಮಾನ್ಯ ಸದಸ್ಯರು ಡೆಪ್ಯೂಟಿ ಕಮಿಷನರ್ ಆಫೀಸ್‌ನ ಮುಂದೆ ಧರಣಿ ಮಾಡುತ್ತೇವೆ ಅಥವಾ ಎಕ್ಸಿಕ್ಯುಟೀವ್ ಎಂಜಿನಿಯರ್ ಮುಂದೆ ಧರಣಿ ಮಾಡುತ್ತೇವೆ ಎಂದರು. ನಾವು ಏನೇ ಸ್ಯಾಕ್ರಿಫೈಸ್ ಮಾಡಿದರೆ ವೋಲ್ಟೇಜ್ ಇಂಪ್ರೂವ್‌ಮೆಂಟ್ ಆಗಿ ಆದರಿಂದ ಎಲೆಕ್ಟ್ರಿಸಿಟಿ ಜನರೇಟರ್ ಆಗುವುದಾದರೆ ನಾನು ನಿಮ್ಮ ಜೊತೆ ಕುಳಿತುಕೊಳ್ಳುತ್ತೇನೆ. ಅದು ಆಗುವುದಿಲ್ಲ. ನಾವು ಹೋರಾಟ ಮಾಡಿ ಯಾರದೋ ವಿರುದ್ಧ ನಾವು ಕನ್‌ಫಾಟೆಂಷೇನ್ ಮಾಡಿಕೊಂಡು ಹೋಗುವುದು ಸಾಧ್ಯವಿಲ್ಲ, ಮಾನ್ಯ ಬಂಗಾರಪ್ಪನವರು ಹೇಳಿದು ಸರಿ. ನಾವು ಇವತ್ತು ಕೇಂದ್ರಸರ್ಕಾರದೊಡನೆ ಜಗಳ ಆಡಿಕೊಳ್ಳುತ್ತಾ ಕುಳಿತುಕೊಂಡರೆ ಎಲೆಕ್ಟ್ರಿಸಿಟಿ ಬರದೇ ಇದ್ದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಈ ವತ್ತು ನಮ್ಮ ಆನ್ ಗೋಯಿಂಗ್ ಪ್ರಾಜೆಕ್ಟ್ಸ್ ಏನಿದೆ ಅದನ್ನು ತ್ವರಿತಗೊಳಿಸಬೇಕು. ಇನ್ನು ಮಾನ್ಯ ಶಿವಕುಮಾರ್‌ರವರು ಹೇಳಿದ್ದಾರೆ energy saved is energy generated. ಅದಷ್ಟು ಸೇವೆ ಮಾಡುವುದು ಹೇಗೆ ಸೋಲಾರ್ ಎನರ್ಜಿಯನ್ನು ಹೇಗೆ ಉಪಯೋಗಿಸಬೇಕು.

ವಿಂಡ್ ಎನರ್ಜಿಯನ್ನು ಹೇಗೆ ಉಪಯೋಗಿಸಬೇಂಬುದರ ಬಗ್ಗೆಯೂ ಕೂಡ ನಾವು ಬಹಳ ತೀವ್ರವಾಗಿ ಗಮನವನ್ನು ಕೊಡಬೇಕು. ಈಗಾಗಲೇ ವಿಂಡ್ ಎನರ್ಜಿಯನ್ನು ಪರೀಕ್ಷೆ ಮಾಡಲು ಬಿಜಾಪುರದ ಒಂದು ಕಂಪನಿಗೆ ನಾವು ಕೊಟ್ಟಿದ್ದೇವೆ. ಕಪ್ಪರಗುಡ್ಡವೆಂದು ಅದು ಇನ್ನೂ ಪ್ರಾರಂಭವಾಗಿಲ್ಲ. ಇನ್ನು ಸೌರಶಕ್ತಿಯ ಬಗ್ಗೆ ಈಗ ನಮ್ಮ ಸಾರ್ವರಜನಿಕ ಸಂಸ್ಥೆಗಳು ಏನಿವೆ, ಉದಾಹರಣೆಗೆ ಹೋಟೆಲ್‌ಗಳು, ಹಾಸ್ಟೆಲ್‌ಗಳು ನೀರನ್ನು ಕಾಯಿಸುವುದಕ್ಕೆ ಸೌರಶಕ್ತಿಯನ್ನು ಉಪಯೋಗಿಸಿದರೆ ಎನರ್ಜಿ ಎಷ್ಟು ಉಳಿತಾಯವಾಗುತ್ತದೆ, ಅದನ್ನು ನಾವು ಬೇರೆಯದಕ್ಕೆ ಕೊಡಬಹುದು. ಎನರ್ಜಿಯನ್ನು ಹೇಗೆ ಉಪಯೋಗಿಸಬೇಕೆಂಬುದರ ಬಗ್ಗೆ ಮಾನ್ಯ ಬಂಗಾರಪ್ಪನವರು ಹೇಳಿದರು. ರೈತರನ್ನು ಮುಟ್ಟಬೇಡಿ ಎಂದರೆ ನಾವು ಮುಟ್ಟುವುದಿಲ್ಲ. ಈ ಅಭಿಪ್ರಾಯವನ್ನು ಇಡೀ ಸದನ ಅಭಿಪ್ರಾಯ ಪಟ್ಟರೆ ನಾನು ರೈತರನ್ನು ಮುಟ್ಟುವುದಿಲ್ಲ. ವಿರೋಧಪಕ್ಷದ ನಾಯಕರು ಅಗ್ರಿಕಲ್‌ಚರ್ ಅನ್ನು ಇಂಡಸ್ಟ್ರಿ ಎಂದು ಕನ್ಸಿಡರ್ ಮಾಡಿ ಎಂದು ಹೇಳಿದ್ದಾರೆ. ನಾವು ಅದನ್ನು ಇಂಡಸ್ಟ್ರಿಸ್ ಎಂದು ಕನ್ಸಿಡರ್ ಮಾಡಿದರೆ ನಾವು ಫ್ರೀಯಾಗಿ ಎಲೆಕ್ಟ್ರಿಸಿಟಿಯನ್ನು ಕೊಡುವುದಕ್ಕಾಗುವುದಿಲ್ಲ. ಇದರಲ್ಲಿ ನಾವು ಸಿನ್ಸಿಯರಾಗಿ ಎನರ್ಜಿಯನ್ನು ಹೇಗೆ ಉಳಿತಾಯ ಮಾಡಬೇಕು ಎಂಬುದರ ಬಗ್ಗೆ ನಾನು ಹೃದಯಪೂರ್ವಕವಾಗಿ ಹೇಳುತ್ತಿದ್ದೇನೆ.

how do we run?

ಅಗ್ರಿಕಲ್ಚರ್‌ಗೆ ನಾವು ಫ್ರೀಯಾಗಿ ಕೊಡುತ್ತೇವೆ. ಶೇ. 42ರಷಟ್ಟು ಅದು ಇದೆಯೋ, ಇಲ್ಲವೋ ಎಂಬುದನ್ನು ತಾವು ತನಿಖೆ ಮಾಡಿಸಿ ಎಂದು ಹೇಳಿದರು. ತನಿಖೆ ಮಾಡಿಸಿದರೂ ಅದರಲ್ಲಿ ಶೇ. ಅಥವಾ ಶೇ.2ರಷ್ಟು ವ್ಯತ್ಯಾಸವಾಗಬಹುದು. ಕೆ.ಇ.ಟಿ.ಯಲ್ಲಿ ಶೇ.90ರಿಂದ 95ರಷ್ಟಾದರೂ ಡ್ಯಾಟಾ ಕಲೆಕ್ಟ್ ಅದರ ಪ್ರಕಾರ ,ಹೆಚ್.ಟಿ.ಇಂಡಸ್ಟ್ರೀಸ್ ಮಾಡುತ್ತಾರೆ. 1993-94ರಲ್ಲಿ 60% of revenue, IP sets 42% construction with nil revenue.

ಈ ವಾಸ್ತವಾಂಶದಲ್ಲಿ ಏನಾದರೂ ತಪ್ಪಿದ್ದರೆ ಮತ್ತೆ ಹುಡುಕಿಸೋಣ. H.T. Industries,28% consumers and their contribution is 60% of our revenue 42.7% farmers. ಇನ್ನು ಅವಶ್ಯವಾಗಿ ಕೊಡಬೇಕಾಗಿರುವಂತಹ ಗಂಗಾಕಲ್ಯಾಣ ಭಾಗ್ಯ ಜ್ಯೋತಿಗೆ ಕೊಡುತ್ತೇವೆ. It is absolutely necessary. ಇನ್ನೂ 28% consumers, ಶೇ. 60ರಷ್ಟು ರೆವಿನ್ಯೂ ಕೊಟ್ಟರೆ ಕೆ.ಇ.ಬಿ. ಹೇಗೆ ನಡಯಬೇಕು,ಕೆ ಪಿಸಿ ಜನರೇಟಿಂಗ್ ನಮ್ಮದು, power is supplied to KEB.

ಕೆ.ಪಿ.ಸಿ ಯಾವ ಆಧಾರದ ಮೇಲೆ ನಡೆಯಬೇಕು, ಅವರೆಲ್ಲಾ ಕೆ.ಇ.ಬಿ.ಗೆ ಮಾಡುತ್ತಾರೆ.

ಕೆ.ಇ.ಬಿ.ಯವರು ಇಂತವರಿಗೆ ಮಾರುತ್ತಾರೆ. ಈಗ ಮುನಿಸಿಪಾಲಿಟಿಯಿಂದ ದುಡ್ಡು ಬಂದಿಲ್ಲ,ವಾಟರ್ ಬೋರ್ಡ್‌ನಿಂದ ದುಡ್ಡು ಬಂದಿಲ್ಲ more than Rs. 267 crore, to be precise, is due ಸರ್ಕಾರದ ಸಂಸ್ಥೆಗಳಿಂದ ದುಡ್ಡು ಬಂದಿಲ್ಲ. ಖಾಸಗಿಯವರನ್ನು ಬಿಡಿ, ಅವರನ್ನು ಬೇಕಾದರೆ ಗಲ್ಲಿಗೆ ಹಾಕೋಣ, but that is only 60%.

ಶ್ರೀ ವಾಟಾಳ್ ನಾಗರಾಜ್ : ಯಾರನ್ನು ಗಲ್ಲಿಗೆ ಹಾಕುವುದು?

ಶ್ರೀ ಜೆ.ಹೆಚ್. ಪಟೇಲ್: ಎಲೆಕ್ಟ್ರಿಸಿಟಿಯನ್ನು ಉಪಯೋಗಿಸಿ ದುಡ್ಡು ಕೊಡದೇ ಇರುವಂತಹ ಉದ್ಯಮಿಗಳನ್ನು, ಬೇಕಾದರೆ ಗಲ್ಲಿಗೆ ಹಾಕೋಣ, ಆದರೆ ಅವರಿಂದ ಬರುವ ದುಡ್ಡು ಬಹಳ. ಆದರೆ ಸರ್ಕಾರಿ ಸಂಸ್ಥೆಗಳಿಂದಲೇ ಹೆಚ್ಚು ಇರುವುದು. ಫ್ರೀಯಾಗಿ-ಎಲೆಕ್ಟ್ರಿಸಿಟಿಯನ್ನು ಫ್ರೀಯಾಗಿ ಕೊಡುವುದು ನಮ್ಮ ರಾಜ್ಯದಲ್ಲಿ ಬಿಟ್ಟರೆ ಬೇರೆ ಯಾವ ರಾಜ್ಯದಲ್ಲೂ ಈ ರೀತಿಯಿಲ್ಲ. ಹರಿಯಾಣ ರಾಜ್ಯದಲ್ಲಿ ಕೃಷಿಯನ್ನು ಅವಲಂಬಿಸಿರುವವರು ನಮ್ಮ ರಾಜ್ಯದಲ್ಲಿರುವಷ್ಟೇ ಇದ್ದಾರೆ. ಅದೇ ರೀತಿ ಪಂಜಾಬ್‌ನಲ್ಲೂ ಅಲ್ಲಿ ಭಯೋತ್ಪಾದನೆ ಇದ್ದರೂ ಸಹ ಅಲ್ಲಿ ರೈತರು ದುಡಿಮೆಯನ್ನು ನಿಲ್ಲಿಸಿಲ್ಲ. ರಾಷ್ಟ್ರದಲ್ಲಿರುವ ಬೇರೆ ಎಲ್ಲಾ ವರ್ಗದವರಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ ರೈತ ಉನ್ನತ ಉನ್ನತ ಮಟ್ಟದಲ್ಲಿರುವುದನ್ನು ನಾವು ಒಪ್ಪಬೇಕಾಗುತ್ತದೆ. ಪಂಜಾಬ್ ಮತ್ತು ಹರಿಯಾಣದಲ್ಲಿ ರೈತರು ಕೊಡುತ್ತಿಲ್ಲವೇ? 1980ಕ್ಕಿಂತ ಮುಂಚೆ ಮೀಟರ್‌ಗಳು ಇತ್ತು,ಮೀಟರ್ ಪ್ರಕಾರ 50 ಪೈಸೆ ಎಂದು ವಸೂಲು ಮಾಡುವುದು ಎಂದು ತೀರ್ಮಾನಿಸಲಾಯಿತು, Then power generation cost was somewhere between 25 paise and 40 paise per unit. ಒಟ್ಟು ಜನರೇಷನ್ ಎಷ್ಟು ಆಗುತ್ತದೆಯೋ ಅದರಲ್ಲಿ ಶೇ.6ರಷ್ಟು ಕನ್ಸಂಮಶನ್ ಎಂದು ಮೀಟರ್ ತೆಗೆದುಹಾಕಿದರು. ನಂತರ ಮಾನ್ಯ ಗುಂಡುರಾಯರು 50ರೂ. ಹಾರ್ಸ್ ಪವರ್‌ಗೆ ಹಾಕೋಣ ಎಂದು ಹೇಳಿದರು. ಇದೇ ಸದನದ ಜಾಯಿಂಟ್ ಸೆಲೆಕ್ಟ್ ಕಮಿಟಿ ರೆಕಮಂಡೇಷನ್‌ನಲ್ಲಿ ಎಲ್ಲಾ ಪಕ್ಷದವರು ಶೇ. 90ರಷ್ಟು ಎಕ್ಸ್‌ಪರ್ಟ್ ಆಫೀಸರ್‌ಗಳು ಅವರೂ ಸಹ ರೈತರ ಮಕ್ಕಳೇ, ಅವರು ರೆಕಮಂಡ್ ಮಾಡಿರುವ ಪ್ರಕಾರ:

"The committee has examined the entire problem in detail in many of the recent meetings and it falt that KEB should not be as far as possible under the mercy of World Bank. But KEB is nmot in a position to take up power system, developmental works in rural areas planned earlier under the World Bank assistance for the reasons already expalined. However ,the Committee strongly feels that the system improvement in rural areas should go on. Hence in the best interest of the irrigation pumpset consumers in the state, majority of the members in the committee recommends to the State

Government to levy a flat rate tariff of Rs.100 per H.P. this is the report of the joint select Committee presnted in 1994. It is not being implemented.

SRI S. BANGARAPPA : whether there was any dissent report?

SRI J.H. PATEL : It is majority report. Majority report is as good as unanimous report.——

ಅದಕ್ಕೆ ನಾನು ಬಹಳ ನೊಂದು ಹೇಳುತ್ತೇನೆ. ಇವತ್ತು ಜನರನ್ನು ನೋಡಿದಾಗ, ವಿದ್ಯುತ್ ಹೋದಾಗ, ಹುಡುಗರು ಓದುವಾಗ ವಿದ್ಯುತ್ ಹೋಗುತ್ತದೆ. ನನಗೆ ಬಹಳ ನಾಚಿಕೆಯಾಗುತ್ತದೆ. ನಾನೇ ಭಾಷಣ ಮಾಡುತ್ತಾ ಇರುತ್ತೇನೆ. ಇದ್ದಕ್ಕಿದ್ದ ಹಾಗೆ ಲೈಟ್‌ಹೋಗಿ ಬಿಡುತ್ತದೆ. ಅವರು ಬೇಕೆಂದು ವಿದ್ಯುತ್ ನಿಲುಗಡೆ ಮಾಡುವುದಿಲ್ಲ. ಅದರ ವ್ಯವಸ್ಥೆ ಅಷ್ಟು ವೀಕ್‌ಕಾಗಿ ಇದೆ. ಇಲ್ಲಿ ಹಳೆಯದಾದ ಕಂಬಗಳು, ಹಳೆಯ ತಂತಿಗಳು ಆದರೆ ಕರ್‌ಟ್ ಮಾತ್ರ ಹಳೆಯದಲ್ಲ. ನನಗೆ ಯಾರೇ ಆದರೂ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟರೂ ನಾನು ಪಾಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಹಳೆಯ ತಂತಿ, ಹಳೆಯ ಕಂಬಗಳು ಇದರ ಬಗ್ಗೆ ತಾವು ವ್ಯಾಖ್ಯಾನ ಮಾಡಿದ್ದು ಮಾತ್ರ ಬಹಳ ಚೆನ್ನಾಗಿದೆ. ಕರೆಂಟ್ ವ್ಯವಸ್ಥೆಯ ಬಗ್ಗೆ ಹೇಳಿದ್ದೀರಲ್ಲಾ.

ಶ್ರೀ ಜೆ. ಹೆಚ್. ಪಟೇಲ್: ಒಬ್ಬರು ನನ್ನನ್ನು ಒಂದು ಪ್ರಶ್ನೆ ಕೇಳಿದರು. ಅದು ಏನೆಂದರೆ ತಾವು ಶ್ರೀಮಂತರನ್ನು ನೋಡಿ ಕರೆಂಟ್ ಕೊಡುತ್ತಿರಂತಲ್ಲಾ, ಬಂದವರಿಗೆ ಕೊಡುವುದಿಲ್ಲವಂತೆ ಎಂದರು. ಇದು ಸ್ಟೋರ್ ಮಾಡುವಂತಹ ವಸ್ತುವಲ್ಲ. ಈ ಸಕ್ಕರೆ, ಎಣ್ಣೆ ಇತ್ಯಾದಿ ಗಳನ್ನು ಇಡುವಂತೆ ಸ್ಟೋರ್‌ನಲ್ಲಿ ಇಡುವ ವಸ್ತು ಅದಲ್ಲ. ಇಲ್ಲಿ ಜನರೇಟಾಗುತ್ತಿದ್ದರೆ ಅಲ್ಲಿ ಕನ್ಸೂಮ್ ಆಗುತ್ತಿರಬೇಕು.

ಶ್ರೀ ಬಿ.ಎಸ್. ಯಡಯೂರಪ್ಪ : ಅದನ್ನು ಕ್ಲಾರಿಫೈ ಮಾಡಿಬಿಡಿ. ನಾನು ಮತ್ತು ಬಂಗಾರಪ್ಪನವರು ನೋಡುತ್ತೇವೆ.

ಶ್ರೀ ಜೆ.ಹೆಚ್. ಪಟೇಲ್ : ಅದನ್ನು ತೋರಿಸುವಂತಹ ಸ್ಥಳ ಇದಲ್ಲ ಸ್ವಾಮಿ. ಆದುದರಿಂದ ನಾವೆಲ್ಲರೂ ಆಲೋಚನೆ ಮಾಡೋಣ, ನೀವು ಸಲಹೆ ಮಾಡಿ ಮಾನ್ಯ ವಿರೋಧಪಕ್ಷದ ನಾಯಕರು, ಎಲ್ಲಾ ಪಕ್ಷದ ನಾಯಕರು, ಕೆ.ಇ.ಬಿ ಅಧಿಕಾರಿಗಳನ್ನು ಕೆ ಪಿ ಸಿ ಅಧಿಕಾರಿಗಳನ್ನು ಕರೆಯಿಸುತ್ತೇನೆ. ನಾವು ಮುಕ್ತವಾಗಿ ಚರ್ಚೆ ಮಾಡಿ ಜನರೇಷನ್ ಬಗ್ಗೆ ಈಗ ನಾವು ಅಗ್ರಿಮೆಂಟ್ ಮಾಡಿ ಕೊಂಡಿರುವಂಥಾದ್ದು ಅದಷ್ಟು ಎಕ್ಸ್‌ಪೈಡೈಟ್ ಮಾಡುವುದು. ಅವರು ಮಾಡಿದಂತಹ ಸಲಹೆಗಳಲ್ಲಿ ಒಂದು ತೀರ್ಮಾನ ಮಾಡಿದ್ದೇವೆ. ಎಲ್ಲಿ ಕೇಂದ್ರಸರ್ಕಾರ ಅಡಚಣೆಗೆ ಬರುವುದಿಲ್ಲ.ಅಲ್ಲಿ ನಾವು ನಮ್ಮಷ್ಟಿಗೆ ತೀರ್ಮಾನ ಮಾಡಬಹುದು. If it is less than rs 100 crores we need not go to Government of India. ಇನ್ನು ಸೋಲಾರ್ ಎನರ್ಜಿ, ವಿಂಡ್ ಎನರ್ಜಿ ಇವುಗಳಿಗೆ ನಾವು ಯಾರ ಹತ್ತಿರವೂ ಹೋಗವುದು ಬೇಕಾಗಿಲ್ಲ ಅಂತಹವನ್ನು ಎಷ್ಟು ಜಾಸ್ತಿ ಮಾಡಬೇಕೋ ಅಷ್ಟನ್ನೂ ಮಾಡಬೇಕು. ನಾವು ಎಷ್ಟು ಉಳಿತಾಯ ಮಾಡಬೇಕೋ ಅಷ್ಟನ್ನು ಉಳಿತಾಯ ಮಾಡಬೇಕು. ಜೊತೆಗೆ ಈ ರೈತರ ಬಗ್ಗೆ ಇದನ್ನು ನಾನು ಪುನಃ ಪುನಃ ಹೇಳುತ್ತೇನೆ, ಅವರ ದೃಷ್ಟಿಯಿಂದ ಬೈರೇಗೌಡರು ಹೇಳಿದ ಹಾಗೆ ಒಂದು ದಿನಕ್ಕೆ ಹತ್ತು ಗಂಟೆ ಸರಿಯಾಗಿ uninterrupted high qulity power ಕೊಟ್ಟರೆ ಯಾವ ರೈತರಿಗೂ ಬೇಸರವಾಗುವುದಿಲ್ಲ. ಈಗ ನಾವೇನು ಮಾಡಿದ್ದೇವೆ,

ಒಂಭತ್ತೂವರೆ ಲಕ್ಷ ಪಂಪಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟೆವು, ಪವರ್‌ಕನೆಕ್ಷನ್ ಕೊಟ್ಟು ಇವತ್ತು ಎಲ್ಲರೂ ಸಫರ್ ಆಗುತ್ತಾರೆ. ಮಾನ್ಯ ಸದಸ್ಯರಿಗೆ ಗೊತ್ತಿದೆ, ಒಂದು ಸಾರಿ ಮೋಟಾರ್ ಬರ್ನ್ ಆದರೆ ಆರೇಳು ಸಾವಿರಗಳ ದಂಡವಾಗುತ್ತದೆ. ನಾವು ಆರೇಳು ಸಾವಿರ ರೂಪಾಯಿಗಳ ಮೋಟಾರನ್ನು ಬರ್ನ್ ಮಾಡಿಕೊಂಡು ದಂಡ ಕೊಡುವುದಕ್ಕಿಂತ ರೈತರಿಗೆ ಕೆ.ಇ.ಬಿ. ನಿನ್ನುದು this is your child ; not let it to die ಅದನ್ನು ಏಕೆ ಸಾಯುವ ಹಾಗೆ ಮಾಡುತ್ತೀರಿ, ಅದನ್ನು ಮೈಟೈನ್ ಮಾಡಿದರೆ ತಾನೇ ಇರುವುದು ಎಂದು ಕೇಂದ್ರದಲ್ಲಿ ಹೇಳೋಣ ಕೆಪಿಸಿಗೆ ದುಡ್ಡು ಕೊಡುವುದಿಲ್ಲ. ಇಂದು ಆ ರೀತಿ ಸ್ಟಾಕ್ ಇಟ್ಟುಕೊಂಡಿಲ್ಲ ನಿಜ ತೊಂದರೆಯಾಗಿದ್ದುದು ರೈಲ್ವೇಸ್ ಕಡೆಯಿಂದ. ಯಾರೋ ಹೇಳಿದರು ದುಡ್ಡು ಕೊಟ್ಟಿದ್ದೇವೆ ಅದಕ್ಕೋಸ್ಕರ ಎಂದು ಕೆಪಿಸಿ ಯಾವುದೂ ದುಡ್ಡು ಉಳಿಸಿಕೊಂಡಿಲ್ಲ, ಆದರೆ ಹೆಚ್ಚು ಅಂದರೆ ಕೊನೆಯಪಕ್ಷ 15 ದಿನದ ಸ್ಟಾಕ್ ಇಟ್ಟುಕೊಳ್ಳಬೇಕು. ಅದನ್ನು ಇಟ್ಟು ಕೊಳ್ಳುವುದಕ್ಕಾಗಲಿಲ್ಲ, ಆದ್ದರಿಂದ ಅದನ್ನು ರೈಲ್ವೇ ಮಂತ್ರಿಗಳಿಗೆ ತಿಳಿಸಿದ್ದೇವೆ, ನಾನೂ ಮಾತನಾಡಿದ್ದೇನೆ, ಅದು ಇಂಪ್ರೂವ್ ಆಗುತ್ತದೆ. ಆದುದರಿಂದ ಎಲ್ಲಾ ಸದಸ್ಯರು ಸಲಹೆಗಳನ್ನೇನು ಕೊಟ್ಟಿದ್ದೀರಿ, ಅವುಗಳನ್ನು ಪರಿಶೀಲಿಸುತ್ತೇನೆ. power generation has been privatised but transmission and distribution ಇನ್ನೂ ಪ್ರೈವಟೈಸ್ ಮಾಡಿಲ್ಲ ನಾನು ಅದಕ್ಕೆ ಮೊನ್ನೆ ಕೆ.ಇ.ಬ.ಯ ನೌಕರರ ಸಂಘದಲ್ಲಿ ಹೇಳಿದ್ದೇನೆ, ನೋಡಪ್ಪ, ಜನ ನಿಮ್ಮನ್ನು ಬೈಯ್ಯುತ್ತಾರೆ, ನೀವು ಇನ್ನೊಬ್ಬರನ್ನು ಬೈಯುತ್ತೀರಿ, ಅವರನ್ನು ಅಥವಾ ನನ್ನ ಇನ್ನೊಬ್ಬರು ಬೈಯುವುದು ಇದರಿಂದ ಪವರ್ ಪ್ರಾಬ್ಲಮ್ಸ ಸಾಲ್ವ್ ಆಗುವುದಿಲ್ಲ ನಾವು ಉಪ್ಪು ತಿಂದ ಮನೆಗೆ ಎರಡನ್ನು ಬಗೆಯಬಾರದು, ಜನರ ಉಪ್ಪು ತ್ತಿನ್ನುತ್ತೇವೆ, ಅವರ ಅನ್ನವನ್ನು ತಿನ್ನುತ್ತೇವೆ, ಅವರಿಗೆ ಸರಿಯಾದ ಸರ್ವೀಸ್ ಮಾಡದಿದ್ದರೆ ನಾವೆಲ್ಲಾ ತಪ್ಪಿತಸ್ಥರು ಆಗುತ್ತೇವೆ ಎಂದು ಹೇಳಿದೆ. ಅವರು ಎಲ್ಲಾ ರೀತಿಯಿಂದ ತಯಾರಾಗಿರುತ್ತಾರೆ, ಹಿಂದೆ ದೋಷಗಳು ಇದ್ದಿರಬಹುದು ಆದರೆ ಅವುಗಳನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏನೇ ದೋಷಗಳಿದ್ದರೂ ಇವತ್ತು ಅದನ್ನು ಸರಿಪಡಿಸಿ ಸರಿಯಾದ ರೀತಿಯಲ್ಲಿ ಪವರ್ ಜನರೇಷನ್ ಎಷ್ಟಾಗಿದೆಯೋ ಅದನ್ನಾದರೂ ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು. ಮಾನ್ಯ ವಿರೋಧಪಕ್ಷದ ನಾಯಕರಾದ ತಾವು ಹೇಳಿದಿರಿ, ಅದನ್ನು ಸರಿಯಾಗಿ ಹಂಚುವುದಕ್ಕೆ ಕಷ್ಟ ಇದೆ ಮಾನ್ಯ ಅಧ್ಯಕ್ಷರೇ, ಈಗ ಕೋಲಾರದ ಯಾವುದೋ ಒಂದು ಭಾಗದಲ್ಲಿ ರೈತರಿಗೆ ವಿದ್ಯುತ್ತನ್ನು ಕೊಡಬೇಕು ಎಂದು ಇಟ್ಟುಕೊಳ್ಳಿ, ಅವರಿಗೇ ಒಂದು ಲೈನ್ ಇಲ್ಲ; ಮಧ್ಯ ಯಾರೋ ಇಂಡಸ್ಟ್ರಿಯಲಿಸ್ಟ್ ಇರುತ್ತಾನೆ. ಮತ್ತೊಬ್ಬ ಇರುತ್ತಾರೆ, ರಿಪೇರಿ ಮಾಡುವವನು ಇರುತ್ತಾರೆ, ವರ್ಕ್ಷಾಪ್ನವರು ಇರುತ್ತಾರೆ, ಲೇಥ್ ಹಾಕಿಸಿಕೊಂಡವನು ಇರುತ್ತಾನೆ, ನೇರವಾಗಿ ಇಂತಹ ವರ್ಗಕ್ಕೆ ಕೊಡಬೇಕು ಎಂಬ ಆ ತರಹದ ಲೈನ್ ಸಿಸ್ಟಂ ಇಲ್ಲ, ಕೆಲವು ಸಾರಿ ಏನಾಗುತ್ತದೆ ನಾವು ಯಾರಿಗೆ ಕೊಡಬೇಕು ಎಂದು ಇರುತ್ತದೆ ಅವನಿಗೆ ಕೊಡುವುದಕ್ಕೆ ಆಗುವುದಿಲ್ಲ. These are such inevitable. ಅನಿವಾರ್ಯವಾದ ತೊಂದರೆಗಳಲ್ಲಿ ನಾವಿದ್ದೇವೆ; ಸ್ವಲ್ಪ ಸಮಯ ಕೊಡಿ, ಸಹಕರಿಸಿ; ಬೇಕಾದರೆ ಮತ್ತೆ ಪುನಃ ಆಲೋಚನೆ ಮಾಡೋಣ, ಇದು ಒಂದು ದಿನಕ್ಕೆ ಬಗೆಹರಿಯುವಂಥ ಸಮಸ್ಯೆಯಲ್ಲ; ಅದು ಸಾಧ್ಯವಾದರೆ ಮತ್ತು ಸದನದಲ್ಲಿ ಇದೇನು ಚರ್ಚೆ ಮಾಡುವ ಅವಶ್ಯಕತೆ ಇಲ್ಲ, ಮಾನ್ಯ ಬಂಗಾರಪ್ಪನವರ, ವಿರೋಧಪಕ್ಷದ ನಾಯಕರು, ಖರ್ಗೆಯವರು, ನಂಜೇಗೌಡರು, ನಾಗೇಗೌಡರು ಇಂತಹ ಒಂದು ವಿಷಯದಲ್ಲಿ ಸೂಕ್ತವಾದ ಸಲಹೆಯನ್ನು ಕೊಡುವಂಥ ಒಂದು ಸಮಿತಿಯನ್ನು ತಾವು ರಚನೆ ಮಾಡಿ, ನಮ್ಮ ಸರ್ಕಾರದ್ದು ಏನೂ ಅಭ್ಯಂತರ ಇಲ್ಲ, ಇಷ್ಟು ಹೇಳಿ ಸಧ್ಯಕ್ಕೆ ನಿಲ್ಲಿಸುತ್ತೇನೆ, ಎಲ್ಲರೂ ಸಹಕರಿಸಬೇಕು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ಈಗಾಗಲೇ ಹಲವಾರು ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ನಾವು ಉಚಿತವಾಗಿ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಕೊಡಬೇಕು ಎಂಬ ವಿಚಾರ ಬಂದಾಗಲೂ ಕೂಡ ಆಗಿದ್ದಂಥ ರೈತರ ಪಂಪು ಸೆಟ್ಟುಗಳಿಗೆ ಸುಮಾರಾಗಿ ಹಾಗೂ ಹೀಗೂ ಅಂಕಿಸಂಖ್ಯೆಯಿಂದ ಸ್ವಲ್ಪ ಜಾಸ್ತಿಯಾಗಿದೆ, ಇಲ್ಲ ಎಂದು ನಾನು ಹೇಳುವುದಿಲ್ಲ. but not that much ಆಗಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಎರಡೂವರೆ ಲಕ್ಷ ಪಂಪುಸೆಟ್ಟು ಇದ್ದದ್ದು ಈಗ ಒಂಭತ್ತೂವರೆ ಲಕ್ಷ ಆಗಿದೆ.

ಶ್ರೀ ಎಸ್. ಬಂಗಾರಪ್ಪ : ಎರಡೂವರೆ ಲಕ್ಷ ಇದ್ದಿದ್ದು ಯಾವಾಗ?

ಶ್ರೀ ಜೆ.ಹೆಚ್. ಪಟೇಲ್ : ಮೀಟರ್ ತೆಗೆದರಲ್ಲಾ ಆಗ.

ಶ್ರೀ ಎಸ್. ಬಂಗಾರಪ್ಪ : ಆ ಕಾಲದಲ್ಲಿ ಮೀಟರ್ ತೆಗೆದು ಹೆಚ್.ಪಿ. ರೇಟ್ ಹಾಕಿದಾಗ, ಮಾನ್ಯ ಸಭಾಧ್ಯಕ್ಷರೇ, ಅದು ಅನಂತರ ಇರತಕ್ಕಂಥ, ಆಗ ನಾವು ಎಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಮಾಡುತ್ತಿದ್ದೆವು ಡಿಸ್ಟ್ರಿಬ್ಯೂಷನ್ ಕೊಡತಕ್ಕಂಥ ವಿಚಾರದಲ್ಲಿ ನಾವು ವಿಚಾರ ಮಾಡಿದಾಗ ಇದನ್ನೆಲ್ಲಾ ನಾವು ಗಮನಕ್ಕೆ ತೆಗೆದುಕೊಂಡು, ಅಧಿಕಾರಿಗಳ ಅಭಿಪ್ರಾಯವನ್ನು ತೆಗೆದುಕೊಂಡು, ಪರಿಣಿತರ ಅಭಿಪ್ರಾಯವನ್ನು ತೆಗೆದುಕೊಂಡು ಉಚಿತವಾಗಿ ಕೊಟ್ಟರೂ ಕೂಡ uninterrpted power supply to farmers pump sets ಎನ್ನತಕ್ಕಂಥ ವಿಚಾರ ಮಾಡಿಯೇ ನಾವೂ ಕೂಡ ತೀರ್ಮಾನ ಮಾಡಿದ್ದುದು. ನೀವು ಹೇಳುವಂಥದ್ದು ನನಗೆ ಗೊತ್ತಾಗುತ್ತದೆ.

ಈ ಒಂದು ದೃಷ್ಟಿಯಿಂದ ಈ ಎಲ್ಲಾ ವಿಚಾರವನ್ನು ಪರಿಶೀಲಿಸಿದೆಯೇ ನಾವು ತೆಗೆದುಕೊಂಡಿರತಕ್ಕ ತೀರ್ಮಾನವಾಗಿರುವುದರಿಂದ ಮತ್ತೆ ಅದನ್ನು ನೀವು ಬದಲಾವಣೆ ಮಾಡಬೇಕು ಎನ್ನುವ ಕಾರಣ ಇವತ್ತಿನವರೆಗೂ ನನಗೆ ಕಾಣಿಸುತ್ತಿಲ್ಲ; ಈಗ HT users ಮತ್ತೊಂದು ಅಲ್ಲಿ ಸೋರುವುದು ಜಾಸ್ತಿಯಾಗಿದೆ ಅದನ್ನು ನಾವು ಗಮನಿಸಬೇಕು. ಇವತ್ತು ಪೆಟ್ಟು ಬೀಳುವುದು ಹೆಚ್‌ಟಿ ಯೂಸರ್ಸ್‌ನಿಂದಲೂ ಕೂಡ ಸಾಮಾನ್ಯ ರೈತರ ಪಂಪುಸೆಟ್ಟುಗಳಿಗೂ ಕೂಡ ಪೆಟ್ಟು ಬೀಳುತ್ತದೆ. ಅದನ್ನು ನಿಲ್ಲಿಸಬೇಕು ಎಂದು ನಾನು ಹೇಳುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಹೆಚ್.ಟಿ. ಯೂಸರ್ಸ್ ಸಂಖ್ಯೆ ಕಡಿಮೆಯಾಗುತ್ತಿದೆ, ಹೆಚ್.ಟಿ. ಯೂಸರ್ರು ಒಂದು ಕಾಲಕ್ಕೆ ಶೇಕಡಾ 40-45 ಇದ್ದದ್ದು it has come down to 28%. Industrialists are running out of the State. ಯಾರನ್ನು ನಾವು ಕರೆದುಕೊಂಡು ಬಂದು ವಿದ್ಯುತ್ ಜನರೇಟ್ ಮಾಡಿ ಕೊಡುತ್ತೇವೆ. ನಮ್ಮ ಜನರಿಗೆ ಕೆಲಸಮಾಡಿ ಎಂದು ಹೇಳಿದೆವೋ ಅವರೆಲ್ಲಾ ಪಕ್ಕದ ಆಂಧ್ರ, ಮುಂತಾದ ಜಾಗಗಳಿಗೆ ಶಿಫ್ಟ್ ಮಾಡುತ್ತಿದ್ದಾರೆ. ಇವತ್ತು ರೈತರುಗಳಿಗೆ ಫ್ರೀಯಾಗಿ ಕೊಡುತ್ತಿದ್ದೇವೆ ಮತ್ತು installationಒಂದು ಪಂಪುಸೆಟ್ಟು ಇನ್ಸ್ಟಾಲ್ ಮಾಡಬೇಕಾದರೆ 16ಸಾವಿರ ರೂಪಾಯಿಯನ್ನು ಕೆ.ಇ.ಬಿ. ಖರ್ಚು ಮಾಡುತ್ತದೆ. ಲೈನು ಎಳೆದು ಕನೆಕ್ಷನ್ ಕೊಡುವುದಕ್ಕೆ; ತಮಿಳುನಾಡಿನವರು ಏನು ಮಾಡುತ್ತಾರೆ, ಅಪ್ಲಿಕೇಷನ್ ಹಾಕಿದ ತಕ್ಷಣ ಅವರ ಹತ್ತಿರ ಡಿಪಾಜಿಟ್ ಇರಬೇಕಾದಂಥ ದುಡ್ಡು ತೆಗೆದುಕೊಳ್ಳುತ್ತಾರೆ. ನಾವು ಇಲ್ಲಿ ಏನೂ ತೆಗೆದುಕೊಳ್ಳುತ್ತಿಲ್ಲ, ಮಾನ್ಯ ಶಿವಕುಮಾರ್‌ರವರು ಹೇಳಿದ ಹಾಗೆ ಅದು ಹೇಗೆ ಉಪಯೋಗವಾಗುತ್ತಿದೆಯೋ, ದುರುಪಯೋಗವಾಗುತ್ತಿದೆಯೋ ಅದನ್ನು ಸರಿಯಾಗಿ ನೋಡಿಕೊಳ್ಳುವ ವ್ಯವಸ್ಥೆ ಇಲ್ಲ, ಆದ್ದರಿಂದ ಇದನ್ನು ಎಲ್ಲಾ ಕಡೆಯಲ್ಲೂ you look at it from every angle ಇವತ್ತು 50 ರೂಪಾಯಿ ಹಾಕಿದರೆ ಸುಮಾರು 125

ಕೋಟಿ ರೂಪಾಯಿ ಬರುತ್ತದೆ, ನ್ನೂರು' ರೂಪಾಯಿ ಹಾಕಿದರೆ ಇನ್ನೂರು ಕೋಟಿ ರೂಪಾಯಿ ಬರಬಹುದು; ಬರೀ ಇನ್ನೂರು ಕೋಟಿ ರೈತರಿಗೆ ಬಿಡುವುದಕ್ಕಾಗುವುದಿಲ್ಲ, ಈ ಪ್ರಶ್ನೆಯನ್ನು ನನ್ನಷ್ಟಿಗೆ ನಾನೇ ಕೇಳುತ್ತೇನೆ ಬಿಡುವುದಲ್ಲ; ಈ ಕೆ.ಇ.ಬಿ. ನನ್ನದು ಎಂದು ಅವನು ತಿಳಿದುಕೊಳ್ಳಬೇಕು. ಈ ಕೆ.ಇ.ಬಿ. ಅಧಿಕಾರಿಗಳಿಗೆ ಹೇಳಿದೆ, ನಿಮಗೆ ಏಕೆ ಉಚಿತವಾಗಿ ಕೊಡುವುದು ಎಂದು ಅವರು ತೆಗೆದುಕೊಂಡ ಮಾತ್ರಕ್ಕೆ ಪವರ್ ಏನೂ ಭಾರೀ ಅಲ್ಲ; ಆದರೆ attitude, ಈಗೇನು ಮಾಡುತ್ತಾರೆ, ತಮಗೆ ಗೊತ್ತಿರಬೇಕು, ಈಗ ನನ್ನದೇ ಒಂದು ಪಂಪುಸೆಟ್ ಇದೆ, ನನ್ನ ಮಗನೇ ನಡೆಸುತ್ತಾನೆ, ಈಗಲೂ ಬೆಳಿಗಾರ, ಸಂಜೆ ಅದನ್ನು ಹಾಕಿಬಿಟ್ಟು ಹೋಗಿ ಬಿಡುವುದು. ಕೆಪ್ಯಾಸಿಟರನ್ನು ಹಾಕುವುದು ವೋಲ್ಟೇಜ್ ಹೆಚ್ಚಾಗಲು ಅಲ್ಲ, ವೋಲ್ಟೇಜ್ ಕಡಿಮೆಯಾದಾಗ ಬರ್ನ್ ಆಗದೇ ಇರಲಿ ಎಂದು ಕೆಪ್ಯಾಸಿಟರ್ ಹಾಕುವುದು; ಕಡಿಮೆಯಾದಾಗ ಬರ್ನ್ ಆಗದೇ ಇರಲಿ ಎಂದು ಕೆಪ್ಯಾಸಿಟರ್ ಹಾಕುವುದು; ಅದಕ್ಕೋಸ್ಕರ ಇವತ್ತು ನಾವು ರೈತರಿಗೆ, ಅವರು ನಮ್ಮ ಅಣ್ಣತಮ್ಮಂದಿರೇ, ನಮ್ಮ ಮಕ್ಕಳೇ, ಅವರಿಗೆ ಈ ರೀತಿಯಾಗಿ ಉಪಯೋಗಿಸಬೇಕು ಎಂದು ಹೇಳಬೇಕು. ಮಹಾರಾಷ್ಟ್ರದಲ್ಲಿ ಹೇಗೆ ಮಾಡುತ್ತಾರೆ, their management of water and power is exemplary.

ಬಹಳ ಚೆನ್ನಾಗಿ ಮ್ಯಾನೇಜ್ ಮಾಡಿದ್ದಾರೆ, ನಾವು ಏಕೆ ಹೀಗಾಗಿದ್ದೇವೆ, ತಾವು ಪುನಃ ಯೋಚನೆ ಮಾಡಿ. ರೈತರ ಮುನ್ನೂರು ಕೋಟಿ ರೂ.ಗಳನ್ನು ನಾವು ಹೊರುವ ಶಕ್ತಿ ಇದ್ದಿದ್ದರೆ, ಇನ್ನು ಬೇಕಾದರೆ ನಮ್ಮ ಪವರ್ ಜನರೇಷನ್ 20-25 ಸಾವಿರ ಮೆಗಾವ್ಯಾಟ್ ಹೋಗಿ ನಮಗೆ ಇಂಡಸ್ಟ್ರಿಯಲ್ ಗ್ರೋತ್ ಆಗಿ ನಮಗೆ ಅಂತರಾಷ್ಟ್ರೀಯ ಸಂಸ್ಥೆಗಳಿಂದ ಸಾವಿರ ಕೋಟಿ ಬಂದಿದ್ದರೆ, ಬಿದಪ್ಪ ನಾವು ರೈತರಿಗೆ ತೆಗೆದುಬಿಡೋಣ ಎನ್ನುವ ಸ್ಥಿತಿಯಾಗಿದಿದ್ದರೆ I would have agreed, ಕೆ.ಇ.ಬಿ. ಓಡ್ಡೋಡಿಸುವ ಆಗಿಲ್ಲ, ಆಕಳು ಎಷ್ಟು ದಿವಸ ಎಂದು ಹಾಲು ಕೊಡುತ್ತದೆ, ಅದಕ್ಕೆ ಏನಾದರೂ ಮೇವು ಹಾಕಬೇಕಲ್ಲಾ; ಇಲ್ಲ ಹಾಗೆ ಸರಸರ ಎಂದು ಹಿಂಡಿಬಿಟ್ಟರೆ ಅದು ಒಂದು ದಿನ ಇದ್ದಕ್ಕಿದ್ದ ಹಾಗೆ ಸಾಯುತ್ತದೆ. ಅದಕ್ಕೆ ನಾನು ಹೇಳುತ್ತೇನೆ ಆಕಳು ನಿಮ್ಮದು, ಅದು ನಿಮಗೆ ಪ್ರಯೋಜನವಾಗಬೇಕು ತಮಿಳುನಾಡಿನವರು ಪ್ರತಿವರ್ಷ ಕೆ.ಇ.ಬಿ.ಗೆ 350 ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುತ್ತಾರೆ; ಇಲ್ಲಿ ತಾವು ತಮ್ಮ ಕಾಲದಲ್ಲಾಗಲಿ, ನಮ್ಮ ಕಾಲದಲ್ಲಾಗಲೀ ಒಂದು ರೂಪಾಯಿ ಸಬ್ಸಿಡಿ ಕೊಟ್ಟಿಲ್ಲ except rate of return.

2.10 ಪಿ.ಎಂ.

111 ಕೋಟಿ ರೂಪಾಯಿ ಕೊಟ್ಟಿರುವುದು ನನಗೆ ಗೊತ್ತಿದೆ. ಆ ಬಗ್ಗೆ ದಾಖಲೆ ಇದೆ. ರೇಟ್ ಆಫ್ ರಿಟರ್ನ ಶೇಕಡ 3 ಆಗುವುದಕ್ಕೆ ಎಷು ಬೇಕೋ ಅಷ್ಟು ಮಾತ್ರ ಅಡ್‌ಜಸ್ಟ್ ಮಾಡುತ್ತೇವೆ. ಬರಬೇಕಾಗಿರತಕ್ಕ ಬಾಕಿ 270ಕೋಟಿ ರೂಪಾಯಿಗಳು ಇದೆ. ಈ ಕಾರಣದಿಂದ ನಾವೂ ಯಾರ ವಿರುದ್ಧವೂ ಅಥವಾ ಯಾರ ಪರವಾಗಿಯೂ ಇಲ್ಲ. ಇವತ್ತು ಸಂಸ್ಥೆ ಉಳಿಯಬೇಕು. ವ್ಯವಸ್ಥೆ ಉಳಿಯಬೇಕು, ಇಂಪ್ರೂವ್ ಆಗಬೇಕು

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ ಸಂಸ್ಥೆ ಉಳಿಯಬೇಕು ಎನ್ನುವುದು ಎಲ್ಲರ ಅಭಿಪ್ರಾಯ. ಅದಕ್ಕೆ ಶಕ್ತಿ ನೀಡಬೇಕು ಎನ್ನತಕ್ಕ ಅಭಿಪ್ರಾಯ ಕೂಡ ಇದೆ. ಯಾವ ಕಾಲದಲ್ಲೂ ಕೆ.ಇ.ಬಿ.ಗೆ ಸಬ್ಸಿಡಿಯನ್ನೇ ಕೊಟ್ಟಿಲ್ಲವೇನೋ ಎಂಬಂತೆ ಹೇಳುತ್ತಿದ್ದೀರಿ. ಇದು ಸರಿಯಲ್ಲ. ದಯವಿಟ್ಟು ಅಂಕಿ ಅಂಶಗಳನ್ನು ತೆಗೆದು ನೋಡಿ. ನಮ್ಮ ಕಾಲದಲ್ಲಿ ಕೂಡ ನಾವು ನೂರಾರು ಕೋಟಿ ರೂಪಾಯಿಗಳನ್ನು ಕೆ.ಇ.ಬಿ.ಗೆ ನೀಡಿ ಅದಕ್ಕೆ ಶಕ್ತಿ ತುಂಬಿದ್ದೇವೆ. ಆ ರೀತಿ ನಾವು ಸಬ್ಸಿಡಿ ಕೊಡದಿದ್ದರೆ ರೈತರಿಗೆ ನಾವು ಫ್ರೀ ಸಪ್ಲೈ ಆಫ್ ಪವರ್ ಕೊಡುವುದಕ್ಕೆ ಆಗಲೀ ಮತ್ತೊಂದಕ್ಕೆ

ಆಗಲೀ ಯಾರಿಗೂ ಕೂಡ ಮಾಡಲಿಕ್ಕೆ ಆಗುತ್ತಿರಲಿಲ್ಲ. ಏಕೆಂದರೆ ಅದು ನಷ್ಟದಲ್ಲಿ ಇರತಕ್ಕ ಸಂಸ್ಥೆ ಎಂಬುದು ನಮಗೆ ಗೊತ್ತಿತ್ತು. ಇವತ್ತು ಈ ಎಲ್ಲಾ ವಿಚಾರಗಳನ್ನು.....

ಒಬ್ಬರು ಮಾನ್ಯ ಸದಸ್ಯರು : ಈಗ ಊಟದ ಸಮಯವಾಯಿತು. ದಯವಿಟ್ಟು ಸದನ ಮುಂದೂಡಿ.

ಅಧ್ಯಕ್ಷರು: ಇಲ್ಲಿ ವಿದ್ವತ್ ಪ್ರದರ್ಶನ ಆಗುತ್ತಿದ್ದರೆ ನಾನೇನು ಮಾಡಲಿ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ ಇಲ್ಲಿ ಚರ್ಚೆಯಾಗುತ್ತಿರುವ ಬಹಳಷ್ಟು ವಿಷಯಗಳು ನನಗೂ ಗೊತ್ತಿದೆ. ಅವರಿಗೂ ಗೊತ್ತಿದೆ. ಅವರಿಗೆ ಗೊತ್ತಿದೆ ಮತ್ತು ತಮಗೂ ಗೊತ್ತಿದೆ. ನಾವು ಇದರ ಬಗ್ಗೆ ಚರ್ಚಿಸಲು ಒಂದು ಎದುರು ಬದುರು ಕುಳಿತುಕೊಂಡು ನಾವಿಬ್ಬರೂ ಚರ್ಚೆ ನಡೆಸೋಣ. ಸದನದಲ್ಲಿ ಈ ರೀತಿ ಉತ್ತರ ಮಾರುತ್ತರ ಎಂದು ಕೊಡುತ್ತಾ ಹೋದರೆ ಮುಗಿಯುವುದಿಲ್ಲ. ನಾವು ಒಂದು ದಿನ ಪೂರ್ತಿ ಕುಳಿತು ಈ ವಿಷಯದ ಬಗ್ಗೆ ಚರ್ಚೆ ಮಾಡೋಣ. ಆದ್ದರಿಂದ ತಾವು ಒಂದು ಕಮಿಟಿ ರಚಿಸಿ.

ಅಧ್ಯಕ್ಷರು : ತಾವು ಸ್ವಲ್ಪ ತಡವಾಗಿ ಬಂದಿರಿ. ಟಿಫನ್ ಚೆನ್ನಾಗಿ ಮಾಡಿಕೊಂಡು ಬಂದಿರಬಹುದು. ಆದರೆ ನಾವು ಬೆಳಿಗ್ಗೆ ಬೇಗ ಬಂದಿದ್ದೇವೆ. ಟಿಫನನ್ನೂ ಕಡಿಮೆ ಮಾಡಿದ್ದೇವೆ. ಆದ್ದರಿಂದ ಹಸಿವು ಜಾಸ್ತಿಯಾಗಿದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ ಈಗ ಅವರು ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯರೂ ಕುಳಿತುಕೊಂಡು ಮಾತನಾಡೋಣ ಎಂದು ಏನು ಸಲಹೆ ಕೊಟ್ಟಿದ್ದಾರೆ. I do not know what exactly the feeling of this august House? I do not know all these things. ಅದು ಎಲ್ಲಾ ರಾಜಕೀಯ ಪಕ್ಷಗಳ ಮಾನ್ಯ ಸದಸ್ಯರಿಗೆ ಬಿಟ್ಟ ವಿಚಾರ.ನಾನು ಮಾತನಾಡಬೇಕಾದರೆ ಒಂದು ಮಾತನ್ನು ಸ್ಪಷ್ಟಪಡಿಸಿದ್ದೇನೆ. Even now I stand on scientific reasons

ಏಕೆಂದರೆ ಫ್ರೀ ಎಂದು ರೈತರಿಗೆ ಹೇಳಿ ಬರೀ ಫ್ರೀ ಎಂದು ಕೊಟ್ಟಿದ್ದೇವೆ ಎಂದಲ್ಲ ನಾವು ಅಗ್ರಿಕಲ್ಚರಲ್ ಪ್ರೊಡಕ್ಷನ್ ಗಮನದಲ್ಲಿಟ್ಟುಕೊಂಡು ಫ್ರೀ ಕೊಟ್ಟಿದ್ದೇವೆ ಎನ್ನತಕ್ಕ ಮಾತನ್ನು ಜಸ್ಟಿಫೈ ಮಾಡುತ್ತೇನೆ. Even now I hold that view. ನಾಳೆ ಅದೇ ರೀತಿ ಅಭಿಪ್ರಾಯ ಕೊಡತಕ್ಕ ಸಂದರ್ಭ ನಿಮಗೂ ಬರಬಹುದು. ಆ ದೃಷ್ಟಿಯಿಂದಲೇ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ ಹಾಗೂ ಅನೇಕ ರಾಜಕೀಯ ಪಕ್ಷಗಳ ಮಾನ್ಯ ಸದಸ್ಯರು ಇದರ ಬಗ್ಗೆ ಈಗಾಗಲೇ ಬೆಳಕನ್ನು ಚೆಲ್ಲಿದ್ದಾರೆ. ಈಗ ನಾವು ಕುಳಿತುಕೊಂಡು ಮಾತನಾಡತಕ್ಕದ್ದು ಬಿಡತಕ್ಕದ್ದು ಏನೆಂಬುದನ್ನು ಸಭಾಧ್ಯಕ್ಷರು ಅನಂತರ ತೀರ್ಮಾನ ಮಾಡಲಿ. ಅವರ ಒಂದು ವಿಚಾರ ಈ ರೈತರಿಗೆ ಈಗ ನಾವು ಏನು ಫ್ರೀ ಆಫ್ ಕಾಸ್ಟ್ ವಿದ್ಯುಚ್ಛಕ್ತಿಯನ್ನು ಸಪ್ಲೈ ಮಾಡುತ್ತಿದ್ದೇವೆ. ಅದು ಅನ್ ಇಂಟರ್‌ಫಟೆಡ್ ಆಗಿ ಯಾವ ಕಾಲದಲ್ಲೂ ಕೂಡ ನಿಲ್ಲದೇ ಹೋಗಬೇಕು ಎನ್ನುವುದು ಒಂದು ವಿಚಾರ. ಈ ನೀತಿಯಲ್ಲಿ ಯಾವುದೇ ಯಾವುದೇ ಬದಲಾವಣೆಯನ್ನು ಮಾಡುವುದಾದರೆ ಅದು ಅಗ್ರಿಕಲ್ಚರಲ್ ಪ್ರೊಡಕ್ಷನ್ ಮೇಲೆ ಪರಿಣಾಮವಾಗುತ್ತದೆ ಎನ್ನತಕ್ಕದ್ದು ನನ್ನ ಎರಡನೇ ವಿಚಾರ. ಅದನ್ನು ಬಿಟ್ಟರೆ ಬೇರೆ ಯಾವುದಕ್ಕೂ ಕೂಡ ನಾವು ಹೋಗುವುದಿಲ್ಲ. ಅಲ್ಲಿ ಬೇಕಾದಷ್ಟು ಟ್ರಾನ್ಸ್‌ಮಿಷನ್ ಲಾಸ್ ಆಗುತ್ತಿರಬಹುದು ಅಥವಾ ಒಲ್ಟೇಜ್ ಡ್ರಾಪ್ ಆಗಿ ಪಂಪ್‌ಸೆಟ್ ಸುಟ್ಟು ಹೋಗಿರಬಹುದು. ಇದೆಲ್ಲಾ ನಿಜ. ನಾವು ಇದನ್ನೆಲ್ಲಾ ಇಲ್ಲಿ ಹೇಳಿದ್ದೇವೆ. ಈ ಬಗ್ಗೆ ಸರ್ಕಾರದ ನೀತಿ ಸ್ಲೋಗನ್ ಪ್ರಕಟ ಮಾಡಬೇಕಾಗಿತ್ತು. ಇದು ಸರಿಯಲ್ಲ. ನೀವು ಒಂದು ವೇಳೆ ಈ ವಿಚಾರದ ಬಗ್ಗೆ , ನಾವು ಸಧ್ಯಕ್ಕೆ ತೀರ್ಮಾನ ತೆಗೆದುಕೊಳ್ಳದೇ ಇದ್ದರೆ ಯಾವಾಗ ನೀವು ಇದನ್ನು ಮಾಡುವುದು? ಯಾವಾಗ ಕುಳಿತುಕೊಂಡು

ಚರ್ಚೆ ಮಾಡುವುದು? ಚಾರ್ಜು ಮಾಡಬೇಕು ಹಣ ವಸೂಲು ಮಾಡಬೇಕು ಎನ್ನುವುದು ನಿಮ್ಮ ಅಭಿಪ್ರಾಯದಲ್ಲಿ ಇದೆ. ನೀವು ಅದನ್ನು ಮೊದಲೇ ಹೇಳಿದ್ದೀರಿ. ಅದಕ್ಕೆ ಮೈನ್‌ಟೆನೆನ್ಸ್ ಚಾರ್ಜ್ ಎಂದು ನೀವು ಹೇಳಿದ್ದೀರಿ. ಅದನ್ನು ಸ್ಪಷಪಡಿಸವೇ ಬೇರೆ ಯಾವುದನ್ನೂ ನಾವು ಒಪ್ಪುವುದಿಲ್ಲ. ರೈತರ ಮೇಲೆ ಮತ್ತಾವುದೇ ರೀತಿಯಲ್ಲಿ ಹೊರಹಾಕಲಿಕ್ಕೆ ಸಧ್ಯಕ್ಕೆ ನಾವು ಒಪ್ಪುವುದಿಲ್ಲ. ನಿಮ್ಮ ಕೊಜೆಂಟ್ರಿಕ್ಸ್ ಕಂಪನಿಯೋ ಮತ್ತೊಂದೋ ತನ್ನ ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿ ಮಾಡಿಕೊಂಡಾಗ ನಾವು ಒಪ್ಪುತ್ತೇವೆ ಆದರೆ ಈಗಲ್ಲ. ಈಗ ಅದನ್ನು ಮಾಡುವುದಕ್ಕೆ ಹೋಗಬಾರದು. ಆದುದರಿಂದ ನಿಮ್ಮ ನಿಲುವನ್ನು ನಮ್ಮ ಪಕ್ಷದವರು ಯಾರೂ ಒಪ್ಪುವುದಿಲ್ಲ.

ರೈತರನ್ನು ಕರೆದು ಅವರನ್ನು ಒಪ್ಪಿಸಿ ಮಾಡುತ್ತೇವೆ ಎಂದು ನಾನು ಹೇಳಿದ್ದೇನೆಯೇ? ಈ ಬಗ್ಗೆ ನಾವು ಬಡ್ಜೆಟ್‌ನಲ್ಲಿ ಏನಾದರೂ ಸೇರಿಸಿದ್ದೇವೆಯೇ? ನಾನು ಏನು ಹೇಳಿದ್ದೇನೆ ಎಂದರೆ.......

ಶ್ರೀ ಎಸ್. ಬಂಗಾರಪ್ಪ : ರೈತರನ್ನು ಕರೆಯಿಸುವುದಕ್ಕೆ ಏನು ವಿಧಿ ವಿಧಾನ ತಾವು ಅನುಸರಿಸುತ್ತೀರಿ? ಹಿಂದಿನ ಸರ್ಕಾರವು ಇದ್ದಾಗ ಏನು ಮಾಡಿದರು ಗೊತ್ತೇ? ರೈತ ಸಂಘದವರ ಜೊತೆಗೆ ಮಾತುಕತೆ ಮಾಡುತ್ತೇವೆ ಎಂದು ಹೇಳಿ ತಮಗೆ ಬೇಕಾದವರ ರೈತರನ್ನು ಕರೆದು ಮಾತುಕತೆ ನಡೆಸಿ ವಿಷಯವನ್ನು ಮುಕ್ತಾಯಗೊಳಿಸಿದ್ದರು. ಅದು ಯಾವ ಸರ್ಕಾರವೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ರೈತರು ಕರ್ನಾಟಕ ರಾಜ್ಯದ ಹತ್ತೊಂಭತ್ತು ಜಿಲ್ಲೆಗಳಲ್ಲೂ ಇದ್ದಾರೆ ಅವರೆಲ್ಲರನ್ನೂ ಕರೆಯಿಸಿ ಮಾತುಕತೆ ನಡೆಸಲಿಕ್ಕೆ ತಾವು ಯಾವ ರೀತಿ ವಿಧಿ ವಿಧಾನ ಅನುಸರಿಸುತ್ತೀರಿ? ನಿಮಗೆ ಅದು ಯಾವಾಗ ಸಾಧ್ಯವಾಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್ : ಇಂತಹ ಇಂತಹ ಕಡೆಯಿಂದ ಇಂತಹ ಇಂತಹ ರೈತ ಮುಖಂಡರುಗಳನ್ನು ಕರೆಯಿಸುತ್ತೇವೆ ಎಂಬ ವಿವರ ನಾನು ತಮಗೆ ಕಳುಹಿಸಿಕೊಡುತ್ತೇನೆ. ನೀವು ಯಾವುದಾದರೂ ಸಲಹೆ ಕೊಡುವುದಿದ್ದಲ್ಲಿ ಕೊಡಿ. ನಾನು ಯಾರನ್ನೂ ದೂರು ಮಾಡುವುದಿಲ್ಲ. ಯಾರನ್ನೂ ಕೇಳದೇ ಇದನ್ನು ಮಾಡುವುದಿಲ್ಲ. ನಿಮ್ಮನ್ನೂ ಕೇಳುತ್ತೇನೆ ಮಾನ್ಯ ಯಡಿಯೂರಪ್ಪನವರನ್ನೂ ಕೇಳುತ್ತೇನೆ. ಮಾನ್ಯ ನಂಜೇಗೌಡರನ್ನೂ ಕೇಳುತ್ತೇನೆ. ತಾವು ಯಾರು ಯಾರನ್ನು ಕರೆಯಿಸಿ ಮಾತನಾಡಬೇಕು ಎಂದು ಹೇಳುತ್ತೀರೋ, ಅವರನ್ನು ಕರೆಸಿ ಮಾತನಾಡೇಣ.

ಶ್ರೀ ಎಸ್. ಬಂಗಾರಪ್ಪ : ಇದು ಸರಿಯಲ್ಲ. ರೈತರನ್ನು ಕರೆಯಿಸಿ ಮಾತನಾಡುತ್ತೇವೆ ಎಂದು ತಾವು ಹೇಳಿದ್ದೀರಿ . ಈಗ ಕರ್ನಾಟಕ ರಾಜ್ಯದ ತಾಲ್ಲೂಕು ತಾಲ್ಲೂಕಿನಲ್ಲೂ ಮೂಲೆ ಮೂಲೆಯಲ್ಲೂ ರೈತರಿದ್ದಾರೆ. ಅವರೆಲ್ಲರನ್ನೂ ನೀವು ಕರೆಯಿಸಿದೆವು ಬಿಟ್ಟು ನಮಗೇಕೆ ಹೇಳುತ್ತಿದ್ದೀರಿ? ನೀವು ಹೇಳಿದಕ್ಕೇ ನಾವು ಕರೆಯಿಸಿದೆವು ಎಂದು ದೂಷಿಸಬೇಕೆಂದಿದ್ದೀರಾ? ನಮ್ಮನ್ನು ರೈತರಿಂದ ಬೈಯಿಸಬೇಕೆಂದಿದ್ದೀರಾ? ನೀವು ಬಹಳ ಬುದ್ಧಿವಂತರು ಸ್ವಾಮಿ. ಇದು ಸರಿಯಲ್ಲ. ನಿಮ್ಮ ಸರ್ಕಾರದ ನೀತಿ ಧೋರಣೆಗಳು ನಿಮಗೆ ಸಂಬಂಧಪಟ್ಟಿದ್ದುದು ನೀವು ಏನಾದರೂ ಮಾಡಿ. ರೈತರಿಗೆ ಉಚಿತವಾಗಿ ವಿದ್ಯುತ್ತನ್ನು ಕೊಡಬೇಕು ಎನ್ನತಕ್ಕ ಮಾತನ್ನು ನೀವು ಒಪ್ಪುತ್ತಿಲ್ಲ. There has been a gulf of difference. ಮಾನ್ಯ ಸಭಾಧ್ಯಕ್ಷರೇ ಇದಕ್ಕಾಗಿ ಸರ್ಕಾರದ ಈ ನೀತಿಯನ್ನು ನಾವು ಅನಿವಾರ್ಯವಾಗಿ ಪ್ರತಿಭಟನೆ ಮಾಡುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಬಂಗಾರಪ್ಪನವರೇ ದಯವಿಟ್ಟು ಸಭಾತ್ಯಾಗ ಮಾಡುವುದು ಬೇಡ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ಈಗಾಗಲೇ ಈ ಬಗ್ಗೆ ಇಲ್ಲಿ ಚರ್ಚೆಯಾಗಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಇಲ್ಲಿ ನೋಡಿ ಇವರು ಸಭಾತ್ಯಾಗ ಮಾಡಬೇಕೆಂದು ನಮಗೆ ಹೇಳಿಕೊಡುತ್ತಿದ್ದಾರೆ.

ಅಧ್ಯಕ್ಷರು : ಅವರು ನಿಮ್ಮ ಹಕ್ಕು ಮೊಟಕುಗೊಳಿಸುತ್ತಿಲ್ಲ. ನೀವು ಪ್ರತಿಭಟನೆ ಮಾಡಬೇಕೆಂದು ಸಿದ್ಧವಾಗಿದ್ದೀರಿ. ನೀವು ಏಕೆ ಅವರಿಗೆ ಅಡ್ಡ ಹೋಗುತ್ತೀರಿ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ನಾನು ಕೇವಲ "ಪ್ರತಿಭಟನೆ ಮಾಡುತ್ತೇನೆ" ಎಂದಷ್ಟು ಹೇಳಿದೆ. ಆದರೆ ಪ್ರತಿಭಟನೆ ಮಾಡುವುದಕ್ಕೆ ಅನೇಕ ದಾರಿಗಳಿವೆ.

ಶ್ರೀ ಜೆ.ಹೆಚ್ ಪಟೇಲ್ : ನೀವು ವಾಕೌಟ್‌ಮಾಡುತ್ತೇವೆಂದು ಹೇಳಿದರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ ಇವರ ನೀತಿಯನ್ನು ನಾವು ಪ್ರತಿಭಟಿಸುತ್ತೇವೆ. ಉಚಿತವಾಗಿ ವಿದ್ಯುತನ್ನು ರೈತರಿಗೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಅವರು ಆಡಬೇಕಾಗಿತ್ತು ಆದರೆ ಆಡಿಲ್ಲ. ಆ ನೀತಿಯನ್ನು ಪ್ರತಿಭಟಿಸಿ ನಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಬಂಗಾರಪ್ಪನವರ ನೇತೃತ್ವದಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ಮಾನ್ಯ ನಂಜೇಗೌಡರೇ, ಮೊನ್ನೆ ತಾವು ಭಾಷಣ ಮಾಡತಕ್ಕ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಆಡಿದ್ದೀರಿ. ಅದು ಡೆಕ್ಕನ್ ಹೆರಾಲ್ಡ್ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ತಾವು ಶ್ರೀ ಗುರುಪ್ರಸಾದ್ ಎಂಬುವವರನ್ನು ಒಳಪಡಿಸಿಕೊಂಡು ಅವರು ಭ್ರಷ್ಟರು ಅನ್ನುವಂತಹ ಅರ್ಥದಲ್ಲ ಪತ್ರಿಕೆಗಳಲ್ಲಿ ಪ್ರಚಾರ ಆಗಿದೆ ಎಂದು ಹೇಳಿ ಅವರು ತಮ್ಮ ವಕೀಲರ ಮೂಲಕ ಒಂದು ಪತ್ರವನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ. ಅವರು ಆ ತರಹದವರು ಅಲ್ಲ. ಅವರ ಮೇಲೆ ಅಂತಹ ಯಾವ ಘಟನೆಗಳು ಆಗಿಲ್ಲ. ಯಾವುದೋ ಒಂದು ಮೊಕದ್ದಮೆ ಮಾತ್ರ ಇದೆ ಎಂದು ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಈ ಬಗ್ಗೆ ತಾವೇ ಕ್ಲಾರಿಫೈ ಮಾಡಿದರೆ ಬೆಟರ್ ಎಂದು ಕಾಣಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ವಿಷಯಕ್ಕೆ ಹೋಗುವುದಕ್ಕೆ ಮುಂಚೆ ನಾವು ಇಲ್ಲಿ ಕುಳಿತಿರುವಂತಾದ್ದು ವಿದ್ಯುತ್ತು ನಾವು ಫ್ರೀಯಾಗಿ ಐ.ಪಿ. ಸೆಟ್ಟುಗಳಿಗೆ ಕೊಡುತ್ತಿದ್ದೇವೆ. ಇದುವರೆಗೂ ಅದೇ ಪದ್ಧತಿ ಇದೆ, ಮುಂದೂವರೆಯುತ್ತಿದೆ. ಅದನ್ನು ತಾವು ಕಂಟಿನ್ಯೂ ಮಾಡುತ್ತೀರಾ? ಯಾವುದೇ ಕಾರಣಕ್ಕೆ ಐ.ಪಿ. ಸೆಟ್ಟುಗಳ ಮೇಲೆ ನೀವು ಯಾವುದೇ ರೇಟ್ ಫೀಕ್ಸ್ ಮಾಡುವುದಕ್ಕೆ ಬಿ.ಜೆ.ಪಿ. ಸಂಪೂರ್ಣವಾಗಿ ವಿರೋಧ ಇದೆ. ಐ.ಪಿ. ಸೆಟ್ಟುಗಳ ಮೇಲೆ ಯಾವುದೇ ರೀತಿಯಲ್ಲ ದರವನ್ನು ಹೇರಬಾರದು ಎಂದು ಕಮಿಟಿಯಲ್ಲಿ ಪ್ರೊಟೆಸ್ಟ್ ಮಾಡಿದವರಲ್ಲಿ ನಾವೇ ಮೊದಲಿಗರು. ಇದು ರೆಕಾರ್ಡ್ಗೆ ಹೋಗಲಿ. ಉಚಿತವಾಗಿ ರೈತರಿಗೆ ವಿದ್ಯುತ್ ಸರಬರಾಜು ಮಾಡುತ್ತೇವೆ ಎಂದು ಭರವಸೆ ನೀಡುತ್ತೀರಿ ಎನ್ನುವ ಆಧಾರದ ಮೇಲೆ ನಾವು ಇಲ್ಲಿ ಕುಳಿತಿದ್ದೇವೆ.

ಅಧ್ಯಕ್ಷರು : ಅವರು ಹೋಗಲಿಕ್ಕೆ ಸಿದ್ಧವಾಗಿ ಬಂದಿದ್ದರು. ಇವರು ಕುಳಿತುಕೊಳ್ಳಲಿಕ್ಕೆ ಸಿದ್ಧವಾಗಿ ಬಂದಿದ್ದಾರೆ. ನೀವು ಹೋಗಬೇಡಿ. ನೀವು ಇರಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಏಕೆಂದರೆ ಪಟೇಲ್‌ರವರಿಗೆ ರೈತರ ಕಷ್ಟ ಸುಖ ಎಲ್ಲದರ ಅನುಭವ ಇದೆ. ಆ ದೃಷ್ಟಿಯಿಂದ ಕನ್ಸೆಷನ್ ಅನ್ನು ಕೊಟ್ಟೇ ಕೊಡುತ್ತಾರೆ ಎನ್ನುವ ಭರವಸೆಯಿಂದ ನಾವು ಇಲ್ಲಿ ಕುಳಿತಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡರು : ಮಾನ್ಯ ಅಧ್ಯಕ್ಷರೇ, ತಾವು ಈಗ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಅದು ನನ್ನ ಗಮನಕ್ಕೂ ಬಂದಿದೆ. ಪಾಪ, ನಾವು ಈ ವರದಿಗಾರರನ್ನು ದೂಷಣೆ ಮಾಡುವ ಹಾಗಿಲ್ಲ. ನಿನ್ನೆ ದಿವಸ ಇದು ನನ್ನ ಗಮನಕ್ಕೆ ಬಂದಿದೆ. ಬೆಳಿಗ್ಗೆ ಫೋನ್ ಮಾಡಿದರು. "ಮುಖ್ಯ ಕಾರ್ಯದರ್ಶಿ ಮಗಳಿಗೆ ಒಂದು ಕೋಟಿ ರೂ. ಸಾಲ" ಎಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ನಾನು ಹೇಳಿದ್ದು "1 ಕೋಟಿ ರೂಪಾಯಿ ಸಾಲ ಮಂಜೂರು ಮಾಡಿ. ಆ ಪ್ಲಾಟ್ ತೆಗೆದುಕೊಳ್ಳಲಿಕ್ಕೆ ಅಗ್ರಿಮೆಂಟ್ ಮಾಡಿಕೊಂಡರು" ಎಂದು. ಮುಖ್ಯ ಕಾರ್ಯದರ್ಶಿ ಮಗಳಿಗೆ 1 ಕೋಟಿ ರೂ. ಸಾಲ ಎಂದು ನಾನು ಹೇಳಿಲ್ಲ.

ಅವೊತ್ತು ಯಾವ ಅರ್ಥದಲ್ಲಿ ನಾನು ಹೇಳಿದೆ ಎಂದರೆ ತಮಗೆ ನೆನಪಿರಬಹುದು; ಲೋಕಾಯುಕ್ತ ಪೋಲೀಸರ ಬಗ್ಗೆ ಪ್ರಸ್ತಾಪ ಮಾಡುವಾಗ ಹೇಳಿದ್ದೇನೆ. ರೈಡ್ ಮಾಡಿದರೆ ಏನು ಮಾಡುತ್ತಾರೆ, ಯಾವ ಮಟ್ಟಕ್ಕೆ ಹೋಗುತ್ತಾರೆ ಎಂದರೆ ರಾಗಿ, ಅಕ್ಕಿ, ಬೇಳೆ, ತೆಂಗಿನಕಾಯಿ ಇರವುಗಳನ್ನು ಆರುನೂರು ರೂಪಾಯಿ ಎಂದು ಲೆಕ್ಕ ಹಾಕಿ ಯಾವುದೋ ಕಾಲದಲ್ಲಿ ತೆಗೆದುಕೊಂಡ ಸೈಟಿಗೆ ಇವೊತ್ತಿನ ಮಾರ್ಕೇಟ್ ರೇಟನ್ನು ಅವರೇ ಹಾಕುತ್ತಾರೆ. ಅವರೇ ಕಂಪ್ಲೆನೆಂಟ್ ಅವರೇ ಅಸೆಸೆರ್ಸ್, ಅವರೇ ಜಡ್ಜೆಸ್, ಈ ಲೆಕ್ಕದಲ್ಲಿ ಮಾಡುತ್ತಿದ್ದಾರೆ. ಮಾಡಿ ಬಿಟ್ಟು his assets are more than the known source of income ಎಂತ ಹೇಳಿ disproportionate ಸಸ್ಪೆಂಡ್ ಮಾಡಿ ಎಂದು ಸರ್ಕಾರದವರು ಸಸ್ಪೆಂಡ್ ಮಾಡುವುದು, ಆ ಅರ್ಥದಲ್ಲಿ ನಾನು ಹೇಳಿದ್ದು. ಕೆಲವು ವಿಚಾರದಲ್ಲಿ ನನ್ನ ಹತ್ತಿರ ಮಾಹಿತಿ ಇದೆ. ಯಾವುದಾದರೂ ಅಪಾದನೆ ಇದ್ದರೆ, ನೀವು ತನಿಖೆ ಮಾಡಿಸುವುದಾದರೆ ಸಿ.ಬಿ.ಐ.ದಿಂದ ಮಾಡಿಸಿ ಎಂದು ಹೇಳಿದೆ. ಇವೊತ್ತು ಏನಾಗಿದೆ ಎಂದರೆ ಇವರು ಸರ್ಕಾರದ ಕೈಕೆಳಗೆ ಕೆಲಸ ಮಾಡುತ್ತಾರೆ. ಲೋಕಾಯುಕ್ತದ ಕೈಕೆಳಗೆ ಅವರು ಕೆಲಸ ಮಾಡುವುದಿಲ್ಲ, ಯೂರು ಅಂದರೆ ಆ ಲೋಕಾಯುಕ್ತದಲ್ಲಿರುವ ಪೋಲಿಸರು ಯಾರದೋ ಹೆಸರನ್ನು ಮೆನ್ಷನ್ ಮಾಡಿದರು ಅಚ್ಚುತರಾವ್ ಎಂದು. ಯಾರದ್ದೋ ಸೀನಿಯಾರಿಟಿ ಮೇಲೆ ಅವರು ಇದ್ದರೆ, ಸರ್ಕಾರ ಅವರಿಗೆ ಸೀನಿಯಾರಿಟಿ ಕೊಡಬಾರದು ಎಂದು ಅನ್ನಿಸಿದರೆ ರೈಡ್ ಮಾಡಿಸಿ ಅವರ ಮೇಲೆ ಒಂದು ಕೇಸ್ ಬುಕ್ ಮಾಡಿಸಿಬಿಡೋದು; ಇದೆಲ್ಲಾ ಆಗುತ್ತದೆ. The other day I pleaded for re-instatement of Mr. Alexander.

ಈ ಅಲೆಕ್ಸ್ಯಾಂಡರ್‌ರವರನ್ನು ಸೇರಿಸಿ ಎನ್‌ಕ್ವೈರಿ ಮಾಡಿಸಿ ಎಂದು ನಂಜೇಗೌಡರು ಹೇಳಿದರು ಎಂದು ಬಂದಿದೆ. ನಾನು ಈ ಅರ್ಥದಲ್ಲಿ ಒಳ್ಳೆಯವರ ಫೈಲ್ ಇದೆ, ಕೆಟ್ಟವರ ಫೈಲ್ ಇದೆ, ಎಲ್ಲಾ ಫೈಲ್ ಇಡಿ. ಇದೇ ಸಭೆಯಲ್ಲಿ ಅವುಗಳನ್ನು ಪ್ಲೇಸ್ ಮಾಡಿ ಎಂದು ನಾನು ಹೇಳಿದೆ. ನಾನು ಯಾರ ಮೇಲೂ ಅಲೆಡ್ಜ್ ಮಾಡಲಿಲ್ಲ. About Guruprasad, I have information that he is a very honourable, dignified and a very honest officer.

ಆದ್ದರಿಂದ ತಾವು ದಯಮಾಡಿ ಸೂಚನೆಯನ್ನು ಪತ್ರಿಕೆಯವರಿಗೆ ಕೊಟ್ಟು ರೆಕ್ಟಿಫೈ ಮಾಡಿಸಿ. ವಿಚಾರಣೆಯನ್ನು ಮಾಡಿಸಿ ಎನ್ ಕ್ವೈಯರಿ ಮಾಡಿ ಅವರ ಮೇಲೆ

ಎಂದು ಹೇಳಲಿಲ್ಲ. ಆ ಕಡತಗಳನ್ನೆಲ್ಲಾ place it on the Table of the House ಎಂದು ಹೇಳಿದೆ.

Mr. Speaker : This itself is sufficient. They will take note of it.

ಖಾಸಗಿ ಕಾರ್ಯಕಲಾಪ

ಸಂಪೂರ್ಣ ಪಾನ ನಿರೋಧ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ್ ನಗರ) : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಈ ಸದನವು ನಿರ್ಣಯಿಸುತ್ತದೆ"

(ಪ್ರಸ್ತಾವ ಮಾಡಿಸಲ್ಪಟ್ಟಿತು)

ಶ್ರೀ ವಾಟಾಳ್ ನಾಗರಾಜ್ : ಈ ನಿರ್ಣಯವನ್ನು ಮಂಡಿಸತಕ್ಕಂಥ ಒಂದು ಪರಮ ಪವಿತ್ರವಾದ ಅವಕಾಶ ನನಗೆ ಹೊರೆತಿರುವುದಕ್ಕಾಗಿ ನಾನು ಬಹಳ ಸಂತೋಷ ಪಡುತ್ತಿದ್ದೇನೆ. ಹಾಗೂ ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈಗ ಬಹಳ ಜನ ಊಟ ಮಾಡದೇ ಇರುವುದರಿಂದ ಬಹಳ ಜನ ಸದಸ್ಯರು ಇದರ ಬಗ್ಗೆ ಅಷ್ಟಾಗಿ ಗಮನಹರಿಸಲು ಸಾಧ್ಯವಾಗುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದರಲ್ಲಿ ಪಟೇಲರು ಭಾಗವಹಿಸಬೇಕಾಗುತ್ತದೆ. ಹಾಗೂ ಮಾನ್ಯ ಮಿತ್ರರಾದ ಶ್ರೀ ನಾಣಯ್ಯನವರೂ ಮಾತನಾಡಬೇಕಾಗುತ್ತದೆ....

ಶ್ರೀ ಜೆ.ಹೆಚ್. ಪಟೇಲ್ : ಇದರ ಬಗ್ಗೆ ಏನೂ ಗೊತ್ತಿಲ್ಲದೇ ಇರುವ ನೀವೇ ರೆಸಲೂಷನ್ ತಂದಾಗ, ಸ್ವಲ್ಪ ಗೊತ್ತಿರುವ ನಾನು ಮಾತನಾಡದೆ ಇರಲು ಆಗುತ್ತದೆಯೇ? ಹಿಂದಿನ ವಿಧಾನ ಸಭೆಯಲ್ಲಿ ಸದಸ್ಯರು ಆಗಿದ್ದ, ಶ್ರೀ ಕೆ.ಹೆಚ್. ಶ್ರೀನಿವಾಸ್ರವರು ಇದೇ ನಿರ್ಣಯವನ್ನು ಚರ್ಚೆಗೆ ತಂದು ಆಗ ನಿರ್ಣಯವಾಗಿರತಕ್ಕಂಥದ್ದು ತಾವು ಗಮನಿಸಬೇಕು. ಮಾನ್ಯ ಸದಸ್ಯರು ಅವರ ವಿಚಾರಗಳನ್ನು ಇಡಲಿ. ಆದರೆ ಇವೊತ್ತು ಮಾತನಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಈಗಾಗಲೇ ಈ ನಿರ್ಣಯ ಮಂಡಿಸಿದ್ದೇನೆ. ಇದರ ಬಗ್ಗೆ ಚರ್ಚೆಯನ್ನು ನಾನು ಈಗಾಗಲೇ ಪ್ರಾರಂಭ ಮಾಡಿದ್ದೇನೆ. ಮುಂದೆ ಇದನ್ನು ಯಾವತ್ತು ಇಟ್ಟುಕೊಳ್ಳೋಣ ಎಂದು ನಿರ್ಧರಿಸುವುದು ತಮಗೆ ಬಿಟ್ಟಿದ್ದುದು.

ಶ್ರೀ ಎಂ.ಸಿ. ನಾಣಯ್ಯ : ಇದರ ಬಗ್ಗೆ ಚರ್ಚೆಯನ್ನು ರಾತ್ರಿ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಹಾಗೆಂದರೇನು? ಪ್ರಕಾಶ್ರವರ ಬಗ್ಗೆ ನನಗೆ ನಂಬಿಕೆ ಇತ್ತು. ಆದರೆ ಇವೊತ್ತು ಯಾರೂ ಇರುವುದಿಲ್ಲ ಎನ್ನುತ್ತಿದ್ದಾರೆ; ಏನಿದು? ಪಟೇಲರ ವಿಚಾರ ಬೇರೆ ಅವರು ಹೇಳಿದರೆ ಅದು ಸರಿಯಾಗಿ ಇರುತ್ತಿತ್ತು.

ಶ್ರೀ ಎಂ.ಪಿ. ಪ್ರಕಾಶ್ : ಎಂಟು ಗಂಟೆಗೆ ಎಲ್ಲರೂ ಸುಸ್ತಾಗಿರುತ್ತಾರೆ, ನಾನು ಆ ಅರ್ಥದಲ್ಲಿ ಹೇಳಿದೆ.

ಶ್ರೀ ಎಂ.ಸಿ. ನಾಣಯ್ಯ : ನನ್ನ ಮತ್ತು ವಾಟಾಳರ ಸಂಪರ್ಕ ಬಹಳ ವರ್ಷಗಳಿಂದ ಇದೆ. ನನ್ನ ಸಂಪರ್ಕವನ್ನು ಬೆಳೆಸಿದರೂ ಸಹ ಅವರು ಏತಕ್ಕೆ ಈ ತರಹ ಎಂಬುದು ನನಗೆ ಅರ್ಥವಾಗುತ್ತಿಲ್ಲ.